# ಅಖಿಲ ಭಾರತ ಪತ್ರಿಕೆ

## ಮೇ 2023



# ಆತ್ಮ ಸಮರ್ಪಣೆ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಪರಿಪೂರ್ಣವಾದ ಸಮರ್ಪಣೆಯು ಇರೆ, ಅದು ಅವರ ಬಲದ ಮೂಲ
ಅವರನರಿಯಲೆನೆ ತಲದ ಅಸ್ಮಿತೆಯು ಪಥದ ದರ್ಶನಕೆ ಕಾಲ,

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4  ಪುಟ 57)**

**ಅಖಿಲ ಭಾರತ ಪತ್ರಿಕೆ**

**ಮೇ 2023**

ಸಂಪುಟ: 33 ಸಂಚಿಕೆ: 05


## ಪರಿವಿಡಿ

# ಆತ್ಮ ಸಮರ್ಪಣೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಸಮರ್ಪಣೆ ಎಂದರೇನು** 5
ಅನು: ನಾಗಜ್ಯೋತಿ ಮಾನ್ವಿ

**ಸಮರ್ಪಣೆ ಮತ್ತು ಪರಿಶ್ರಮ** 11
ಅನು: ಕಿಶೋರಕುಮಾರ ಕಾಸಾರ

**ಸಮರ್ಪಣೆಯ ಪ್ರಕ್ರಿಯೆ** 18
ಅನು: ಡಾ॥ ಮಹಾದೇವ ಸಕ್ರಿ

**ಶ್ರೀಮಾತೆಗೆ ಸಮರ್ಪಣೆ** 42
ಅನು: ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 58
ಅನು: ಜಾನ್ವಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 70
ಅನು: ಡಾ॥ ಬಿ.ಆರ್. ಭೀಡ್

**ಶ್ರೀ ಅರವಿಂದರ ಕಾವ್ಯದಲ್ಲಿ 'ಸಮರ್ಪಣೆ'** 74
– ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 76



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಈ ಪೂರ್ಣ ಯೋಗವು ಆತ್ಮಸಮ್ಮತವಾದ ಅಭೀಪ್ಸೆಯ, ನಿರ್ಮಮಕಾರದ ಮತ್ತು ಸಮರ್ಪಣೆಗಳನ್ನು ಒಳಗೊಂಡ ತ್ರಿಗುಣ ಸ್ವರೂಪದ ಪರಿಶ್ರಮವನ್ನು ಅಪೇಕ್ಷಿಸುತ್ತದೆ. ಸಮರ್ಪಣೆ ಎನ್ನುವದು ಇಲ್ಲಿ ಪ್ರಾಮುಖ್ಯವಾದ ಸಂಗತಿಯಾಗಿದೆ. ಈಗಾಗಲೇ ಜನಜನಿತವಾಗಿರುವ ಚಿಂತನಗಳಿಗೆ ಇದು ವಿರೋಧದಂತೆ ಕಂಡುಬಂದರೂ, ಸಮರ್ಪಣೆಯು ತನಗೆ ತಾನೇ ಪರಿಪೂರ್ಣಗೊಳ್ಳುವ ಸಲುವಾಗಿ ಪರಿಶ್ರಮವನ್ನು ಅಪೇಕ್ಷಿಸುತ್ತದೆ. ಅದೂ ಅಲ್ಲದೇ ಪ್ರಗತಿಪೂರ್ವಕವಾಗಿಯೇ ಇದನ್ನು ಪುನರ್–ಸ್ಥಾಪನೆಗೊಳಿಸಿಕೊಳ್ಳುತ್ತದೆ.

ಪೂರ್ಣ ಯೋಗದ ಸಾಧನಾ ಪಥದಲ್ಲಿನ ಮೂಲಭೂತ ಸಂಚಲನದ ಸ್ವರೂಪವನ್ನು ಮತ್ತು ಆ ಸಂಗತಿಗಳು, ಸಂಚಲನಗಳು ಸಮರ್ಪಣೆಯಲ್ಲಿ ಆತ್ಮಸಾತ್ ಇಚ್ಛೆಯ ಮೂಲಕವೇ ಆ ವಿಶ್ವ ಮಾತೆಗೆ(ದೈವೀ ಮಾತೆಗೆ) ಸಮರ್ಪಣೆಯನ್ನು ಹೊಂದದೇ ಇದ್ದಲ್ಲಿ, ಆಗ ಈ ಪೂರ್ಣ ಯೋಗವು ಅಸಾಧ್ಯವಾಗುತ್ತದೆ. ಈ ಸಂಚಿಕೆಯನ್ನು ಈ ವಿಷಯಕ್ಕಾಗಿ ರೂಪಿಸಲಾಗಿದೆ. (ಏಐಎಮ್)

— — — — — — — — — — — — — — — —

## ಸಂಪಾದಕೀಯ

### ಸಮರ್ಪಣೆ ಮತ್ತು ಅಸ್ಮಿತೆ

ಸಮರ್ಪಣೆಯನ್ನು ಶರಣಾಗತಿ ಹಂತಕ್ಕೆ ತರುವದು ಎಂದರೆ, ಮಾನವನ ಅಸ್ತಿತ್ವಕ್ಕೆ ಧಕ್ಕೆ ತಂದುಕೊಂಡ ಹಾಗೆ ಆಗುತ್ತದೆ. ಶರಣಾಗತಿಯಲ್ಲಿ ಒಮ್ಮೊಮ್ಮೆ ಬದುಕು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸಂದರ್ಭವನ್ನು ಎದುರಿಸಬೇಕಾಗುತ್ತದೆ. ಎದುರಾಳಿ ರೂಪಿಸಬಹುದಾದ ಸೂತ್ರಗಳಿಗೆ ಒಪ್ಪಂದದಲ್ಲಿ ಸಾಗಬೇಕಾಗುತ್ತದೆ. ಒಪ್ಪಂದ ಎನ್ನುವದು ಅಸ್ಮಿತೆಯನ್ನು ಕಳದುಕೊಳ್ಳುವದು. ಬದುಕಿನ ಭಾವವಿದ್ದರೂ 'ಬದುಕೇ' ಇಲ್ಲದ ಸ್ಥಿತಿಯಲ್ಲಿರುವದಾಗಿದೆ. ಆದರೆ ಸಮರ್ಪಣೆಯಲ್ಲಿ 'ಎದುರಾಳಿ' ಎನ್ನುವ ಪ್ರಶ್ನೆಯೇ ಇರುವದಿಲ್ಲ. ವಿಧಾಯಕವಾಗಿಯೇ ಬದುಕಿನ ಮೂಲ ಧ್ಯೇಯವನ್ನು ತೋರಿಸಿ, ಆ ಎಡೆಗೆ ಮಾರ್ಗವನ್ನು ರೂಪಿಸಿ, ಜೊತೆಜೊತೆಗೆ

ಸಹವರ್ತಿಯಾಗಿಯೇ ಸಾಗುತ್ತ ರಕ್ಷಣೆಯನ್ನೂ ಒದಗಿಸುತ್ತಿರುವ 'ಆ ದಿವ್ಯ ಚೇತನ'ಕ್ಕೆ ಆತ್ಮಪೂರ್ವಕವಾಗಿ ನಮ್ಮನ್ನು ನಾವು ವಹಿಸಿಕೊಳ್ಳುವದೇ ಸಮರ್ಪಣೆಯಾಗಿದೆ. ಇಲ್ಲಿ ನಮ್ಮ ಅಸ್ತಿತ್ವದ ಅಸ್ಮಿತೆಯೂ ವಿಕಾಸಕ್ಕಾಗಿಯೇ ರೂಪಿಸಲ್ಪಟ್ಟಿದ್ದು, ಇಲ್ಲಿ ಆರೋಹಣಾ ಪಥದ ಮೂಲಕ ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತ ಸಾಗುತ್ತದೆ.

ಅಸ್ಮಿತೆಯನ್ನು ಕಾಪಾಡಿಕೊಂಡು ಆರೋಹಣಕ್ಕಿಳಿಯುವದು ಸಮರ್ಪಣೆ ಎಂದಾದಲ್ಲಿ, ಇಲ್ಲಿ ಹಂತಗಳೇನಾದರೂ ಇವೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಲ್ಲಿ ರೂಪಾಂತರಣದ ಹಂತದ ಪ್ರಕ್ರಿಯೆಗಳನ್ನು ಹಂತಗಳಂತೆ ಕಂಡರೂ, ಅದು ವಿಕಾಸದ ನಿಯತಿಯ ಸಾಕಾರವಾಗಿರುತ್ತವೆ. ಶಿಶುವಾಗಿದ್ದಾಗ ನೈಸರ್ಗಿಕವಾಗಿಯೇ ಸಮರ್ಪಣಾ ಮನೋಭಾವವೇ ಉಸಿರಾಗಿಸಿಕೊಂಡ ಜೀವವು, ತಾಯಿಯ ರಕ್ಷಣೆ, ಆರೈಕೆ, ಪೋಷಣೆ ಎಲ್ಲವನ್ನೂ ಪಡೆದುಕೊಳ್ಳುತ್ತದೆ. ಆದರೆ, ಕ್ರಮೇಣ ಕ್ರಮೇಣ 'ಜ್ಞಾನದ ವಿಕಾಸ'ದ ಪಥದಲ್ಲಿ ಸಾಗುತ್ತಿರುವಾಗ, 'ಅಹಂ' ತನವು ಮೇಲೆದ್ದು, ವ್ಯಕ್ತಿಗತ ದೃಷ್ಟಿಕೋನಗಳೇ ಸತ್ಯವೆನ್ನುವ ಸ್ವಭಾವ ತುಂಬಿಬಿಡುತ್ತದೆ. ಇದನ್ನೇ ಮಾಯೆಯನ್ನು ಆಧರಿಸಿಕೊಂಡ ಜ್ಞಾನದ ಸ್ಥಿತಿ ಎನ್ನುವದು. ಇಂತಹ ಅವಧಿಯಲ್ಲಿ, ಸಮರ್ಪಣೆ ಹೇಗಿರಬೇಕು ಎನ್ನುವದೂ ಸಹಿತ ಮುಖ್ಯವಾಗುತ್ತದೆ. ಶಿಶು ಸಹಜ ಸ್ಥಿತಿಯಲ್ಲಿ ಇರುವ ರಕ್ಷಣೆಯನ್ನೇ ಅದೇ ತಾಯಿಯು ಈಗಲೂ ಕೊಡಲು ಸಾಧ್ಯವಿಲ್ಲ. ಆದರೆ 'ಕಣ್ಣಳತೆಯಲ್ಲಿಯೇ ರಕ್ಷಣೆ'ಯನ್ನು ಮಾತ್ರ ಎಂದಿಗೂ ತಪ್ಪಿಸುವದಿಲ್ಲ. ಹೀಗಾಗಿ, ಇಲ್ಲಿ ರೂಪಣೆಗೊಳ್ಳುವ ಕರ್ತವ್ಯ ಅಥವಾ ಕರ್ಮದ ವಿನ್ಯಾಸದಲ್ಲಿ ತೊಡಗಿಕೊಳ್ಳುವ ಜೀವವು, ತನ್ನದೇ ಜಡ ಸ್ವರೂಪದ ದೇಹದ ವ್ಯವಸ್ಥೆಯ ಮೂಲಕವೇ ನಿಭಾಯಿಸಬೇಕಾಗಿರುವದರಿಂದ, ಅದರಲ್ಲೂ ಈ ಕರ್ತವ್ಯಕ್ಕೆ ಅಂತರಂಗದಲ್ಲಿರುವ ಚೇತನವೇ ಕಾರಣವಾಗಿರುವದರಿಂದ, ಆ ಚೇತನಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವದು ಸಮರ್ಪಣೆಯ ಮೂಲ ಮಂತ್ರವಾಗಿದೆ.

ಇದೇ ಭಾವದಲ್ಲಿಯೇ ಭೂಮಿಯು ತನ್ನ ಚೇತನಕ್ಕೆ ಕಾರಣವಾದ ಸೂರ್ಯನಲ್ಲಿ ಸಮರ್ಪಣೆಯಿಂದಲೇ ಚಲಿಸುತ್ತಿದೆ; ವೃಕ್ಷಗಳೂ ಸಹಿತ ಈ ಭೂಮಿಯನ್ನು ಆಧರಿಸಿಕೊಂಡಿದ್ದರೂ ವಿಕಾಸಕ್ಕಾಗಿ, ಆರೋಹಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಸೂರ್ಯನಿಗೆ ಸಮರ್ಪಣೆ ಮಾಡಿಕೊಂಡಿರುತ್ತವೆ. ನಮ್ಮ ದೇಹವೂ ಸಹಿತ ಅಂತರಂಗದಲ್ಲಿರುವ ಚೈತ್ಯಾತ್ಮಕ್ಕೇ ಸಮರ್ಪಣಾ ಮನೋಭಾವದಲ್ಲಿಯೇ

ಸ್ಪಂದಿಸುತ್ತಿರುತ್ತದೆ. ಆಂಗಿಕ ಅಭಿನಯಗಳೆಲ್ಲವೂ ಅಂತರಂಗದ ಅನುಸ್ಪಂದವೇ ಆಗಿದೆ ಎಂದರೆ, ಅಲ್ಲಿ ಈ ದೇಹ ಭಾವವು ಸಂಪೂರ್ಣವಾಗಿ–ನೈಸರ್ಗಿಕವಾಗಿ– ತನ್ನನ್ನು ತಾನೇ ಅಂತರಾತ್ಮಕ್ಕೇ ಸಮರ್ಪಣೆ ಮಾಡಿಕೊಂಡಿರುತ್ತದೆ.

ಈ ಸಮರ್ಪಣೆಯನ್ನು ಆತ್ಮಪೂರ್ವಕವಾಗಿ ಸಮರ್ಪಣೆ ಮಾಡಿಕೊಂಡೂ ತಮ್ಮದೇ ಅಸ್ಮಿತೆಯನ್ನು ಉಳಿಸಿಕೊಂಡು, ಪಥ ನಿರ್ಮಿಸಿರುವ ಅಪರೂಪದ ಉದಾಹರಣೆ ಹನುಮಂತ. ಅವನ ಹೃದಯಲ್ಲಿ ಇದ್ದದ್ದು ಶ್ರೀರಾಮ; ಅದೇ ರೀತಿಯಲ್ಲಿ ಆತ್ಮ ಸಮರ್ಪಣೆಯಲ್ಲಿಯೇ ರಾಧೆಯು ಕೃಷ್ಣನಲ್ಲಿ ಏಕೀಭವಿಸಿದ್ದಾಳೆ. ಆಧುನಿಕ ಘಟನಾವಳಿಗಳಲ್ಲಿಯೂ ಸಹಿತ, ಮೀರಾಬಾಯಿಯು ಕೃಷ್ಣನನ್ನೇ ಆರಾಧಿಸಿದ್ದು. ಅಕ್ಕಮಹಾದೇವಿ ತನ್ನನ್ನು ಚೆನ್ನ ಮಲ್ಲಿಕಾರ್ಜುನನಿಗೆ ಸಮರ್ಪಿಸಿಕೊಂಡದ್ದು ಇದೇ ಭಕ್ತಿಯ ಸ್ವರೂಪದಲ್ಲಿ. ಕರ್ಮ ಮಾರ್ಗದ ಪಥದಲ್ಲಿ ನಡೆದು ಸಮರ್ಪಣಾ ಪಥವನ್ನು ಗಟ್ಟಿಗೊಳಿಸಿದ ಹಲವಾರು ಘಟನೆಗಳಿವೆ. ಜ್ಞಾನ ಮಾರ್ಗದ ಮೂಲಕ, ಎಷ್ಟೇ ಅಡೆತಡೆ ಬಂದರೂ ಸಾಕ್ಷಾತ್ಕಾರದವರೆಗೂ ಎಲ್ಲವನ್ನೂ ಸಹನೆಯಿಂದ ಕಾಣುವ ಸಮರ್ಪಣಾ ಪಥವನ್ನು ಬುದ್ಧ ತೋರಿದ್ದಾನೆ.

ಇವೆಲ್ಲವೂ ಭೂ–ಬದುಕಿನ ಭಾವದ ವಿಕಾಸದ ಹಂತದಲ್ಲಿ ರೂಪಿತಗೊಂಡ ಮಹತ್ವದ ಘಟನಾವಳಿಗಳು. ಆದರೆ ಇದೀಗ ಈ 'ಸಮರ್ಪಣೆಯು' ಇನ್ನೊಂದು ಆಯಾಮದಲ್ಲಿ ವಿಕಾಸಗೊಳ್ಳುತ್ತಿದೆ. ನಮ್ಮ ಜ್ಞಾನದ ಪಥವು ಕೇವಲ ಭೂ–ಬದುಕಿನ ಪಥವು ಮಾತ್ರವಾಗಿರದೇ, ಅದು ಆ ಊರ್ಧ್ವದಿಂದ ಅಂದರೆ ಋತ–ಚೇತನದ ಅವತರಣದಿಂದಲೇ ಅನುಷ್ಠಾನಗೊಳ್ಳುತ್ತಿದೆ ಎನ್ನುವದನ್ನು ಸಾಕಾಷತ್ಕರಿಸಿಕೊಂಡ ಶ್ರೀ ಅರವಿಂದರ ಅಭಿಪ್ರಾಯದಂತೆ, ಇದು ಪೂರ್ಣ ಯೋಗದ ಸಾಧನಾ ಮಾರ್ಗದಲ್ಲಿ ಪ್ರಮುಖವಾಗಿರುವ ಅಂಶವಾಗಿದೆ. ಇಲ್ಲಿ ನಮ್ಮ ಅಂತರಂಗದಲ್ಲಿ ಸ್ಥಿತಗೊಂಡಿರುವ ಚೈತ್ಯಾತ್ಮವು ಆ ಋತ–ಚೇತನವನ್ನು ಮತ್ತೆ ಹೊಂದುವ ಆರೋಹಣಾ ಪಥದ ಯಾನದಲ್ಲಿ ಏಕಾಗ್ರತೆಯಿಂದ ಸಾಧನೆ ಮಾಡಬೇಕಾಗಿರುವ ವಿಧಾನವನ್ನು 'ಸಮರ್ಪಣಾ' ಎಂದು ಗುರುತಿಸಲಾಗಿದೆ. ಪ್ರಜ್ಞಾ ವಿಕಾಸನದ ಯುಗಯುಗಾಂತರಗಳ ಸುದೀರ್ಘ ಪಯಣದಲ್ಲಿ, ಅಲ್ಲಲ್ಲಿ ರೂಪಣೆಗೊಳ್ಳುವ ಆಯಾಮಗಳಲ್ಲಿ, ಈ 'ಆತ್ಮ ಸಮರ್ಪಣೆ'ಯೂ ಒಂದು ಮುಖ್ಯ ಸಂಗತಿಯಾಗಿದೆ. [ಪಿಪಿಕೆ]

# ಸಮರ್ಪಣೆ ಎಂದರೇನು

**– ಅನು: ನಾಗಜ್ಯೋತಿ ಮಾನ್ವಿ**

## ಯೋಗದ ಎರಡು ಮಾರ್ಗಗಳು

ಯೋಗದಲ್ಲಿ ಎರಡು ಮಾರ್ಗಗಳಿವೆ. ಒಂದು ತಪಸ್ಸು(ಶಿಸ್ತು) ಮತ್ತು ಇನ್ನೊಂದು 'ಆತ್ಮ ಸಮರ್ಪಣೆ'. ತಪಸ್ಸಿನ ಮಾರ್ಗ ಕಷ್ಟಕರವಾಗಿದೆ. ಇಲ್ಲಿ ನೀವು ಕೇವಲ ನಿಮ್ಮ ಮೇಲೆ ಅವಲಂಬಿತವಾಗಬೇಕಾಗಿರುತ್ತದೆ. ನಿಮ್ಮ ಸ್ವಂತ ಸಾಮರ್ಥ್ಯದಿಂದ ಮುಂದುವರಿಯುತ್ತೀರಿ. ನಿಮ್ಮ ಶಕ್ತಿಯ ಅಳತೆಗನುಗುಣವಾಗಿ ನೀವು ಬೆಳೆಯುತ್ತೀರಿ ಮತ್ತು ಸಾಧಿಸುತ್ತೀರಿ. ಕೆಳಗೆ ಬೀಳುವ ಅಪಾಯ ಯಾವಾಗಲೂ ಇರುತ್ತದೆ. ಮತ್ತು ಒಮ್ಮೆ ನೀವು ಬಿದ್ದರೆ, ಕಂದಕದಲ್ಲಿ ಬಿದ್ದಂತೆ. ಮೇಲೇಳುವ ಸಾಧ್ಯತೆಗಳು ಬಹಳ ಕಡಿಮೆ. ಇನ್ನೊಂದು ಮಾರ್ಗ ಅದು ಆತ್ಮ ಸಮರ್ಪಣೆಯದು, ಸುರಕ್ಷಿತ ಮತ್ತು ಖಚಿತವಾದುದು. ಇಲ್ಲಿ ಪಾಶ್ಚಿಮಾತ್ಯರಿಗೆ ಇದು ಕಷ್ಟಕರವೆಂದೆನಿಸುತ್ತದೆ. ವೈಯಕ್ತಿಕ ಸ್ವಾವಲಂಬನೆಗೆ ಧಕ್ಕೆ ತರುವಂತಹ ಎಲ್ಲದಕ್ಕೂ ಭಯಪಡುವದನ್ನು ಮತ್ತು ತಿರಸ್ಕರಿಸುವದನ್ನು ಅವರು ಕಲಿತಿದ್ದಾರೆ. ತಾಯಿಯ ಹಾಲಿನಷ್ಟೇ ಸಹಜವಾದ ವೈಯಕ್ತಿಕತೆಯ ಭಾವವನ್ನು ಅಳವಡಿಸಿಕೊಂಡಿದ್ದಾರೆ. ಆತ್ಮ ಸಮರ್ಪಣೆಯೆಂದರೆ ಏನಿದೆಯೋ ಎಲ್ಲವನ್ನೂ ಕೊಡುವುದು. ಇನ್ನೊಂದು ರೀತಿಯಲ್ಲಿ ಹೇಳುವದಾದರೆ ರಾಮಕೃಷ್ಣರು ಹೇಳಿದಂತೆ, ಕೋತಿಯ ಮರಿಯ ರೀತಿಯ ಮಾರ್ಗ ಅಥವಾ ಬೆಕ್ಕಿನ ಮರಿಯ ರೀತಿಯ ಮಾರ್ಗವನ್ನು ನೀವು ಅನುಕರಿಸಬಹುದು. ಕೋತಿಯ ಮರಿಯು ತಾನು ಮುಂದೆ ಹೋಗಲು ತಾಯಿಯನ್ನು ಹಿಡಿದಿರಬೇಕಾಕುತ್ತದೆ. ಮತ್ತು ಗಟ್ಟಿಯಾಗಿ ಹಿಡಿಯಬೇಕಾಗುತ್ತದೆ. ಒಂದುವೇಳೆ ಅದು ತನ್ನ ಹಿಡಿತವನ್ನು ಬಿಟ್ಟರೆ, ಅದು ಕೆಳಗೆ ಬೀಳುತ್ತದೆ. ಇನ್ನೊಂದು ಮಾರ್ಗದಲ್ಲಿ ಬೆಕ್ಕಿನ ಮರಿಯು ತನ್ನ ತಾಯಿಯನ್ನು ಹಿಡಿದಿರುವದಿಲ್ಲ. ಅದು ತನ್ನ ತಾಯಿಯಿಂದ ಹಿಡಿಯಲ್ಪಟ್ಟಿರುತ್ತದೆ. ಮತ್ತು ಅದಕ್ಕೆ ಯಾವುದೇ ಭಯವಾಗಲೀ ಜವಾಬ್ದಾರಿಯಾಗಲೀ ಇರುವದಿಲ್ಲ: ತನ್ನ ತಾಯಿಯು ಹಿಡಿದುಕೊಳ್ಳಲು ಬಿಡುವುದು ಮತ್ತು ಮಾ, ಮಾ ಎಂದು ಅಳುವದನ್ನು ಬಿಟ್ಟು ಅದು ಮಾಡುವುದು ಏನೂ ಇಲ್ಲ.

ನೀವು ಸಮರ್ಪಣೆಯ ಮಾರ್ಗವನ್ನು ಪೂರ್ಣವಾಗಿ ಮತ್ತು ಪ್ರಾಮಾಣಿಕವಾಗಿ ತೆಗೆದುಕೊಂಡರೆ ಅಲ್ಲಿ ಯಾವುದೇ ಅಪಾಯ ಅಥವಾ ಗಂಭೀರ ಕಷ್ಟ ಇರುವದಿಲ್ಲ. ಇಲ್ಲಿ ಪ್ರಶ್ನೆಯೆಂದರೆ ಪ್ರಾಮಾಣಿಕವಾಗಿರುವುದು.

ನೀವು ಪ್ರಾಮಾಣಿಕವಾಗಿಲ್ಲದಿದ್ದರೆ ಯೋಗವನ್ನು ಅನುಭವಿಸಲೇಬೇಡಿ. ನೀವು ಮಾನವ ಸಂಬಂಧದಲ್ಲಿ ವ್ಯವಹರಿಸುತ್ತಿದ್ದರೆ, ಆಗ ನೀವು ಮೋಸ ಹೋಗುತ್ತೀರಿ: ಆದರೆ ದೈವದೊಂದಿಗೆ ವ್ಯವಹರಿಸುವಾಗ ಎಲ್ಲಿಯೂ ಮೋಸ ಹೋಗುವ ಸಾಧ್ಯತೆಯೇ ಇಲ್ಲ. ನೀವು ಬಿಚ್ಚುಮನ ಮತ್ತು ಮೂಲಕ್ಕೆ ತೆರೆದುಕೊಂಡಲ್ಲಿ ಮತ್ತು ನಿಮ್ಮ ಏಕಮಾತ್ರ ಕೊನೆಯ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಮತ್ತು ಹೊಂದುವುದು ಮತ್ತು ದೈವದಿಂದಲೇ ಚಲಿಸಲ್ಪಡುವುದು ಎಂದಾದಾಗ ನೀವು ಈ ಮಾರ್ಗದಲ್ಲಿ ಸುರಕ್ಷಿತವಾಗಿ ಮುಂದೆ ಸಾಗುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/4–5**

**ದೈವನಿಗೆ ನಿಮ್ಮನ್ನು ನೀವು ಸಂಪೂರ್ಣವಾಗಿ ಕೊಟ್ಟುಕೊಳ್ಳಿ**

ದೈವನಿಗೆ ನಿಮ್ಮನ್ನು ನೀವು ಸಂಪೂರ್ಣವಾಗಿ ಕೊಟ್ಟುಕೊಂಡರೆ, ಯೋಗ ಮಾಡುವವನು 'ಆತನೇ' ಆಗಿರುತ್ತಾನೆ; ಇನ್ನು ಅದು ಅಷ್ಟೊಂದು ಬಹಳ ಕಠಿಣವಾಗಿರುವದಿಲ್ಲ; ಆದರೆ ತಪಸ್ಸಿನಲ್ಲಿ ಯೋಗ ಮಾಡುವವರು ನೀವೇ ಆಗಿರುತ್ತೀರಿ. ಮತ್ತು ಇಡೀ ಜವಾಬ್ದಾರಿಯು ನಿಮ್ಮ ಮೇಲೆಯೇ ಇರುತ್ತದೆ. ಇಲ್ಲಿ ಅಪಾಯದ ಸಾಧ್ಯತೆಯಿರುತ್ತದೆ. ಆದರೆ ಕೆಲವು ಜನರು ಅದರ ಅಪಾಯಗಳೊಂದಿಗೆ ಇಡೀ ಜವಾಬ್ದಾರಿಯನ್ನು ಪಡೆಯಲು ಪ್ರಾಧಾನ್ಯತೆಯನ್ನು ನೀಡುತ್ತಾರೆ. ಏಕೆಂದರೆ ಅವರು ವೈಯಕ್ತಿಕತೆಯ ಮನೋಭಾವ ಹೊಂದಿರುತ್ತಾರೆ. ಬಹುಶಃ ಅವರು ಅವಸರದಲ್ಲಿರುವದಿಲ್ಲ. ಯಶಸ್ವಿಯಾಗಲು ಹಲವಾರು ಜನ್ಮಗಳ ಅವಶ್ಯಕವಿದ್ದರೂ, ಅದು ಅವರಿಗೆ ಮಹತ್ವವಾದುದೇನಲ್ಲ. ಆದರೆ ಇನ್ನೂ ಕೆಲವರಿದ್ದಾರೆ ಅವರು ಶೀಘ್ರವಾಗಿ ಹೋಗಲು ಬಯಸುತ್ತಾರೆ. ಮತ್ತು ತಮ್ಮ ಗುರಿಯನ್ನು ಮುಟ್ಟುವ ಖಚಿತತೆಯಿಂದಿರುತ್ತಾರೆ; ಒಳ್ಳೆಯದು, ಇವರು ತಮ್ಮ ಇಡೀ ಜವಾಬ್ದಾರಿಯನ್ನು ದೈವನಿಗೆ ಕೊಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/72**

**ನಮ್ಮ ಜೀವನವನ್ನು ದೈವನಿಗೆ ಕೊಟ್ಟುಕೊಳ್ಳುವ ನಿರ್ಧಾರ**

ಆತ್ಮ ಸಮರ್ಪಣೆಯೆಂದರೆ ನಮ್ಮ ಜೀವನದ ಜವಾಬ್ದಾರಿಯನ್ನು ದೈವನಿಗೆ ಕೊಡುವ ನಿರ್ಧಾರವಾಗಿದೆ. ಈ ನಿರ್ಧಾರವಿಲ್ಲದೆ ಏನೂ ಸಾಧ್ಯವಿಲ್ಲ ನೀವು ಆತ್ಮ

ಸಮರ್ಪಣೆ ಮಾಡದಿದ್ದರೆ ಯೋಗ ಮಾಡುವ ಪ್ರಶ್ನೆಯೇ ಇರುವದಿಲ್ಲ. ಉಳಿದುದೆಲ್ಲವೂ ಇದರ ನಂತರ ಸಹಜವಾಗಿ ಬರುತ್ತದೆ. ಇಡೀ ಪ್ರಕ್ರಿಯೆಯೇ ಆತ್ಮ ಸಮರ್ಪಣೆಯಿಂದ ಆರಂಭವಾಗುತ್ತದೆ. ನೀವು ಜ್ಞಾನದ ಮೂಲಕ ಅಥವಾ ಭಕ್ತಿಯ ಮೂಲಕವಾದರೂ ಆತ್ಮ ಸಮರ್ಪಣೆ ಮಾಡಬಹುದು. ದೈವ ಮಾತ್ರವೇ ಏಕಮೇವ ಸತ್ಯ ಎಂಬ ಧೃಡವಾದ ಅಂತಃಪ್ರಜ್ಞೆಯಿರಬೇಕು ಮತ್ತು ದೈವವಿಲ್ಲದೆ ನಾನು ಏನನ್ನೂ ನಿರ್ವಹಿಸಲಾರೆ ಎಂಬ ಪ್ರಕಾಶಮಾನವಾದ ನಿರ್ಣಯ ಕೈಗೊಂಡಿರಬೇಕು ಅಥವಾ ಇದೊಂದೆ ಮಾರ್ಗದಲ್ಲಿ ಹೋಗುವುದೇ ಸಂತೋಷದಾಯಕ ಎಂಬ ಸಹಜವಾದ ಭಾವನೆಯಿರಬೇಕು. ಪ್ರತ್ಯೇಕವಾಗಿ ದೈವನಿಗೆ ಮಾತ್ರ ಸೇರುವ ಒಂದು ಬಲವಾದ ಚೈತ್ಯ ಪುರುಷನ ಆಸೆಯಿರಬೇಕು. “ನಾನು ನನಗೆ ಮಾತ್ರ ಸೇರಿದವನಲ್ಲ” ಎಂದು ಹೇಳಿ ಮತ್ತು ನಿಮ್ಮ ಅಸ್ತಿತ್ವದ ಜವಾಬ್ದಾರಿಯನ್ನು”ಸತ್ಯ”ಕ್ಕೆ ಕೊಡುತ್ತೀರಿ. ಆಗ ಸ್ವ–ಅರ್ಪಣೆಯ ಸಮಯ ಬರುತ್ತದೆ. “ನಾನು ಹೀಗಿರುವೆ. ಒಳ್ಳೆಯ ಮತ್ತು ಕೆಟ್ಟ, ಕತ್ತಲೆಯ ಮತ್ತು ಜ್ಞಾನೋದಯದಿಂದ ಕೂಡಿದ, ವೈವಿದ್ಯ ಗುಣಗಳಿಂದ ಆವರಿಸಲ್ಪಟ್ಟ ಜೀವಿಯಾಗಿದ್ದೇನೆ. ನಾನು ಏನಿದ್ದೆನೋ ಅದನ್ನು ನಿನಗೆ ಅರ್ಪಿಸಿಕೊಳ್ಳುತ್ತೇನೆ. ನನ್ನ ಎಲ್ಲಾ ಏಳುಬೀಳುಗಳೊಂದಿಗೆ ದ್ವಂದ್ವದ ಉದ್ವೇಗಗಳು ಮತ್ತು ಪ್ರವೃತ್ತಿಗಳೊಂದಿಗೆ ನನ್ನನ್ನು ಮೇಲೆತ್ತು – ನನ್ನೊಂದಿಗೆ ನಿನ್ನ ಮನ ಬಂದಂತೆ ಮಾಡು.” ನಿಮ್ಮ ಸ್ವ–ಅರ್ಪಣೆಯ ಕ್ರಮದಲ್ಲಿ ನೀವು ಮೊದಲು ನಿರ್ಧಾರ ಕೈಗೊಂಡ – ಕೇಂದ್ರ ಚೈತನ್ಯ ಪುರುಷನ ಸಂಕಲ್ಪದ ಸುತ್ತಲೂ ನಿಮ್ಮ ಸತ್ತೆಯು ಏಕೀಕರಿಸುವದನ್ನು ಆರಂಭಿಸುತ್ತೀರಿ. ನಿಮ್ಮ ಪ್ರಕೃತಿಯ ಎಲ್ಲ ದ್ವಂದ್ವದ ಅಂಶಗಳನ್ನು ಸಾಮರಸ್ಯಗೊಳಿಸಬೇಕಾಗುತ್ತದೆ. ಅವನ್ನು ಒಂದಾದ ನಂತರ ಒಂದನ್ನು ತೆಗೆದುಕೊಂಡು ಕೇಂದ್ರ ಸತ್ತೆಯೊಡನೆ ಏಕೀಕರಿಸಬೇಕಾಗುತ್ತದೆ. ನೀವು ಸಹಜವಾದ ಚಲನೆಯೊಂದಿಗೆ ದೈವನಿಗೆ ನಿಮ್ಮನ್ನು ನೀವು ಅರ್ಪಿಸಿಕೊಳ್ಳಬಹುದು. ಆದರೆ ಈ ಏಕೀಕರಣವಾಗದ ಹೊರತು ನಿಮ್ಮನ್ನು ನೀವು ಪರಿಣಾಮಕಾರಿಯಾಗಿ ಕೊಟ್ಟುಕೊಳ್ಳಲಾರಿರಿ. ನೀವು ಹೆಚ್ಚು ಏಕೀಕೃತಗೊಂಡಂತೆ, ನೀವು ಹೆಚ್ಚು ಸ್ವ–ಅರ್ಪಣೆಯನ್ನು ಸಾಧಿಸಲು ಯೋಗ್ಯರಾಗುತ್ತೀರಿ. ಮತ್ತು ಒಮ್ಮೆ ಸ್ವ–ಅರ್ಪಣೆಯು ಸಂಪೂರ್ಣವಾದಂತೆ, ಸಮರ್ಪಣೆಯು ಮುಂದುವರಿಯುತ್ತದೆ. ಇದು ಸಾಕ್ಷಾತ್ಕಾರ ಪ್ರಕ್ರಿಯೆಯ ಕಿರೀಟವಾಗಿದೆ. ಇದು ಮೇಲೇರುವ ಶ್ರೇಣಿಯ ಕೊನೆಯ ಹೆಜ್ಜೆಯಾಗಿದೆ. ಇದಾದ ನಂತರ ಮತ್ತಾವ ತೊಂದರೆಗಳು ಇರುವದಿಲ್ಲ. ಎಲ್ಲವೂ

ಮೃದುವಾಗಿ ಸಾಗುತ್ತದೆ. ನಾವು ಏಕಕಾಲದಲ್ಲಿಯೇ ಸಮಗ್ರವಾಗಿ ಸಮರ್ಪಣೆಯನ್ನು ಮಾಡಲಾಗುವದಿಲ್ಲ ಎಂಬ ವಿಷಯವನ್ನು ಉತ್ಕಟತೆಯಿಂದ ಕೂಡಿದ ಸಮರ್ಪಣೆಯನ್ನು ಮಾಡಿ, ನಾನು ಸಮಗ್ರವಾಗಿ ಸಮರ್ಪಣೆಯನ್ನು ಮಾಡಿರುವೆನೆಂಬ ಭ್ರಮೆಯಲ್ಲಿರಬಹುದು. ಇದಾದ ನಂತರ ಎಲ್ಲವೂ ಸ್ವಯಂಚಾಲಿತವಾಗಿ ನಡೆಯುತ್ತದೆ ಎಂಬ ಭರವಸೆಯು ಹುಟ್ಟುತ್ತದೆ. ಆದರೆ ಸ್ವಲ್ಪವೇ ಅಜಾಗರೂಕತೆಯು ನಮ್ಮ ಪ್ರಗತಿಯನ್ನು ವಿಳಂಬಗೊಳಿಸುತ್ತದೆ. ಆದರೆ ನಮ್ಮ ಅಸ್ತಿತ್ವವು ಅನೇಕ ಪ್ರವೃತ್ತಿಗಳಿಂದ ಕೂಡಿದ್ದು ಅವು ಒಂದರ ವಿರುದ್ಧ ಇನ್ನೊಂದು ಹೋರಾಡುತ್ತಿರುತ್ತವೆ. ಅವುಗಳದೇ ಆದ ವಿವಿಧ ವ್ಯಕ್ತಿತ್ವಗಳಿಂದ ಕೂಡಿರುತ್ತವೆ ಎಂದು ಹೇಳಬಹುದು. ಇದರಲ್ಲಿಯ ಒಂದು ವ್ಯಕ್ತಿತ್ವವು ತನ್ನನ್ನು ತಾನು ದೈವಕ್ಕೆ ಅರ್ಪಿಸಿಕೊಂಡರೆ, ಬೇರೆಯವುಗಳು ತಮ್ಮ ಒಪ್ಪಿಗೆಯನ್ನು ತಿರಸ್ಕರಿಸುತ್ತವೆ. "ನಮ್ಮನ್ನು ನಾವು ಅರ್ಪಿಸಿಕೊಂಡಿಲ್ಲ" ಎಂದು ಕೂಗುತ್ತವೆ. ಮತ್ತು ತಮ್ಮ ವೈಯಕ್ತಿಕತೆ ಮತ್ತು ವ್ಯಕ್ತಪಡಿಸುವಿಕೆಗಾಗಿ ಕೂಗಾಡಲಾರಂಭಿಸುತ್ತವೆ. ಆಗ ಅವುಗಳನ್ನು ಶಾಂತಗೊಳಿಸಲು ಪ್ರಯತ್ನಿಸಿ ಮತ್ತು ಸತ್ಯವನ್ನು ತೋರಿಸಿ. ನಿಮ್ಮ ಇಡೀ ಸತ್ತೆಯನ್ನು ತಾಳ್ಮೆಯಿಂದ ಎಲ್ಲಾ ಮೂಲೆಗಳಲ್ಲಿ ಸುತ್ತಾಡಿ ಅನ್ವೇಷಿಸಿ ನಿಮ್ಮಲ್ಲಿರುವ ಎಲ್ಲಾ ಅಜಾಗರೂಕತೆಯಿಂದ ಕೂಡಿದ ಅಂಶಗಳು ಯಾವುದೇ ಮಾನಸಿಕ ಕ್ಷಣದಲ್ಲಿ ಹೊರಬರಲು ಕಾಯುತ್ತಿರುವದನ್ನು ಎದುರಿಸಬೇಕಾಗುತ್ತದೆ. ಯಾವಾಗ ನಾವು ಮನ, ಪ್ರಾಣ, ದೇಹ ಪ್ರಕೃತಿಯ ಎಲ್ಲಾ ಅಂಶಗಳು ದೈವತ್ವಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳುವಂತೆ ಮನವೊಲಿಸಿ ಮತ್ತು ಸಂಪೂರ್ಣ ಸಮಗ್ರತೆಯಿಂದ ಕೂಡಿದ ಸಮರ್ಪಣೆಯನ್ನು ಸಾಧಿಸಿದಾಗ ಮಾತ್ರ ನಿನ್ನ ಎಲ್ಲಾ ತೊಂದರೆಗಳನ್ನು ಕೊನೆಗೊಳಿಸಬಹುದು. ಆಗ ಅವಶ್ಯವಾಗಿ ರೂಪಾಂತರಣದೆಡೆಗೆ ಭವ್ಯವಾಗಿ ಚಲಿಸಬಹುದು. ನೀವು ಕತ್ತಲೆಯಿಂದ ಜ್ಞಾನದೆಡೆಗೆ ಹೋಗುವುದಿಲ್ಲ. ಬದಲಾಗಿ ಜ್ಞಾನದಿಂದ ಜ್ಞಾನದೆಡೆಗೆ, ಬೆಳಕಿನಿಂದ ಬೆಳಕಿನೆಡೆಗೆ, ಸಂತೋಷದಿಂದ ಸಂತೋಷದೆಡೆಗೆ ಹೋಗುತ್ತೀರಿ. ನಿಸ್ಸಂದೇಹವಾಗಿ ಸಂಪೂರ್ಣ ಸಮರ್ಪಣೆ ಎಂಬುದು ಸುಲಭದ ವಿಷಯವಲ್ಲ ಮತ್ತು ಇದೆಲ್ಲವನ್ನು ನಿಮ್ಮಿಷ್ಟಕ್ಕೆ ನೀವೇ ಮಾಡಬೇಕೆಂದಿದ್ದರೆ, ನಿಮ್ಮ ಸ್ವಂತ ವೈಯಕ್ತಿಕ ಪ್ರಯತ್ನದಿಂದ ಮಾಡುವಂತಿದ್ದರೆ ಇದು ಅನಿರ್ಧಿಷ್ಟವಾಗಿ ಬಹು ಸಮಯವನ್ನು ತೆಗೆದುಕೊಳ್ಳುತ್ತಿತ್ತು. ಆಗ ದೈವೀ ಕೃಪೆ ನಿಮ್ಮ ಮೇಲಿರುವಾಗ ಅದು ಹಾಗಾಗಲಾರದು. ದೈವನಿಂದ ಈಗ ಮತ್ತು ಆಗ ಒಂದು ಚಿಕ್ಕ ತಳ್ಳುವಿಕೆಗೆ ಈ ದಿಕ್ಕಿನೆಡೆಗಿನ ಒಂದು ಚಿಕ್ಕ ತಳ್ಳುವಿಕೆಯು

ಕೆಲಸವನ್ನು ಬಹಳಷ್ಟು ಸುಲಭವನ್ನಾಗಿಸುತ್ತದೆ. ಖಂಡಿತವಾಗಿಯೂ ಸಮಯ ತೆಗೆದುಕೊಳ್ಳುವಿಕೆಯು ಪ್ರತಿಯೊಂದು ವ್ಯಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ನೀವು ನಿಜವಾಗಿ ಧೃಢ ನಿರ್ಧಾರ ಕೈಗೊಂಡರೆ ಇವನ್ನು ಬಹಳಷ್ಟು ಸಂಕುಚಿಸಬಹುದು. ಧೃಢ ನಿರ್ಧಾರವು ಬೇಕಾದ ಒಂದು ಅಂಶವಾಗಿದ್ದು ಧೃಢ ನಿರ್ಧಾರವು ಮುಖ್ಯವಾದ ಬೀಗದ ಕೈಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/126–27**

**ಆತ್ಮ ಸಮರ್ಪಣೆ ಮತ್ತು ಅರ್ಪಣೆ**

*ಅರ್ಪಣೆಯೆಂದರೆ ಆತ್ಮ ಸಮರ್ಪಣೆಯೆಂದಾಗುವದಿಲ್ಲವೇ?*

ಇಲ್ಲವೇ ಇಲ್ಲ. ಆತ್ಮ ಸಮರ್ಪಣೆಯೆಂಬ ಯಾವುದೇ ವಿಚಾರವಿಲ್ಲದೆ ಕೊಟ್ಟುಕೊಳ್ಳುವಿಕೆಯಲ್ಲಿನ ಸಂತೋಷಕ್ಕಾಗಿ ನೀವು ಕೊಟ್ಟುಕೊಳ್ಳಬಹುದು. ಉತ್ಸಾಹದ ಚಲನೆಯಲ್ಲಿ ನಿಮಗಿಂತಲೂ ಅನಂತವಾದ ಏನೋ ವೊಂದರ ಮಿಂಚಿನ ನೋಟ ಕಂಡಾಗ ಹಠಾತ್ತಾಗಿ ನಿಮ್ಮನ್ನು ನೀವು ಕಂಡುಕೊಳ್ಳಬಹುದು. ಆದರೆ ಇದು ಆ ರೀತಿಯಾಗಿ ಪ್ರತಿ ನಿಮಿಷ ಬದುಕುವ ಪ್ರಶ್ನೆ ಬಂದಾಗ ಉನ್ನತ 'ಸಂಕಲ್ಪ'ಕ್ಕೆ ಪ್ರತಿ ನಿಮಿಷ ಆತ್ಮ ಸಮರ್ಪಿಸಿಕೊಳ್ಳುವಾಗ ಇದು ಬಹಳ ಕಷ್ಟಕರವಾಗಿರುತ್ತದೆ. ಆದರೆ 'ಅರ್ಪಣೆ'ಯು ಅಂದರೆ ನಿಮ್ಮ ಎಲ್ಲಾ ಚಲನೆಗಳ ಎಲ್ಲಾ ಚಟುವಟಿಕೆಗಳ ಸಮಗ್ರ ಅರ್ಪಣೆಯು ಆತ್ಮ ಸಮರ್ಪಣೆಗೆ ಸಮವಾಗಿರುತ್ತದೆ. ಇದನ್ನು ಅವಶ್ಯವಾಗಿ ಉಲ್ಲೇಖಿಸಬೇಕಿಲ್ಲ. ಆದರೆ ಇದು ಉತಾಹದಲ್ಲಿ ಮಾಡುವ ಚಲನೆಯಾಗಿ ಉಳಿದಿರುವದಿಲ್ಲ, ವಿವರವಾಗಿ ಸಾಕ್ಷಾತ್ಕರಿಸಿಕೊಳ್ಳುವದಾಗಿರುತ್ತದೆ. ನೀವು ಹೇಳಬಹುದು ಭಾವೋದ್ರಿಕ್ತ ಉತ್ಸಾಹದ ಮತ್ತು ಉತ್ಸಾಹದಲ್ಲಿ ಮಾಡುವ ಯಾವುದೇ ಚಲನೆ ಸಾಪೇಕ್ಷವಾಗಿ ಸುಲಭವಾಗಿರುತ್ತದೆ. (ನಮ್ಮಲ್ಲಿನ ತೀವ್ರತೆಯ ಮೇಲೆ ಅದು ನಿರ್ಧಾರವಾಗಿರುತ್ತದೆ.) ಆದರೆ ಇದು ಒಬ್ಬರ ಜೀವನದ ಪ್ರತಿಯೊಂದು ನಿಮಿಷದ ಮತ್ತು ಇದರ ಎಲ್ಲಾ ವಿವರದೊಂದಿಗೆ ತಮ್ಮ ಅಭೀಪ್ಸೆಯನ್ನು ಸಾಕ್ಷಾತ್ಕರಿಕೊಳ್ಳಬೇಕಾದಾಗ, ಉತ್ಸಾಹವು ಸ್ವಲ್ಪ ಹಿಂದುಳಿಯುತ್ತದೆ ಮತ್ತು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/134**

## ಆತ್ಮ ಸಮರ್ಪಣೆ ಮತ್ತು ತ್ಯಾಗ

ನಮ್ಮ ಯೋಗದಲ್ಲಿ ತ್ಯಾಗಕ್ಕೆ ಯಾವುದೇ ಸ್ಥಾನವಿಲ್ಲ. ಆದರೆ ಶಬ್ದಕ್ಕೆ ಯಾವ ಅರ್ಥ ನೀಡುತ್ತೀರಿ ಎಂಬುದರ ಮೇಲೆ ಎಲ್ಲವೂ ಅವಲಂಬಿತವಾಗಿರುತ್ತದೆ. ಇದರ ನಿಜವಾದ ಅರ್ಥವು ದೈವನಿಗೆ ಪವಿತ್ರವಾದ ಕೊಟ್ಟುಕೊಳ್ಳುವಿಕೆಯಾಗಿದೆ. ಪವಿತ್ರವಾದುದನ್ನು ಮಾಡುವದಾಗಿದೆ. ಆದರೆ ಆ ಶಬ್ದದ ಅರ್ಥವೇನೆಂದರೆ, ತ್ಯಾಗವೆಂದರೆ ಮಮಕಾರರಹಿತರಾಗಿ ಕೆಲಸ ಮಾಡುವಂತಹುದು; ಇದು ನಿರಾಕರಣೆಯ ವಾತಾವರಣದ ಅರ್ಥ ನೀಡುತ್ತದೆ. ಈ ರೀತಿಯ ತ್ಯಾಗವು ನೆರವೇರಿಕೆಯಲ್ಲ ಇದೊಂದು ಅಭಾವವಾಗಿದೆ. ಒಂದು ಆತ್ಮಾಹುತಿಯಾಗಿದೆ. ನಿಮ್ಮ ವ್ಯಕ್ತಿತ್ವದ ಎಲ್ಲಾ ಸಾಧ್ಯತೆಗಳನ್ನು ಅತಿ ಭೌತಿಕದಿಂದ ಹಿಡಿದು ಉನ್ನತ ಆಧ್ಯಾತ್ಮಿಕ ಶ್ರೇಣಿಯ ಸಾಧ್ಯತೆ ಮತ್ತು ಸಾಕ್ಷಾತ್ಕಾರಗಳನ್ನು ತ್ಯಾಗ ಮಾಡುವದಾಗಿದೆ. ತ್ಯಾಗವು ನಿಮ್ಮ ಸತ್ತೆಯನ್ನು ಚಿಕ್ಕದಾಗಿಸುತ್ತದೆ. ದೈಹಿಕವಾಗಿ ನೀವು ನಿಮ್ಮ ಜೀವನ, ನಿಮ್ಮ ದೇಹವನ್ನು ತ್ಯಾಗಮಾಡಿದರೆ, ನೀವು ಭೌತಿಕ ಸ್ತರದ ಎಲ್ಲಾ ಸಾಧ್ಯತೆಗಳನ್ನು ಬಿಟ್ಟಿದ್ದೀರಿ, ನಿಮ್ಮ ಪೃಥ್ವಿಯ ಅಸ್ತಿತ್ವದ ಸಾಧನೆಯನ್ನು ಸಾಧಿಸಿಲ್ಲ ಎಂದಾಗುತ್ತದೆ.

ಅದೇ ರೀತಿಯಾಗಿ ನಿಮ್ಮ ಜೀವನವನ್ನು ನೈತಿಕವಾಗಿ ತ್ಯಾಗ ಮಾಡಬಹುದು; ನಿಮ್ಮ ಅಂತರಂಗ ಅಸ್ತಿತ್ವದ ವೈಶಾಲ್ಯತೆಯನ್ನು ಮತ್ತು ಸ್ವತಂತ್ರ ನೆರವೇರುವಿಕೆಯನ್ನು ಬಿಟ್ಟಂತಾಗುತ್ತದೆ. ಯಾವಾಗಲೂ ಆತ್ಮಾಹುತಿಯು ಒಂದು ಒತ್ತಾಯ ಭಾವದ ವಿಚಾರವಿರುತ್ತದೆ. ಒಂದು ರೀತಿಯ ಸಂಕುಚಿತತೆ ಒಂದು ರೀತಿಯ ವಿಧಿಸಲಾಗದ ಸ್ವ–ನಿರಾಕರಣೆಯಿರುತ್ತದೆ. ಈ ಆದರ್ಶವು ಆತ್ಮನ ಆಳ ಮತ್ತು ಉನ್ನತ ಸಹಜತೆಗಳಿಗೆ ಅವಕಾಶ ಕೊಡುವದಿಲ್ಲ. ಆತ್ಮ ಸಮರ್ಪಣೆಯಲ್ಲಿ ನಾವು ಈ ರೀತಿ ಮಾಡದೆ ಒಂದು ಸಹಜವಾದ ಸ್ವ–ಕೊಟ್ಟುಕೊಳ್ಳುವಿಕೆ, ದೈವನಿಗೆ ನೀವು ಯಾವುದರ ಒಂದು ಭಾಗವೋ ಆ ಉನ್ನತ 'ಪ್ರಜ್ಞೆ'ಗೆ ನಿಮ್ಮ ಎಲ್ಲವನ್ನೂ ಕೊಟ್ಟುಕೊಳ್ಳುವದಾಗಿದೆ. ಆತ್ಮ ಸಮರ್ಪಣೆಯು ಕಡಿಮೆಯಾಗುವದಿಲ್ಲ. ಆದರೆ ಹೆಚ್ಚಾಗುತ್ತದೆ; ಇದು ನಿಮ್ಮ ವ್ಯಕ್ತಿತ್ವವನ್ನು ಕಡಿಮೆಯಾಗಲಿ ಅಥವಾ ನಿಶ್ಶಕ್ತಿಗೊಳಿಸುವದಾಗಲೀ ಅಥವಾ ನಾಶವಾಗಲಿ ಮಾಡುವದಿಲ್ಲ, ಅದನ್ನು ಭದ್ರ ಮತ್ತು ಹೆಚ್ಚಾಗಿಸುತ್ತದೆ. ಆತ್ಮ ಸಮರ್ಪಣೆಯೆಂದರೆ ಕೊಡುವಿಕೆಯ ಎಲ್ಲಾ ಆನಂದದೊಂದಿಗೆ ಸ್ವತಂತ್ರವಾಗಿ ಸಂಪೂರ್ಣವಾಗಿ ಕೊಟ್ಟುಕೊಳ್ಳುವಿಕೆಯಾಗಿದೆ; ಅದರಲ್ಲಿ ತ್ಯಾಗದ ಯಾವುದೇ ಭಾವವಿರುವದಿಲ್ಲ. ನಿಮ್ಮಲ್ಲಿ ತ್ಯಾಗದ ಒಂದು ಚಿಕ್ಕ ಭಾವವಿದ್ದರೂ ಆಗ ಅದು ಆತ್ಮ ಸಮರ್ಪಣೆಯಾಗಿರುವದಿಲ್ಲ. ಇದರರ್ಥ

ನಿಮ್ಮನ್ನು ನೀವು ಕಾಯ್ದಿರಿಸಿಕೊಂಡಿದ್ದೀರಿ ಅಥವಾ ನೀವು ಒಲ್ಲದ ಮನಸ್ಸಿನಿಂದ ಅಥವಾ ನೋವಿನಿಂದ ಮತ್ತು ಪ್ರಯತ್ನಿಸುತ್ತಿದ್ದೀರಿ ಮತ್ತು ಪ್ರಯತ್ನದಿಂದ ಕೊಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದೀರಿ ಮತ್ತು ಈ ಕೊಡುಗೆಯಲ್ಲಿ ಖುಷಿಯೇ ಇಲ್ಲ, ಬಹುಶಃ ನೀವು ಕೊಡುತ್ತಿದ್ದೀರಿ ಎಂಬ ಭಾವವೂ ಸಹ ಇರುವದಿಲ್ಲ. ನಿಮ್ಮ ಸತ್ತೆಯ ಸಂಕೋಚನ ಭಾವದಿಂದ ಏನನ್ನಾದರೂ ಮಾಡಿದಾಗ, ಖಂಡಿತವಾಗಿಯೂ ನೀವು ಇದನ್ನು ತಪ್ಪು ರೀತಿಯಿಂದ ಮಾಡುತ್ತಿರುತ್ತೀರಿ. ನಿಜವಾದ ಆತ್ಮ ಸಮರ್ಪಣೆಯು ನಿಮ್ಮನ್ನು ಹಿಗ್ಗಿಸುತ್ತದೆ; ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ; ನೀವು ನಿಮ್ಮಿಂದ ಹೊಂದಲಾರದ ಒಂದು ಉನ್ನತ ಅಳತೆಯ ಗುಣಮಟ್ಟ ಮತ್ತು ಪ್ರಮಾಣಕ್ಕಿಂತಲೂ ಭಿನ್ನವಾಗಿ ಹೊಸದಾದ ಉನ್ನತ ಅಳತೆಯದ್ದಾಗಿರುತ್ತದೆ. ನೀವು ಸಮರ್ಪಣೆ ಮಾಡದ ವಿನಃ ಇನ್ನೊಂದು ಜಗತ್ತಿನಲ್ಲಿ ಪ್ರವೇಶಿಸಲಾರಿರಿ. ಒಂದು ಹನಿಯು ಸಮುದ್ರದಲ್ಲಿ ಬಿದ್ದಾಗ ತನ್ನ ಸ್ವಂತಿಕೆಯ ಗುರುತನ್ನು ಇನ್ನೂ ಇಟ್ಟುಕೊಂಡರೆ, ಅದು ಚಿಕ್ಕ ಹನಿಯಾಗಿಯೇ ಉಳಿಯುತ್ತದೆ. ಹೆಚ್ಚಾಗಿ ಮತ್ತೇನೂ ಅಲ್ಲ. ತನ್ನ ಸುತ್ತಲಿನ ಅಗಾಧತೆಯಿಂದ ಆ ಚಿಕ್ಕ ಹನಿಯು ಹತ್ತಿಕ್ಕಲ್ಪಡುತ್ತದೆ. ಏಕೆಂದರೆ ಅದು ಸಮರ್ಪಣೆ ಮಾಡಿಲ್ಲ. ಆದರೆ ಸಮರ್ಪಣೆಯು ಸಮುದ್ರದೊಂದಿಗೆ ಒಂದುಗೂಡಿಸುತ್ತದೆ. ಮತ್ತು ಇಡೀ ಸಮುದ್ರದ ಸಾಮರ್ಥ್ಯ ಮತ್ತು ವಿಶಾಲತೆಯೊಂದಿಗೆ ಪ್ರಕೃತಿಯಲ್ಲಿ ಭಾಗಿಯಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/114–15**

## ಸಮರ್ಪಣೆ ಮತ್ತು ಪರಿಶ್ರಮ

**– ಅನು: ಕಿಶೋರಕುಮಾರ ಕಾಸಾರ**

### ಸಮರ್ಪಣೆ ಮತ್ತು ಹೃದಯಾಭಿಲಾಶೆ

ನೀವು ಶರಣಾಗತಿಯನ್ನು ಒಪ್ಪಿಕೊಂಡರೇ ನೀವು ನಿಮ್ಮ ಶ್ರಮವನ್ನು ಹೊಂದುವ ಅವಶ್ಯಕತೆಯೇ ಇರುವದಿಲ್ಲ! ಹಾಗೆಂದ ಮಾತ್ರಕ್ಕೆ ನೀವು ನಿಮ್ಮ ಸಂಪೂರ್ಣ ನಿಮ್ಮ ವ್ಯಕ್ತಿತ್ವವನ್ನು ಇಲ್ಲಿ ಪರಿತ್ಯಜಿಸುತ್ತಿರುವಿರಿ ಎಂದರ್ಥವಲ್ಲ, ಬದಲಾಗಿ ತ್ವರಿತಗತಿಯಲ್ಲಿ ದರ್ಶನ–ಸಾಕ್ಷಾತ್ಕಾರಗಳನ್ನು ಸಾಧಿಸಬೇಕಾದರೆ ನಿಮ್ಮ ಲೌಕಿಕ ಜಡತ್ವವನ್ನು ಅಲೌಕಿಕ ದೈವತ್ವದೆದುರಿಗೆ ಮಂಡಿಯೂರಿಸಲೇಬೇಕು. ಇದೊಂದು ರೀತಿಯಲ್ಲಿ ಸಮರ್ಪಣೆಯ ರೂಪಕವೇ ಆಗಿದೆ.

ಸಮರ್ಪಣೆ ಎಂದರೆ ಮರ್ತ್ಯದ ಸಾಧನೆ–ಸಾಹಸಗಳೆಲ್ಲವನ್ನು ಕೈಬಿಟ್ಟು ನಿಷ್ಕ್ರಿಯವಾಗುವುದಲ್ಲ. ಈ ವಿಧಾನದಲ್ಲಿ ನೀವೊಂದು ಮೃಣ್ಮಯದ ಪಾತ್ರೆಯಂತಾಗಿ, ಆ ದೇವ ಸ್ತರದಿಂದ ಧುಮ್ಮಿಕ್ಕುವ ದೈವೀಕ ದ್ರವ್ಯಗಳ ಸಂಗ್ರಾಹಕವಾಗಬೇಕಿದೆ.

*

ನಿಮ್ಮಲ್ಲಿ ಒಂದು ಇಚ್ಛೆಯಿದೆ, ಅದು ಆತ್ಮಸ್ಥೈರ್ಯವೂ ಆಗಿದೆ. ಇದನ್ನು ನೀವು ಆಹ್ವಾನಿಸಿಕೊಳ್ಳಬಹುದು. ಇದನ್ನು ಪರೀಕ್ಷಿಸಬೇಕಿದ್ದರೆ ನೀವೊಂದು ಪ್ರಯೋಗವನ್ನು ಮಾಡಿ ನೋಡಬಹುದು. ರಾತ್ರಿಯ ವೇಳೆಯಲ್ಲೂ ಮಲಗದೆಯೇ – ಜಾಗೃತವಾಗಿರಬೇಕೆಂಬ ಪ್ರಯೋಗವನ್ನು ಮಾಡಿನೋಡಿ. ಇದರಲ್ಲಿ ಎರಡು ವಿಧಾನಗಳನ್ನು ಅನುಸರಿಸಿ. ಮೊದಲ ವಿಧಾನದಲ್ಲಿ – ಆಶಾಪೂರ್ಣ ಸಮರ್ಪಣಾ ಭಾವದಲ್ಲಿ – ನಿಮ್ಮ ಶ್ರಮ–ಪ್ರಯತ್ನಗಳೆಲ್ಲವನ್ನು ಬದಿಗಿಟ್ಟು, ಸಮರ್ಪಣೆಯೊಂದನ್ನೇ ಅನುಸರಿಸಿ ಶಾಂತ ಭಾವದೊಳಗೆ, “ನಾನು ರಾತ್ರಿಯಿಡೀ ಮಲಗದೇ ಜಾಗೃತನಾಗಿರಬೇಕೆಂಬುದು ದೈವೇಚ್ಛೆಯಾಗಿದ್ದರೆ, ನಾನು ಅಹೋರಾತ್ರ ಎಚ್ಚರವಾಗಿಯೇ ಇರುತ್ತೇನೆ” ಎಂದು ಒಂದು ನಿರ್ಧಾರವನ್ನು ಕೈಗೊಳ್ಳಿ. ಇನ್ನು ಎರಡನೆಯ ವಿಧಾನದಲ್ಲಿ, ಒಂದು ವೇಳೆ ನೀವು ನಿಮ್ಮ ಆತ್ಮೇಚ್ಛೆಯನ್ನು ದೈವಿಕತೆಯ ಎದುರಿಗೆ ಸಲ್ಲಿಸಿ, ಛಲದಿಂದ, “ನಾನು ನನ್ನ ಸ್ವಂತ ಪ್ರಯತ್ನದಿಂದ ಈ ಇಡೀ ರಾತ್ರಿಯನ್ನು ನಿದ್ರೆಯಿಲ್ಲದೆ ಕಳೆಯುತ್ತೇನೆ” ಎಂದು ಸಂಕಲ್ಪ ಮಾಡಿಕೊಳ್ಳಿ. ಆಗ ನೀವು ನಿಮ್ಮ ಎರಡನೆಯ ವಿಧಾನದ ದೃಢ ಸಂಕಲ್ಪವೇ ಗೆಲ್ಲುವುದನ್ನು ಕಾಣುವಿರಿ. ನೀವು ನಿಮ್ಮ ಶ್ರಮ–ಸಾಧನೆಗಳನ್ನು ಬಿಟ್ಟು ನಿಷ್ಕ್ರಿಯವಾಗಿ, ಒಂದೆಡೆ ತಟಸ್ಥರಾಗಿ ಕುಳಿತು ವ್ಯರ್ಥವಾಗಿ ಕಾಲಹರಣವನ್ನು ಮಾಡುತ್ತ, “ನಾನು ಇಂದಿನ ರಾತ್ರಿಯಲ್ಲಿ ಎಚ್ಚರವಾಗಿರಬೇಕೆಂದುಕೊಂಡಿದ್ದೇನೆ, ಆದರೆ ನನಗೇನು ಮಾಡಬೇಕೆಂಬುದೇ ತಿಳಿದಿಲ್ಲ, ಹಾಗಾಗಿ ನಾನು ನನ್ನತನವನ್ನು ದೈವೇಚ್ಛೆಗೆ ಬಿಟ್ಟುಕೊಡುತ್ತೇನೆ. ಆ ದೈವತ್ವವೇ ನನ್ನನ್ನು ಮುನ್ನಡೆಸಲಿ” ಎಂದು ಶರಣಾಗತಿಯ ವಿಧಾನವನ್ನೇ ಅನುಸರಿಸಿದರೆ, ನಿಮ್ಮ ಸಾಧನೆಯು ಕುಂಠಿತವಾಗುವುದನ್ನು ಅರಿಯುವಿರಿ. ನಿಮ್ಮ ಕಾರ್ಯವು ಸಾಧನೆಯಾಗಿ ಪರಿವರ್ತನೆ ಯಾಗಬೇಕಿದ್ದರೆ, ನಿಮ್ಮ ಇಚ್ಛೆಯು ದೃಢತೆ ಮತ್ತು ಅಚಲತೆಯಿಂದ ಕೂಡಿರಬೇಕು. ಹಾಗೂ ನಿಮ್ಮ ಲಕ್ಷ್ಯವು ಕಾರ್ಯವಿಧಾನ ಮತ್ತು ಪೋಷಕ ದ್ರವ್ಯಗಳ ಮೇಲಿರಬಾರದು, ಬದಲಾಗಿ ನಿಮ್ಮ ಇಡೀ ಸಂಕಲ್ಪವು ನಿಮ್ಮ ಸಾಧನೆಯ ಮೇಲೆಯೇ ಕೇಂದ್ರಿಕೃತವಾಗಿರಬೇಕು. ಅದೇ ನಿಮ್ಮ ಜೀವನದ ಉತ್ಕಟ ಆಕಾಂಕ್ಷೆಯಾಗಿರಬೇಕು. ಆಗ ಮಾತ್ರ ನಿಮ್ಮ

ಸಾಹಸವು ಸಾಧನೆಯಾಗಿ ಬದಲಾಗುವುದು. ಇದು ನಿಮ್ಮ ಸಾಧನೆಯ ಮೊದಲ ಹಂತ. ಒಂದು ವೇಳೆ ನೀವು ಜಾಗೃತ ಮನಸ್ಥಿತಿಯವರಾಗಿದ್ದು, ನಿಮ್ಮ ನಡೆ–ನುಡಿ–ಗಮನಗಳೆಲ್ಲವೂ ಜಾಗರೂಕತೆಯಿಂದ ಕೂಡಿದ್ದರೆ, ನಿಮ್ಮ ಸಾಧನೆಗೆ ಸಹಕಾರಿಯಾಗಬಲ್ಲಂತಹ ಪ್ರೇರೇಪಣೆಯೊಂದು ದೈವೀಕ ಸ್ತರದಿಂದ ಅವತರಣದಲ್ಲಿ ಬಂದು ನಿಮ್ಮನ್ನು ಪ್ರಚೋದಿಸುತ್ತಿರುವುದನ್ನು ಅನುಭವಿಸುವಿರಿ. ಮತ್ತು ಅದರ ಸಹಾಯದಿಂದ ನಿಮ್ಮ ಕಾರ್ಯವಿಧಾನಗಳು ನಿಮ್ಮನ್ನು ಉತ್ತುಂಗಕ್ಕೇರಿಸುವವು. ಶ್ರಮದಿಂದ ಕೂಡಿದ ಈ ವಿಧಾನವನ್ನು ಬಿಟ್ಟು ಕೇವಲ ಶರಣಾಗತಿಯೊಂದನ್ನೇ ಪಾಲಿಸಿದಲ್ಲಿ ನೀವು ಬಯಸಿದ ಫಲದಲ್ಲಿ ವ್ಯತ್ಯಯವಾಗುವದನ್ನು ಮನಗಾಣುವಿರಿ. ಅದಾಗ್ಯೂ ನೀವು ನಿಷ್ಕ್ರಿಯ ವಿಧಾನವನ್ನೇ ಪಾಲಿಸುವರಾಗಿದ್ದರೇ, ಸ್ವ–ಪ್ರಯತ್ನಗಳೆಲ್ಲವನ್ನು ಕೈಬಿಟ್ಟು, ಸೋಮಾರಿತನದಿಂದ ಮಲಗಿಕೊಂಡು ಸ್ವಪ್ನ ಸಾಮ್ರಾಜ್ಯದೆಡೆಗೆ ಜಾರಿಕೊಳ್ಳಿ, ಬಾರದಿರುವ ಪವಾಡಗಳಿಗಾಗಿ ಕಾಯುತ್ತ ನಿರರ್ಥಕರಾಗಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/18–19**

**ಸಮರ್ಪಣೆ ಮತ್ತು ಸ್ವ–ಪ್ರಯತ್ನ**

ನೀವು ಯಾವಾಗ ಬೇಕಿದ್ದರೂ ಈ ವಿಧಾನದಿಂದ ಸಾಧನೆಯನ್ನು ಮಾಡಬಹುದಾಗಿದೆ. ಆದರೆ ನಿಮ್ಮ ಸ್ವ–ಪ್ರಯತ್ನಕ್ಕೆ ಸಲ್ಲಬೇಕಿರುವ ಫಲಾಫಲಗಳೆಲ್ಲವೂ ಆ ದೈವತ್ವದ ಅಭಯ ಹಸ್ತದಲ್ಲಿಯೇ ಇರುತ್ತವೆ. ಅದನ್ನು ನೀಡುವುದು–ಬಿಡುವುದು ದೈವೇಚ್ಛೆಯೇ ಆಗಿದೆ. ಒಂದು ವೇಳೆ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆತದ್ದೇ ಆದಲ್ಲಿ ಅದು ಆ ದೈವೀಕ ಶಕ್ತಿಯ ವರದಾನವೇ ಹೊರತು ನಿಮ್ಮ ಭೌತಿಕ ಶಕ್ತಿಯ ಫಲವಲ್ಲ. 'ಇದೆಲ್ಲವನ್ನು ಅರಿತಾಗ್ಯೂ, ನಮ್ಮ ಪ್ರತಿಯೊಂದು ಅಪೇಕ್ಷೆಗಳಿಗೂ ದೈವವನ್ನೇ ನೆಚ್ಚಿಕೊಳ್ಳುವುದು ಉಚಿತವೇ?' ಎಂದು ನೀವು ಕೇಳಬಹುದು. ಆದರೆ ನಮ್ಮ ಭೌತಿಕ ಶ್ರಮದಲ್ಲಿ ಉಂಟಾಗಬಹುದಾದ ಅಲ್ಪಸ್ವಲ್ಪ ಲೋಪದೋಷಗಳನ್ನು, ಕಾರ್ಯವಿಧಾನದಲ್ಲಿರುವ ಅಪೂರ್ಣತೆಯನ್ನು ನಿವಾರಿಸಿ ಪೂರ್ಣ ರೂಪದ ಫಲಿತಾಂಶದ ಆಕಾಂಕ್ಷೆಯಲ್ಲಿರುವ ನಾವು, ದೈವದೆಡೆಗೆ ಪ್ರಾರ್ಥನೆಯನ್ನು ಸಲ್ಲಿಸುವದರಲ್ಲೇನು ತಪ್ಪಿದೆ? ನೀವು ಒಂದು ವಿಷಯವನ್ನು ತಿಳಿದುಕೊಳ್ಳಬೇಕು, ನೀವು ಯಾವುದೇ ಒಂದು ಸಾಧನೆಯನ್ನು ಕಾರ್ಯಗತಗೊಳಿಸಿಕೊಳ್ಳುವಾಗ ನೀವು ನಿಮ್ಮ ಕೈಲಾದಷ್ಟು ಬಲ–ಜ್ಞಾನ–ಸಾಮರ್ಥ್ಯಗಳೆಲ್ಲವನ್ನು ಏಕೀಕೃತವಾಗಿ

ಒರೆಗೆ ಹಚ್ಚಿ ಪ್ರಯತ್ನಿಸಿದರೂ ಅದರ ಫಲಿತಾಂಶವು ಆ ದೈವೀಕ ಅನುಗ್ರಹವನ್ನೇ ಅವಲಂಬಿಸಿರುತ್ತದೆ. ಉದಾಹರಣೆಗೆ ನೀವು ಯೋಗ ಸಾಧನೆಯಲ್ಲಿ ತೊಡಗಿಕೊಂಡಿದ್ದೀರಿ ಎಂದಿಟ್ಟುಕೊಳ್ಳಿ. ನೀವು ಎಷ್ಟೇ ಏಕಾಗ್ರತೆಯಿಂದ ಧ್ಯಾನದಾಳಕ್ಕೆ ಇಳಿಯಬೇಕೆಂದು ಪ್ರಯತ್ನಿಸಿದರೂ, ಸಮರ್ಪಣೆಯ ಮನೋಭಾವನೆಯಿಲ್ಲದ ನಿಮ್ಮ ಶ್ರಮವು ನಿರರ್ಥಕವೆಂದೇ ತಿಳಿದುಕೊಳ್ಳಿ. ಆಗ ನೀವು ಸಮರ್ಪಣೆಯ ವಿಧಾನವನ್ನನುಸರಿಸಿ, "ನಾನು ತಪಸ್ಸಾಧನೆಗೆಂದು ನನ್ನ ಕೈಲಾದಷ್ಟು ಪ್ರಯತ್ನವನ್ನು ಮಾಡುತ್ತೇನೆ, ನನ್ನಲಿನ ಧ್ಯಾನದ ಲೋಪಗಳನ್ನು, ಯೋಗದ ಅಪೂರ್ಣತೆಗಳನ್ನು ನಿವಾರಿಸಲು ಶ್ರಮಿಸುತ್ತೇನೆ. ಆದರೆ ಕೊನೆಗೆ ದರ್ಶನ–ಸಾಕ್ಷಾತ್ಕಾರ ರೂಪದ ಫಲಿತಾಂಶಕ್ಕಾಗಿ ನಾನು ನನ್ನತನವನ್ನು ಸಂಪೂರ್ಣವಾಗಿ ದೈವತಕ್ಕೆ ಒಪ್ಪಿಸಿಬಿಡುತ್ತೇನೆ" ಎಂದು ಮುನ್ನಡೆಯಿರಿ. ಆಗ ಮಾತ್ರ ನೀವು ನಿಮ್ಮ ಸಾಧನೆಯ ಮಾರ್ಗದಲ್ಲಿ ಪೂರ್ಣರೂಪದ ಫಲವನ್ನು ಪಡೆದುಕೊಳ್ಳಲು ಶಕ್ಯರಾಗುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/97 – ಶ್ರೀಮಾತೆ**

**ಶರಣಾಗತಿಯು ಒಂದು ದಿನ ಮಾತ್ರದಲ್ಲೇ ಸಂಭವಿಸುವಂತಹುದಲ್ಲ**

ಸಾಧನೆಯ ಆರಂಭಿಕ ಹಂತದಲ್ಲಿ ನಿಮ್ಮ ಸ್ವ–ಪ್ರಯತ್ನಗಳೆಲ್ಲವನ್ನು ಪರಿತ್ಯಜಿಸಿ ಕೇವಲ ಸಮರ್ಪಣೆಯೊಂದನ್ನೇ ಅವಲಂಬಿಸಿಕೊಂಡು ಕೂರುವುದು ತರವಲ್ಲ. ಒಂದು ಸಾಧನೆಗೆ ಹೇಗೆ ಸ್ವಂತ ಪರಿಶ್ರಮದ ಅಗತ್ಯವಿದೆಯೋ, ಹಾಗೆಯೇ ಅದರೊಟ್ಟಿಗೆ ಸಮರ್ಪಣಾ ಮನೋಭಾವನೆಯ ಅನಿವಾರ್ಯತೆಯೂ ಇದೆ. ನಮ್ಮ ಬೌದ್ಧಿಕ ಸ್ತರವು ತನ್ನದೇ ಆದ ಕಲ್ಪನೆ–ವಿಚಾರಗಳನ್ನು ಹೊಂದಿದೆ, ಅಲ್ಲದೇ ತನ್ನ ಪ್ರತಿಯೊಂದು ನಡೆಯಲ್ಲಿ ಅದು ತನ್ನದೇ ಆದ ವಿಚಾರಗಳಿಗೆ ಕಟ್ಟುಬಿದ್ದಿರುತ್ತದೆ. ಹಾಗಾಗಿ ಮಾನವಿಕ ವೈಚಾರಿಕತೆಯು ಸಹಜವಾಗಿಯೇ ಸಮರ್ಪಣೆಯನ್ನು ವಿರೋಧಿಸುತ್ತದೆ. ಏಕೆಂದರೆ, ಸಾಧನೆಯ ಆರಂಭಿಕ ಹಂತದಲ್ಲಿ ಮರ್ತ್ಯದ ವೈಚಾರಿಕ ಗಡಿಯನ್ನು ಮಾತ್ರ ವ್ಯಾಪಿಸಿದ ಬೌದ್ಧಿಕ ಸ್ತರಕ್ಕೆ, 'ಸಮರ್ಪಣೆ ಎಂದರೆ' ತನ್ನತನವನ್ನೇ ಬೇರೊಂದಕ್ಕೆ ಒಪ್ಪಿಸಿಕೊಳ್ಳುತ್ತಿರುವೆನೋ? ಎಂಬ ಅನುಮಾನವು ಕಾಡುತ್ತಿರುತ್ತದೆ. ಏಕೆಂದರೆ ಭೌತಿಕ ಪ್ರಜ್ಞೆಯೆಂಬುದು ಒಂದು ಕಲ್ಲಿನಂತೆ ಒರಟಾಗಿದ್ದು, ಅದು ಜಡ ಲೋಕದ ನಿಯಮಗಳಿಗೆ ಮಾತ್ರ ಬದ್ಧವಾಗಿದ್ದು, ಸಮರ್ಪಣೆಯನ್ನು ಕೂಡ ಜಡ ಲೋಕದ ಒಂದು ವಿಧಿಯೆಂದೇ ಪರಿಗಣಿಸಿರುತ್ತದೆ. ಆದರೆ ಜಡತ್ವದಿಂದ ಬಿಡಿಸಿಕೊಂಡು ಮೇಲಿನ ಸ್ತರಕ್ಕೇರಿದ

ಅತೀಂದ್ರಿಯತೆಗೆ ಸಮರ್ಪಣೆಯೆಂದರೇನು ಎಂಬುದು ಸ್ಪಷ್ಟವಾಗಿ ತಿಳಿದಿದೆ. ಸಾಧನೆಯ ಆರಂಭಿಕ ಹಂತದಲ್ಲಿರುವವರಿಗೆ ಈ ಅತೀಂದ್ರಿಯತೆಯು ಮಬ್ಬಾಗಿ–ಮಸುಕಾಗಿ ತೋರಿಬರುತ್ತದೆ. ಸಾಧನೆಯು ಮುಂಬರಿದಂತೆ ಒಂದು ಹಂತದಲ್ಲಿ ಜಡ ಭೌತಿಕತೆಯು ಅತೀಂದ್ರಿಯತೆಯ ತೆಳುಪೊರೆಯನ್ನು ಸರಿಸಲು ಶಕ್ಯವಾಗುತ್ತದೆ. ಯಾವಾಗ ಆ ಅತೀಂದ್ರಿಯ ಸ್ತರದ ಪರದೆಯು ಸರಿಯುವುದೋ, ಆಗ ಅದು ಸಾಧಕನ ಪ್ರಜ್ಞೆಯಲ್ಲಿ ಸಮರ್ಪಣೆಯನ್ನು ಪ್ರಚೋದಿಸಿತ್ತದೆ. ಹಾಗೂ ಸಾಧಕನ ಪ್ರಜ್ಞೆಯು ಇತರರ ಕಷ್ಟಗಳಿಗೂ ಸ್ಪಂದಿಸುವ–ಪರಿಹರಿಸುವ ಚೈತನ್ಯವನ್ನು ತುಂಬುತ್ತ ನೋಡುನೋಡುತ್ತಿರುವಂತೆಯೇ ನೀಲದಲಿ ಲೀನವಾಗಿ ಬಿಡುತ್ತದೆ, ಕಾಣ್ಕೆಯಿಂದ ಅದೃಶ್ಯವಾಗಿ ಬಿಡುತ್ತದೆ. ಈ ಹಂತದವರೆಗೂ ಸಾಧಕನಿಗೆ ತನ್ನ ಸ್ವ–ಪ್ರಯತ್ನದ ಅಗತ್ಯವಿದೆ. ಅಥವಾ ಅದಕ್ಕೂ ಮುಂದೆ ಆತ ಶರಣಾಗತಿಯನ್ನು ಒಪ್ಪಿ ತಾನೊಂದು ಮೃಣ್ಮಯದ ಪಾತ್ರೆಯಂತಾಗಿ ಮೇಲಿನಿಂದ ಧುಮ್ಮಿಕ್ಕುವ ಶಕ್ತಿಯ ಪ್ರವಾಹ ಧಾರೆಯನ್ನು ಪ್ರಜ್ಞೆಯೊಳಗೆ ತುಂಬಿಕೊಂಡು, ಅದು ತನ್ನ ಪ್ರಜ್ಞಾ ಸಾಧನೆಯನ್ನು ಊರ್ಧ್ವದೆಡೆಗೆ ಎತ್ತಿಕೊಳ್ಳುವವರೆಗೂ, ತನ್ನ ಪರಿಶ್ರಮವನ್ನು ಮುಂದುವರಿಸಬೇಕು. ಅದರ ನಂತರವೂ ಪ್ರಯತ್ನದಿಂದಲ್ಲದಿದ್ದರೂ, ಕನಿಷ್ಟ ಪಕ್ಷ ಸ್ವಾಕಾಂಕ್ಷೆಯಿಂದ ನಮ್ಮ ದೇಹ, ಬುದ್ಧಿ, ಬದುಕು ಮತ್ತು ಇಚ್ಛೆಗಳೆಲ್ಲವೂ ದೈವಿಕ ಶಕ್ತಿಯಿಂದ ತುಂಬಿಕೊಳ್ಳುವವರೆಗಾದರೂ ಜಾಗ್ರತೆ–ಜಾಗರೂಕತೆಗಳ ಅವಶ್ಯಕತೆಯಿದೆ. ಈ ವಿಷಯವನ್ನು ನಾನು ಶ್ರೀಮಾತೆಯವರ ಅಧ್ಯಾಯವೊಂದರಲ್ಲಿ ವಿವರಿಸಿದ್ದೇನೆ.

ಒಂದೊಮ್ಮೆ ಜಡತ್ವದಿಂದ ಅತೀಂದ್ರಿಯತೆಯೆಡೆಗೆ ಏರಿದ ಸಾಧಕರು ತಮ್ಮ ಪ್ರಾಮಾಣಿಕವಾದ ಕಾರ್ಯ ವಿಧಾನಗಳಿಂದ ಸಮರ್ಪಣಾ ಮನೋಭಾವ ಹೊಂದಲು ಪ್ರಯತ್ನಿಸುತ್ತಾರೆ. ಆ ಹಂತದಲ್ಲಿರುವ ಸಾಧಕರು ಶುದ್ಧ ಮತ್ತು ಜ್ಞಾನಯುತವಾದ ಮಾನಸಿಕ ಇಚ್ಛೆಯುಳ್ಳವರಾದ್ದರಿಂದ, ಅವರು ಸಮರ್ಪಣೆಯನ್ನು ಒಂದು ವ್ರತ–ನಿಯಮದಂತೆ ಪಾಲಿಸುತ್ತಾರೆ ಹಾಗೂ ಅದರ ಕುರಿತಾದ ಎಲ್ಲ ಅನುಮಾನಗಳಿಂದ ಮುಕ್ತರಾಗಿದ್ದು, ತಾವುಗಳು ಅದರ ನಿರ್ದೇಶನದಂತೆ ನಡೆದು ಇತರರನ್ನೂ ಅದರ ಮಾರ್ಗವನ್ನನುಸರಿಸುವಂತೆ ಪ್ರೇರೇಪಿಸುತ್ತಾರೆ. ಈ ಹಂತದಲ್ಲಿಯೂ ಸಹ ಸಾಧಕನ ಸ್ವ–ಪ್ರಯತ್ನಗಳು ಮುಂದುವರಿಯುತ್ತಲೇ ಇರುತ್ತವೆ. ಆದರೆ ಆ ಪ್ರಯತ್ನಗಳು ಒತ್ತಡ ಮತ್ತು ಕಠಿಣ ಶ್ರಮಗಳಿಂದ ಮುಕ್ತವಾಗಿ ಸಹಜ ಮತ್ತು ಸ್ವಾಭಾವಿಕ ರೂಪವನ್ನು ತಾಳಿರುತ್ತವೆ. ಅಲ್ಲದೆ ಈ ಪ್ರಯತ್ನಗಳ ಹಿಂದೆ ಒಂದು ಬೃಹತ್ ಶಕ್ತಿಸ್ಥಾವರವೇ

ಕ್ರಿಯಾಶೀಲವಾಗಿರುವದರಿಂದ ಸಾಧಕನಿಗೆ ತಾನಿನ್ನೂ ಸ್ವ–ಪ್ರಯತ್ನದಿಂದಲೇ ಮೇಲೆರುತ್ತಿರುವೆನೆಂಬ ಭಾವನೆಯು ನಿಧಾನವಾಗಿ ದೂರವಾಗುತ್ತದೆ. ಇನ್ನು ಇದಕ್ಕೆ ತದ್ವಿರುದ್ಧವೆಂಬಂತೆ ಕೆಲವು ಸಂದರ್ಭಗಳಲ್ಲಿ, ವೈಚಾರಿಕ ಹಂತದ ಮಾನವನು ತನ್ನ ಬೌದ್ಧಿಕ ಇಚ್ಛೆ ಮತ್ತು ಸ್ವಯಂ ಇಚ್ಛೆಗಳನ್ನು ತ್ಯಜಿಸಿ, ಸಮರ್ಪಣೆಯನ್ನೇ ನಂಬಿಕೊಂಡು ಕೂರಲು ಒಪ್ಪಿಕೊಳ್ಳುವದಿಲ್ಲ. ಅಂತಹ ಸಂದರ್ಭಗಳಲ್ಲಿ, ಸಾಧಕನು ತನ್ನ ಲೌಕಿಕ ಮಾನವತ್ವ ಮತ್ತು ಅಲೌಕಿಕ ದೇವತ್ವದ ನಡುವಿರುವ ಪರದೆಯನ್ನು ಸರಿಸುವವರೆಗೆ ತನ್ನ ಸಾಹಸ ಮತ್ತು ಸ್ವ–ಪ್ರಯತ್ನಗಳನ್ನು ಮುಂದುವರಿಸುತ್ತಲೇ ಇರಬೇಕು. ಇಲ್ಲಿ ಸಾಧಕನ ಶ್ರಮ–ಸಾಧನೆಯ ಮೇಲೆ ಬೇರಾವ ಒತ್ತಡ ಮತ್ತು ನಿರ್ಬಂಧಿತ ನಿಯಮಗಳು ಅನ್ವಯವಾಗುವದಿಲ್ಲ. ಏಕೆಂದರೆ ಮಾನವ ಸಹಜವಾದ ಸಾಹಸೀ ಪ್ರವೃತ್ತಿಗಳನ್ನು ಯಾವುದೋ ನಿರ್ಬಂಧಿತ ನಿಯಮಗಳಿಂದ ತಡೆಯಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/82–84**

### ಸಮರ್ಪಣೆ ಮತ್ತು ತಪಸ್ಸು

ಒಂದು ರೀತಿಯಲ್ಲಿ ಸಮರ್ಪಣೆಯ ಪ್ರಕ್ರಿಯೆಯೇ ತಪಸ್ಸಿನ ಕ್ರಿಯಾ ವಿಧಾನವೂ ಆಗಿದೆ. ಹಾಗೆ ನೋಡಿದರೆ ಸಮರ್ಪಣೆ ಎಂಬುದು ಎರಡೆರಡು ಬಾರಿ ತಪಸ್ಸು ಮಾಡಿದ ಫಲಕ್ಕೆ ಸಮಾನವಾದ ಫಲಿತಾಂಶವನ್ನು ನೀಡುವ ಪ್ರಕ್ರಿಯೆಯಾಗಿದೆ. ಒಂದೊಮ್ಮೆ ಸಮರ್ಪಣೆಯ ಪ್ರಕ್ರಿಯೆಯು ಆರಂಭವಾದರೆ ಸಾಕು, ಅದು ನಿಧಾನವಾಗಿ ತನ್ನ ಕಾರ್ಯ ವ್ಯಾಪ್ತಿಯನ್ನು ವೃದ್ಧಿಸಿಕೊಳ್ಳುತ್ತ ಕೊನೆಗೊಮ್ಮೆ ದೃಢವಾಗುತ್ತ ಸಾಗುತ್ತದೆ. ಈ ಆರೋಹಣ ಪ್ರಕ್ರಿಯೆಯ ಒಂದು ಹಂತದಲ್ಲಿ ಸಾಧಕನು ದಿವ್ಯ ಸನ್ನಿಧಿಯ ಅನುಭವಕ್ಕೆ ಒಳಗಾಗುತ್ತಾನೆ. ಅಲ್ಲದೇ 'ಮೇಲಿನ ಸ್ತರದಿಂದ ಪ್ರವಹಿಸುತ್ತಿರುವ ಶಕ್ತಿಯೇ ಇದೆಲ್ಲವನ್ನೂ ನಿಯಂತ್ರಿಸುತ್ತ, ನಿರ್ದೇಶಿಸುತ್ತ, ನಿರ್ಮಿಸುತ್ತಿದೆ' ಎಂಬ ಸತ್ಯವನ್ನು ಒಪ್ಪಿಕೊಳ್ಳುತ್ತಾನೆ. ಆ ಹಂತದಲ್ಲಿ ಮಾರ್ಗ ಪ್ರತಿಬಂಧಕಗಳಾದ ಕೆಡುಕಿನ ಪ್ರವೃತ್ತಿಗಳಾವುವೂ ಸಾಧಕನ ದಾರಿಯಲ್ಲಿ ಅಡ್ಡಿ–ಆತಂಕಗಳನ್ನು ಸೃಷ್ಟಿಸುವದಿಲ್ಲ. ಹಾಗಾಗಿ ಅಲ್ಲಿ ಸಾಧಕನ ಸ್ವ–ಪ್ರಯತ್ನಗಳ ಅವಶ್ಯಕತೆಯೇ ಇರುವುದಿಲ್ಲ. ಈ ಪ್ರವರ್ತನೆಯನ್ನೇ ನಾವು, 'ಪ್ರಕೃತಿಯು ತನ್ನನ್ನು ತಾನು ಸಂಪೂರ್ಣವಾಗಿ ಪರಮ ಪುರುಷನಲ್ಲಿ ಸಮರ್ಪಿಸಿಕೊಂಡು, ಆ ದಿವ್ಯತೆಯೆದುರು ಶರಣಾಗತವಾದ ಸಂಕೇತ'ವೆಂದು ಭಾವಿಸಬಹುದು. ಕೆಲವೊಮ್ಮೆ

ದರ್ಶನ–ಸಾಕ್ಷಾತ್ಕಾರಗಳಂತರ ಅನುಭೂತಿಗಳಾಗದ ಜನರೂ ಸಹಿತ ಕೇವಲ ಭಾವಪರವಶತೆಯಿಂದಲೇ ಈ ಪ್ರಕ್ರಿಯೆಯನ್ನು ಕಣ್ಣುಮುಚ್ಚಿಕೊಂಡು ನಂಬಿಬಿಡುತ್ತಾರೆ. ಆದರೆ ಮುಂದೊಮ್ಮೆ ಆ ನಂಬಿಕೆಯೊಡನೆ ಭಕ್ತಿಯ ಸಮಾಗಮವಾದಲ್ಲಿ ಅದು ಖಂಡಿತವಾಗಿಯೂ ಅವರನ್ನು ದಿವ್ಯಸಾಕ್ಷಾತ್ಕಾರದ ಅನುಭೂತಿಯೆಡೆಗೆ ಕೊಂಡೊಯ್ಯುತ್ತದೆ. ಆದರೆ ದುರದೃಷ್ಟವೆಂಬಂತೆ ಕೆಲವರನ್ನು ಮಾತ್ರ ಹೊರತುಪಡಿಸಿದಂತೆ ಉಳಿದವರು ಈ ಮಾರ್ಗವನ್ನನುಸರಿಸದೆ ಒದಗಲಿರುವ ಅನುಭೂತಿಯಿಂದ ವಂಚಿತರಾಗುತ್ತಾರೆ. ಆದರೆ ಇನ್ನೂ ಕೆಲವರು ಅನುಭೂತಿಯನ್ನು ಪಡೆಯುವ ಧಾವಂತದಲ್ಲಿ ಅಸುರೀ ಶಕ್ತಿಯ ಪ್ರಭಾವಕ್ಕೊಳಗಾಗಿ, ಆ ಚೋದನೆಗಳನ್ನೇ ದಿವ್ಯವಾಣಿಗಳೆಂದು ಭಾವಿಸಿ ಅದರ ಕೈವಶವಾಗುತ್ತ ಅಧೋ ಲೋಕದೆಡೆಗೆ ಜಾರಿಬಿಡುತ್ತಾರೆ. ಹಾಗಾಗಿ ಆ ದಿವ್ಯ ಸಾಕ್ಷಾತ್ಕಾರದ ಅನುಭೂತಿಯನ್ನು ಪಡೆಯಲು ಇಚ್ಛಿಸುವವರು, ತಪೋ ಮಾರ್ಗದ ಮೂಲಕ ಸಮರ್ಪಣೆಯನ್ನು ಹೊಂದಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/82**

## ಆಲಸೀತನಕ್ಕೆ ಕ್ಷಮೆಯೆಂಬುದಿಲ್ಲ

ದೈವದ ನಂಬುಗೆ, ದೈವತದ ಮೇಲಿರುವ ಭಕ್ತಿ–ಅವಲಂಬನೆ, ದೈವೀ ಶಕ್ತಿಯೆಡೆಗಿನ ಶರಣಾಗತಿ ಮತ್ತು 'ಸ್ವಾ'ರ್ಪಣೆಯ ಮನೋಭಾವನೆಗಳು ನಮ್ಮ ಆತ್ಮೋನ್ನತಿಗೆ ಅಗತ್ಯ ಮತ್ತು ಅನಿವಾರ್ಯವಾದ ಅಂಶಗಳಾಗಿವೆ. ಹಾಗೆಂದ ಮಾತ್ರಕ್ಕೆ ದೈವದ ಮೇಲಿನ ಅತಿಯಾದ ಅವಲಂಬನೆಯು ನಮ್ಮಲ್ಲಿ ದೌರ್ಬಲ್ಯ–ಆಲಸೀತನಗಳನ್ನೂ ತರುತ್ತದೆ; ದಿವ್ಯತೆಯೆಂದು ಬಗೆದು ಕೇವಲ ಪ್ರಚೋದನೆ–ಪ್ರಲೋಭನೆಗಳನ್ನು ನೀಡುವ ಅಧೋ ಲೋಕದ ಅಸುರೀ ಶಕ್ತಿಗಳಿಗೆ ಶರಣಾಗತವಾಗುವ ಮನೋದೌರ್ಬಲ್ಯಗಳನ್ನೂ ಬೆಳೆಸದಿರಲಿ. ಸಮರ್ಪಣಾ ವಿಧಾನದಿಂದ ದಿವ್ಯತೆಯೆಡೆಗೆ ಏರಬಯಸುವ ಸಾಧಕನು ತನಗೆ ಎದುರಾಗಲಿರುವ ಎಲ್ಲ ಮಾರ್ಗ ಪ್ರತಿಬಂಧಕಗಳನ್ನು–ಅಡೆತಡೆಗಳನ್ನು ಜಯಿಸಿ ಮುನ್ನುಗ್ಗಬೇಕು, ದಣಿವರಿಯದ ಛಲಗಾರನಂತೆ ಆಕಾಂಕ್ಷೆಯ ಉತ್ತುಂಗದೆಡೆಗೆ ಆರೋಹಿಸಬೇಕು. ದಿವ್ಯತೆಯಲ್ಲಿ ಶರಣಾಗತಿಯನ್ನು ಅಪೇಕ್ಷಿಸುವ ಮಹಾತ್ವಾಕಾಂಕ್ಷೆಗೆ ಜಡ ಲೋಕದ – ಮಾನವೀಕ ಸ್ತರದ ಲೌಕಿಕ ಆಸೆಗಳು, ಕೀಳು ಬಯಕೆಗಳು ಮತ್ತು ಸ್ವಂತದ ಅಹಮಿಕೆಗಳು ಅಡ್ಡಿಯಾಗದಿರಲಿ. ಅಲ್ಲದೆ ತ್ವರಿತ ಗತಿಯಲ್ಲಿ ದಿವ್ಯತೆಗೆ

ಶರಣಾಗಬೇಕೆಂಬ ಅಭಿಲಾಷೆಯುಳ್ಳ ಜನರನ್ನು, ಅಜ್ಞಾನ ಮತ್ತು ಅಂಧಕಾರದ ಸ್ತರಗಳಿಂದ ಹೊರಡುವ ಅಸುರೀ ಶಕ್ತಿಗಳು ದಿವ್ಯತೆಯ ಮುಖವಾಡವನ್ನು ಹೊತ್ತು ದಾರಿ ತಪ್ಪಿಸುತ್ತ, ಅವರನ್ನು ತಮ್ಮ ಕೈವಶವನ್ನಾಗಿ ಮಾಡಿಕೊಳ್ಳುವ ಅಪಾಯದ ಸಂಭವವೂ ಉಂಟು. ಹಾಗಾಗಿ ಸಾಧಕನು ಊರ್ಧ್ವದ ಕರೆಗಳಿಗೆ ಮಾತ್ರ ಸ್ಪಂದಿಸಬೇಕೇ ಹೊರತು ಅಧೋ ಲೋಕದ ಪ್ರಚೋದನೆಗಳಿಗಲ್ಲ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/87**

## ಸಮರ್ಪಣೆಯ ಪ್ರಕ್ರಿಯೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

### ನಿಜವಾದ ಶರಣಾಗತಿಯು ಕಷ್ಟದ ಸಂಗತಿಯಾಗಿದೆ

ಉದಾಹರಣೆಗೆ, ನಿಮ್ಮ ಜೀವನವನ್ನು ದೇವರಿಗೆ ಅರ್ಪಿಸಲು ನೀವು ನಿರ್ಧರಿಸಿದ್ದೀರಿ, ನೀವು ಆ ನಿರ್ಧಾರವನ್ನು ತೆಗೆದುಕೊಳ್ಳುತ್ತೀರಿ. ಆದರೆ ಇದ್ದಕ್ಕಿದ್ದಂತೆ, ನಿಮಗೆ ಅಹಿತಕರವಾದದ್ದು, ಅನಿರೀಕ್ಷಿತವಾದದ್ದು ಏನೋ ಒಂದು ಸಂಭವಿಸುತ್ತದೆ, ಆಗ ನಿಮ್ಮ ಮೊದಲ ನಡೆಯು ಆ ಘಟನೆಗೆ ಪ್ರತಿಕ್ರಿಯಿಸುವುದು ಮತ್ತು ಪ್ರತಿಭಟಿಸುವುದಾಗಿರುತ್ತದೆ. ನೀವು ಸಮರ್ಪಣೆಯನ್ನು ಮಾಡಿಕೊಂಡಿದ್ದೀರಿ, "ನನ್ನ ಜೀವನವು ಭಗವಂತನಿಗೆ ಸೇರಿದೆ" ಎಂದು ನೀವು ಅಂದುಕೊಂಡಿದ್ದೀರಿ, ಆಗ ಇದ್ದಕ್ಕಿದ್ದಂತೆ ಅತ್ಯಂತ ಅಹಿತಕರ ಘಟನೆ ಸಂಭವಿಸುತ್ತದೆ (ಅದು ಸಂಭವಿಸಬಹುದು) ಮತ್ತು ನಿಮ್ಮಲ್ಲಿಯ ಏನೋ ಒಂದು ಅದು ಬೇಡವೆಂದು ಪ್ರತಿಕ್ರಿಯಿಸುತ್ತದೆ. ಆದರೆ ಇಲ್ಲಿ, ನಿಮ್ಮ ಅರ್ಪಣೆಯೊಂದಿಗೆ ನೀವು ನಿಜವಾಗಿಯೂ ತರ್ಕಬದ್ಧವಾಗಿರಲು ಬಯಸಿದರೆ, ನೀವು ಈ ಅಹಿತಕರ ಘಟನೆಯನ್ನು ಮುಂದಕ್ಕೆ ತರಬೇಕು: "ನಿನ್ನ ಚಿತ್ತವು ನೆರವೇರಲಿ; ಅದು ಹಾಗಾಗಬೇಕೆಂದು ನೀನು ನಿರ್ಧರಿಸಿದ್ದರೆ, ಅದು ಹಾಗೆಯೇ ಆಗಲಿ" ಎಂದು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತ ಆ ಭಗವಂತನಿಗೆ ಅದನ್ನು ಅರ್ಪಿಸಬೇಕು. ಈ ಬಾಂಧವ್ಯವು ಸ್ವಯಂಪ್ರೇರಿತವಾಗಿರಬೇಕು ಮತ್ತು ಸ್ವಾಭಾವಿಕವಾಗಿರಬೇಕು. ಹಾಗಾಗಿ ಇದು ತುಂಬಾ ಕಷ್ಟಕರವಾದ ಸಂಗತಿಯಾಗಿದೆ.

ಅತ್ಯಂತ ಸಣ್ಣ ವಿಷಯಕ್ಕೂ ಸಹ, ನೀವು ನಿರೀಕ್ಷಿಸಿದ ವಿಷಯಕ್ಕೆ ಅನುಗುಣವಾಗಿರದ, ನೀವು ಯಾವುದಗೋಸ್ಕರ ಕೆಲಸ ಮಾಡಿದ್ದೀರಿ, ಅದರ

ಬದಲಿಗೆ ಸ್ವಾಭಾವಿಕವಾಗಿ, ಎದುರಿಸಲಾಗದ ಒಂದು ವಿರುದ್ಧವಾದ ಪ್ರತಿಕ್ರಿಯೆ ಬರುತ್ತಲಿದ್ದರೆ, ನೀನು ಹಿಂದೆ ಸರಿದುಕೊ: "ಅಲ್ಲ, ಅದಲ್ಲ" – ನೀನು ಒಂದು ವೇಳೆ ಸಂಪೂರ್ಣವಾದ ಶರಣಾಗತಿಯನ್ನು, ಪೂರ್ಣ ಸಮರ್ಪಣೆಯನ್ನು ಮಾಡಿಕೊಂಡಿದ್ದರೆ ಅದು ಆ ರೀತಿಯಾಗಿ ಸಂಭವಿಸಲಾರದು: ಇತರ ಸಮಯಗಳಲ್ಲಿ ಇರುವ ಹಾಗೆ, ನೀನು ಇಲ್ಲಿಯೂ ಸ್ಥಿರವಾಗಿ, ಶಾಂತವಾಗಿ ಇರುವಿ. ಮತ್ತು ಬಹುಶಃ ಇದು ಒಂದು ನಿರ್ದಿಷ್ಟ ರೀತಿಯಲ್ಲಿ ಸಂಭವಿಸಿದರೆ ಅದು ಉತ್ತಮವಾಗಿರುತ್ತಿತ್ತು ಎಂಬ ಕಲ್ಪನೆಯನ್ನು ನೀನು ಹೊಂದಿರುತ್ತಿ, ಆದರೆ ಅದು ವಿಭಿನ್ನವಾಗಿ ಸಂಭವಿಸಿದರೆ, ಇದು ಸಹ ಸರಿಯಾಗಿದೆ ಎಂದು ನೀನು ಅಂದುಕೊಳ್ಳಬೇಕು. ಉದಾಹರಣೆಗೆ, ಒಂದು ನಿರ್ದಿಷ್ಟ ಕಾರ್ಯವನ್ನು ಮಾಡಲು ನೀನು ತುಂಬಾ ಕಷ್ಟಪಟ್ಟು ಕೆಲಸ ಮಾಡಿದ್ದರ ಪರಿಣಾಮವಾಗಿ ಏನೋ ಒಂದು ಸಂಭವಿಸಬಹುದು, ಅದಕ್ಕಾಗಿ ನೀನು ಹೆಚ್ಚು ಸಮಯವನ್ನು, ಹೆಚ್ಚು ಶಕ್ತಿಯನ್ನು, ಹೆಚ್ಚು ಇಚ್ಛಾಶಕ್ತಿಯನ್ನು ನೀಡಿರಬಹುದು, ಆದರೆ ಅದೆಲ್ಲವೂ ನಿನ್ನ ಸ್ವಂತ ಉದ್ದೇಶಕ್ಕಾಗಿ ಅಲ್ಲ, ಭಗವಂತನ ಕಾರ್ಯಕ್ಕಾಗಿ ಎಂದು ಹೇಳು (ಅದು ಅರ್ಪಣೆ); ಈಗ ಈ ಎಲ್ಲಾ ತೊಂದರೆಗಳನ್ನು ತೆಗೆದುಕೊಂಡ ನಂತರ, ಈ ಎಲ್ಲಾ ಕೆಲಸಗಳನ್ನು ಮಾಡಿದ ನಂತರ, ಈ ಎಲ್ಲಾ ಪ್ರಯತ್ನಗಳನ್ನು ಮಾಡಿದ ನಂತರ, ಎಲ್ಲವೂ ಬೇರೆ ರೀತಿಯಲ್ಲಿ ಸಂಭವಿಸುತ್ತದೆ ಎಂದು ಭಾವಿಸು, ಅದು ಯಶಸ್ವಿಯಾಗುವುದಿಲ್ಲ.

ನೀನು ನಿಜವಾಗಿಯೂ ಶರಣಾಗತನಾಗಿದ್ದರೆ: "ಇದು ಒಳ್ಳೆಯದು, ಎಲ್ಲವೂ ಒಳ್ಳೆಯದು, ಅದು ಸರಿ; ನಾನು ನನ್ನ ಕೈಲಾದಷ್ಟು ಮಾಡಿದ್ದೇನೆ, ಈಗ ಅದು ನನ್ನ ನಿರ್ಧಾರವಲ್ಲ, ಇದು ಭಗವಂತನ ನಿರ್ಧಾರ, ಅವನು ನಿರ್ಧರಿಸುವುದನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ ಎಂದು ಹೇಳು. ಮತ್ತೊಂದೆಡೆ, ನೀನು ಈ ಆಳವಾದ ಮತ್ತು ಸ್ವಯಂಪ್ರೇರಿತ ಶರಣಾಗತಿಯನ್ನು ಹೊಂದಿಲ್ಲದಿದ್ದರೆ, ನಿನ್ನಷ್ಟಕ್ಕೆ ನೀನು ಹೇಳಿಕೊ: "ಹೇಗಿದೆ? ಸ್ವಾರ್ಥಕ್ಕಾಗಿ ಅಲ್ಲದ, ಭಗವಂತನ ಕಾರ್ಯಕ್ಕಾಗಿ ನಾನು ತುಂಬಾ ಕಷ್ಟಪಟ್ಟೆ, ಮತ್ತು ಇದು ಅದರ ಫಲಿತಾಂಶವಾಗಿದೆ, ಅದು ಯಶಸ್ವಿಯಾಗಲಿಲ್ಲ!" ನೂರಕ್ಕೆ ತೊಂಬತ್ತೊಂಬತ್ತು ಬಾರಿ, ಅದಾಗುವುದು ಹಾಗೆಯೆ.

ನಿಜವಾದ ಶರಣಾಗತಿಯು ಬಹಳ ಕಷ್ಟದ ಕೆಲಸ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/53**

**ಮೂರು ಹಂತಗಳು**

ವಾಸ್ತವವಾಗಿ, ಮೊದಲ ಗೆಲುವು ಪ್ರತ್ಯೇಕತೆಯನ್ನು(ವೈಯಕ್ತಿಕತೆಯನ್ನು) ಸೃಷ್ಟಿಸುವುದು. ತದನಂತರ, ಎರಡನೆಯ ವಿಜಯವು ಈ ಪ್ರತ್ಯೇಕತೆಯನ್ನು ದೈವಿಕತೆಗೆ ನೀಡುವುದು. ಮೂರನೆಯ ವಿಜಯವೆಂದರೆ, ದೈವಿಕತೆಯು ನಿಮ್ಮ ಪ್ರತ್ಯೇಕತೆಯನ್ನು ದೈವೀ ಪುರುಷನನ್ನಾಗಿ ಬದಲಾಯಿಸುವುದು.

ಇಲ್ಲಿ ಮೂರು ಹಂತಗಳಿವೆ: ಮೊದಲನೆಯದು ಒಬ್ಬ ವ್ಯಕ್ತಿಯಾಗುವುದು; ಎರಡನೆಯದು, ಅವನು ಸಂಪೂರ್ಣವಾಗಿ ದೈವಿಕತೆಗೆ ಶರಣಾಗಲು ಮತ್ತು ಅವನೊಂದಿಗೆ ಗುರುತಿಸಿಕೊಳ್ಳಲು ಆ ವ್ಯಕ್ತಿಯನ್ನು ಪವಿತ್ರಗೊಳಿಸುವುದು; ಮತ್ತು ಮೂರನೆಯದು, ದೈವಿಕತೆಯು ಈ ವ್ಯಕ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಅವನೂ ಸಹ ಒಬ್ಬ ದೈವೀ ಪುರುಷನಾಗಲು ಅವನನ್ನು ತನ್ನ ಸ್ವಂತ ರೂಪದಲ್ಲಿ ಬದಲಾಯಿಸುವುದು.

ಸಾಮಾನ್ಯವಾಗಿ, ಎಲ್ಲಾ ಯೋಗಗಳು ಎರಡನೆಯದಕ್ಕೆ ನಿಂತು ಬಿಡುತ್ತವೆ. ಒಬ್ಬ ವ್ಯಕ್ತಿಯನ್ನು ಶರಣಾಗತ ಮಾಡುವಲ್ಲಿ ಯಶಸ್ವಿಯಾದಾಗ ಮತ್ತು ಅವನೊಂದಿಗೆ (ದೈವಿಕ) ಗುರುತಿಸಿಕೊಳ್ಳಲು ದೈವಿಕತೆಗೆ ನೀಡಿದಾಗ (ಸಂಕೋಚವಿಲ್ಲದೆ), ಆಗ ಅವನು ತನ್ನ ಕೆಲಸವು ಮುಗಿದಿದೆ, ಎಲ್ಲವೂ ಸಾಧಿಸಲ್ಪಟ್ಟಿದೆ ಎಂದು ಭಾವಿಸುತ್ತಾನೆ.

ನಾವು ಅಲ್ಲಿ ಪ್ರಾರಂಭಿಸುತ್ತೇವೆ ಮತ್ತು "ಇಲ್ಲ, ಇದು ಕೇವಲ ಒಂದು ಆರಂಭವೆಂದು ಹೇಳುತ್ತೇವೆ. ದೈವಿಕದೊಂದಿಗೆ ಗುರುತಿಸಿಕೊಂಡಿರುವ ನಾವು ಈ ದೈವಿಕವು ನಮ್ಮ ವೈಯಕ್ತಿಕತೆಯನ್ನು ಪ್ರವೇಶಿಸಲು ಮತ್ತು ಅದನ್ನು ದೈವಿಕ ಜಗತ್ತಿನಲ್ಲಿ ಕಾರ್ಯ ನಿರ್ವಹಿಸುವ ದೈವಿಕ ವ್ಯಕ್ತಿತ್ವವನ್ನಾಗಿ ಮಾಡಲು ನಾವು ಬಯಸುತ್ತೇವೆ." ಇದನ್ನು ನಾವು ರೂಪಾಂತರ ಎಂದು ಕರೆಯುತ್ತೇವೆ. ಆದರೆ ಇನ್ನೊಂದು ಸಂಗತಿ ಅದಕ್ಕಿಂತ ಮೊದಲು ಬರುತ್ತದೆ, ಬರಲೇಬೇಕು. ಹಾಗೆ ಮಾಡದಿದ್ದರೆ ಮೂರನೆಯದನ್ನು ಮಾಡುವ ಸಾಧ್ಯತೆಯೇ ಇಲ್ಲ. ಮೊದಲನೆಯದರಿಂದ ಮೂರನೆಯದಕ್ಕೆ ಹೋಗಲು ಸಾಧ್ಯವಿಲ್ಲ; ನಾವು ಎರಡನೆಯದರ ಮುಖಾಂತರ ಹಾದು ಹೋಗಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/402–03**

*ನಿಮ್ಮ ಹಂಬಲ, ಭಕ್ತಿ ಮತ್ತು ಶರಣಾಗತಿಯ ಸಹಾಯದಿಂದ, ಶ್ರೀಮಾತೆಯವರ ಶಕ್ತಿಯ ಕಾರ್ಯದಿಂದ ಎಲ್ಲವನ್ನೂ ಮಾಡಬೇಕಾಗಿದೆ.*

– ಶ್ರೀ ಅರವಿಂದರು

**ಮಾನಸಿಕ ಪರಿಕಲ್ಪನೆಗಳ ಶರಣಾಗತಿ**

*“ನೀವು ಭಗವಂತನೆಡೆಗೆ ಬಂದಾಗ, ನೀವು ಎಲ್ಲಾ ಮಾನಸಿಕ ಪರಿಕಲ್ಪನೆಗಳನ್ನು ತ್ಯಜಿಸಲೇಬೇಕು; ಆದರೆ, ಅದನ್ನು ಮಾಡುವ ಬದಲು, ನೀವು ನಿಮ್ಮ ಪರಿಕಲ್ಪನೆಗಳನ್ನು ಭಗವಂತನ ಮೇಲೆ ಹೇರಿ ಅವನು ಅವುಗಳನ್ನು ಪಾಲಿಸಬೇಕೆಂದು ಬಯಸುತ್ತೀರಿ.”*

ಹೌದು, ಎಲ್ಲರೂ ಇದನ್ನು ಹೇಳುತ್ತಾರೆ. ಎಲ್ಲಾ ಸಮಯದಲ್ಲೂ ಮತ್ತು ನಿರಂತರವಾಗಿ ಹೇಳುತ್ತಾರೆ. ನೀವು ಅರ್ಥಮಾಡಿಕೊಂಡಂತೆ ದೈವಿಕವು ಇಲ್ಲದಿದ್ದರೆ, ಅದು ದೈವಿಕವಲ್ಲ. ಅವನು ನಿಮಗೆ ಬೇಕಾದುದನ್ನು ಮಾಡದಿದ್ದರೆ, ಅವನು ನೀವು ಅಂದುಕೊಂಡಂತೆ ವರ್ತಿಸದಿದ್ದರೆ, ನೀವು ಅವನಿಗೆ ಕೊಡುವ ಪಾತ್ರವನ್ನು ಹೊಂದಿಲ್ಲದಿದ್ದರೆ, ಅದು ದೈವಿಕವಲ್ಲ: “ನೀವು ಏನು ಮಾಡಬೇಕೆಂದು ನಾನು ಬಯಸುತ್ತೀನೋ ಅದನ್ನು ನೀವು ಮಾಡಿದರೆ ನಾನು ನಿಮ್ಮನ್ನು ಭಗವಂತನೆಂದು ಗುರುತಿಸುತ್ತೇನೆ!” ಸ್ವಾಭಾವಿಕವಾಗಿ, ಜನರು ಅದನ್ನು ಒಪ್ಪಿಕೊಳ್ಳುವಷ್ಟು ಪ್ರಾಮಾಣಿಕವಾಗಿಲ್ಲ, ಅದಿರುವುದೆ ಹಾಗೆ. ನಾನು ನಿಮಗೆ ಲಕ್ಷಾಂತರ ಉದಾಹರಣೆಗಳನ್ನು ನೀಡಬಲ್ಲೆ – ನೂರಾರು ಅಲ್ಲ, ಲಕ್ಷಾಂತರ. ಆದರೆ ಇದನ್ನು ಅರಿವಿಲ್ಲದೆ ಮಾಡದ ಒಬ್ಬನೂ ನಿಮ್ಮ ನಡುವೆ ಇಲ್ಲ. ಇದೊಂದು ನಿಯಮ, ನಿಮಗೆ ಗೊತ್ತೆ; “ಹೌದು, ನಾನು ದೇವರಿಗೆ ಶರಣಾಗಲು ಮತ್ತು ಅವನ ಇಚ್ಛೆಯಂತೆ ನಡೆಯಲು, ಅವನ ಉಪಸ್ಥಿತಿ ಮತ್ತು ಅವನ ಕಾರ್ಯವನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ, ಆದರೆ ಅದು ಹೀಗಿದೆ ಅಥವಾ ಹಾಗೆ, ಅವನು ಹಾಗೆ ಯೋಚಿಸುತ್ತಾನೆ, ಹಾಗೆ ಭಾವಿಸುತ್ತಾನೆ, ಹಾಗೆ ವರ್ತಿಸುತ್ತಾನೆ, ಇತ್ಯಾದಿ ಎನ್ನುವ ಷರತ್ತಿನ ಮೇಲೆ.”

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/158** **– ಶ್ರೀಮಾತೆ**

**ಪ್ರಾಣದ ಶರಣಾಗತಿ**

ನಿಮ್ಮ ಪ್ರತಿಕ್ರಿಯೆಯ ವಿವರಣೆಯಿಂದ ನಾನು ಪ್ರಾಣಿಕದ ಬೇಡಿಕೆಯಿದೆ ಎಂದು ಹೇಳಿದ್ದೆ. ಶುದ್ಧ ಅತೀಂದ್ರಿಯ ಅಥವಾ ಆಧ್ಯಾತ್ಮಿಕ ಸಮರ್ಪಣೆಯಲ್ಲಿ ಈ ರೀತಿಯ ಯಾವುದೇ ಪ್ರತಿಕ್ರಿಯೆಗಳಿಲ್ಲ, ನಿರಾಶೆ ಅಥವಾ ಹತಾಶೆ ಇಲ್ಲ, ಅಭಿವ್ಯಕ್ತಿ ಇಲ್ಲ, "ನಾನು ದೇವರನ್ನು ಕಂಡುಕೊಳ್ಳುವ ಮೂಲಕ ಏನನ್ನು ಪಡೆದುಕೊಂಡಿದ್ದೇನೆ?", ನೀವು ಇಲ್ಲಿ ವಿವರಿಸಿದಂತೆ ಯಾವುದೇ ಕೋಪ, ಪ್ರತಿಭಟನೆ, ಅಭಿಮಾನ, ಹೋಗಬೇಕೆನ್ನುವ ಬಯಕೆ, ಯಾವುದೂ ಇಲ್ಲ – ಇರುವುದು, ಸಂಪೂರ್ಣ ವಿಶ್ವಾಸ ಮತ್ತು ಎಲ್ಲಾ ಪರಿಸ್ಥಿತಿಗಳಲ್ಲಿ ದೈವೀಕತೆಗೆ ಅಂಟಿಕೊಳ್ಳುವಲ್ಲಿ ನಿರಂತರತೆ. ನೀವು ಇದನ್ನು ಹೊಂದಬೇಕೆಂದು ನಾನು ಬಯಸುತ್ತೇನೆ; ಇದು, ನಾವು ತೊಂದರೆಗಳಿಂದ ಮತ್ತು ಪ್ರತಿಕ್ರಿಯೆಗಳಿಂದ ಮುಕ್ತನಾಗಿರುವ ಮತ್ತು ಸ್ಥಿರವಾಗಿ ಮುಂದುವರಿಯುವ ಏಕೈಕ ಆಧಾರವಾಗಿದೆ.

*

ಸಾಧನೆಯ ನಿಜವಾದ ಮನೋಭಾವ, ಮನಸ್ಸು ಮತ್ತು ಪ್ರಾಣದ ಸಂಕಲ್ಪವನ್ನು ಪರಮಾತ್ಮನ ಮೇಲೆ ಹೇರುವುದಲ್ಲ, ಆದರೆ ದೈವಿಕ ಸಂಕಲ್ಪವನ್ನು ಸ್ವೀಕರಿಸುವುದು ಮತ್ತು ಅದನ್ನು ಅನುಸರಿಸುವುದಾಗಿದೆ. "ಇದು ನನ್ನ ಹಕ್ಕು, ಬೇಕು, ಅಗತ್ಯತೆ, ಅವಶ್ಯಕತೆ, ನಾನು ಅದನ್ನು ಏಕೆ ಪಡೆಯುವುದಿಲ್ಲ?" ಎಂದು ಹೇಳಬಾರದು. ಆದರೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು, ಶರಣಾಗುವುದು ಮತ್ತು ಪರಮಾತ್ಮನು ಕೊಡುವದನ್ನು ದುಃಖಿಸದೆ ಅಥವಾ ಪ್ರತಿಭಟಿಸದೆ ಸಂತೋಷದಿಂದ ಸ್ವೀಕರಿಸುವುದು ಉತ್ತಮ ಮಾರ್ಗವಾಗಿದೆ. ಆಗ ನೀವು ಸ್ವೀಕರಿಸುವದು ನಿಮಗೆ ಸರಿಹೊಂದುವ ವಿಷಯವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 29/75**

ಹೆಚ್ಚಿನ ಸಾಧಕರು ಇದೇ ರೀತಿಯ ಆಲೋಚನೆಗಳನ್ನು (ಹಗೆತನ ಮತ್ತು ಕೃತಘ್ನತೆ) ಹೊಂದಿರುತ್ತಾರೆ – ಅಥವಾ ಅವುಗಳನ್ನು ಒಂದಿಲ್ಲೊಂದು ಸಮಯದಲ್ಲಿ ಹೊಂದಿರುತ್ತಾರೆ. ದೈವೀಕತೆಯನ್ನು ಬಯಸದ ಅಥವಾ ತನ್ನ ಸ್ವಂತ ಉದ್ದೇಶಕ್ಕಾಗಿ ಬಯಸುವ ಮತ್ತು ದೈವಿಕ ಉದ್ದೇಶಕ್ಕಾಗಿ ಅಲ್ಲದ ಪ್ರಾಣಿಕ ಅಹಂಕಾರದಿಂದ ಅವುಗಳು ಉದ್ಭವಿಸುತ್ತವೆ. ಅದನ್ನು ಬದಲಾಯಿಸಲು ಒತ್ತಡ ಹೇರಿದಾಗ ಅಥವಾ

ಅದರ ಆಸೆಗಳನ್ನು ಪೂರೈಸದಿದ್ದಾಗ ಅದು ಕೋಪಗೊಳ್ಳುತ್ತದೆ – ಅದು ಈ ಎಲ್ಲಾ ವಿಷಯಗಳ ಮೂಲದಲ್ಲಿದೆ. ಅದಕ್ಕಾಗಿಯೇ ನಾವು ಈ ಯೋಗದಲ್ಲಿ ಶರಣಾಗತಿಯ ಮೆಲೆ ಹೆಚ್ಚು ಒತ್ತು ಕೊಡುತ್ತೇವೆ – ಏಕೆಂದರೆ ಶರಣಾಗತಿಯಿಂದ ಮಾತ್ರ (ವಿಶೇಷವಾಗಿ ಪ್ರಾಣಿಕ ಅಹಂಕಾರದ) ಈ ಸಂಗತಿಗಳು ಹೋಗಬಹುದು – ದೈವಿಕವನ್ನು ದೈವಿಕ ಉದ್ದೇಶಕ್ಕಾಗಿ ಮತ್ತು ಬೇರೆ ಯಾವುದೇ ಉದ್ದೇಶಕ್ಕಾಗಿ ಅಲ್ಲದೆ ಸ್ವೀಕರಿಸಲು, ಮತ್ತು ನಮ್ಮ ಸ್ವಂತ ಮಾರ್ಗದಲ್ಲಿ ಅಲ್ಲದೆ ದೈವಿಕ ಮಾರ್ಗದಲ್ಲಿ ಅಥವಾ ನಮ್ಮ ಸ್ವಂತ ಪರಿಸ್ಥಿತಿಗಳ ಮೇಲೆ ಅವಲಂಬಿಸದೆ ಸಾಧನೆಯನ್ನು ಮಾಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/75 – ಶ್ರೀ ಅರವಿಂದರು**

**ಶರಣಾಗತಿ ಮತ್ತು ಚೈತ್ಯ**

ಚೈತ್ಯ ಪುರುಷನಿಗೆ ಯಾವುದೇ ಶರಣಾಗತಿಯನ್ನು ಕೋರಲಾಗುವುದಿಲ್ಲ, ಶರಣಾಗತಿಯು ಪರಮಾತ್ಮನಿಗೆ. ನಾವು ಪರಮಾತ್ಮನ ಸಮೀಪಕ್ಕೆ ನಂಬಿಕೆಯ ಮೂಲಕ ಹೋಗುತ್ತೇವೆ; ನಿಶ್ಚಿತವಾದ ಅನುಭವವು ಸಾಧನೆಯ ಪರಿಣಾಮವಾಗಿ ಬರುತ್ತದೆ. ಅದಕ್ಕಾಗಿ ಪ್ರಜ್ಞೆಯನ್ನು ಸಿದ್ಧಪಡಿಸಲು, ಏನನ್ನೂ ಮಾಡದೆ ನೇರ ಅನುಭವವನ್ನು ನಾವು ಬೇಡಲಾಗುವುದಿಲ್ಲ. ನಾವು ಕರೆಯನ್ನು ಅನುಭವಿಸಿದರೆ, ಅದನ್ನು ಅನುಸರಿಸಬೇಕು – ಯಾವುದೇ ಕರೆ ಇಲ್ಲದಿದ್ದರೆ, ದೇವರನ್ನು ಹುಡುಕುವ ಅಗತ್ಯವಿಲ್ಲ. ಪ್ರಾರಂಭ ಮಾಡಲು ನಂಬಿಕೆಯೊಂದು ಸಾಕು – (ಪರಮಾತ್ಮನನ್ನು) ಹುಡುಕುವ ಮೊದಲು ನಾವು ಮೊದಲು ಅರ್ಥಮಾಡಿಕೊಳ್ಳಬೇಕು ಮತ್ತು ಅರಿತುಕೊಳ್ಳಬೇಕು ಎಂಬ ಕಲ್ಪನೆಯು ಮಾನಸಿಕ ದೋಷವಾಗಿದೆ ಮತ್ತು ಅದು ನಿಜವಾಗಿದ್ದರೆ ಎಲ್ಲಾ ಸಾಧನೆಗಳನ್ನು ಅಸಾಧ್ಯವಾಗಿಸುತ್ತದೆ – ಸಾಕ್ಷಾತ್ಕಾರವು ಸಾಧನೆಯ ಪರಿಣಾಮವಾಗಿ ಮಾತ್ರ ಬರಬಹುದು, ಅದರ ಪೂರ್ವಭಾವಿಯಾಗಿ ಅಲ್ಲ.

*

ಈ ಎಲ್ಲ ಜಟಿಲತೆಯ ಅಗತ್ಯವಿಲ್ಲ. ಚೈತ್ಯವು ಪ್ರಕಟವಾದರೆ, ಅದು ನಿಮ್ಮನ್ನು ಅದಕ್ಕೆ ಶರಣಾಗುವಂತೆ ಕೇಳುವುದಿಲ್ಲ, ಬದಲಿಗೆ ಶ್ರೀಮಾತೆಯವರಿಗೆ ಶರಣಾಗಲು ಕೇಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/76 – ಶ್ರೀ ಅರವಿಂದರು**

## ಪರಮಾತ್ಮನೊಂದಿಗೆ ಒಪ್ಪಂದ ಮಾಡಿಕೊಳ್ಳುವುದು

ಶರಣಾಗತಿ ಮತ್ತು ತ್ಯಾಗದ ಬಗ್ಗೆ ನಾನು ಬೇರೆಡೆ ಹೇಳಿರುವಂತೆ, ಯಾರೋ ಒಬ್ಬನು ಯಾವುದೋ ಸಂಗತಿಯ ಬಗ್ಗೆ ಪಶ್ಚಾತ್ತಾಪಪಟ್ಟರೆ, ಅವನು ಆಧ್ಯಾತ್ಮಿಕ ಪ್ರಜ್ಞೆಯ ಸ್ಥಿತಿಯಲ್ಲಿಲ್ಲ ಎಂದು ಅರ್ಥ. ಒಬ್ಬನು ತನ್ನ ಆಸೆಗಳನ್ನು ಇನ್ನು ಮುಂದೆ ಪೂರೈಸಲು ಸಾಧ್ಯವಿಲ್ಲ ಎಂದು ವಿಷಾದಿಸಿದರೆ, ಬಯಕೆಗಳು ತೀರ ಕಡಿಮೆ ಪ್ರಾಮುಖ್ಯವಾಗಿವೆ ಎಂದು ಅರ್ಥ (ನಾವು ಬಯಸಿದ ಸಂಗತಿಗಿಂತ ಹೆಚ್ಚು ಇರದಿದ್ದರೆ). ನೀವು ಹೀಗೆ ಹೇಳಬಹುದು, "ಆಸೆಗಳ ಬಗ್ಗೆ ನಾನು ಸಾಕಷ್ಟು ಜಾಗೃತಿ ಹೊಂದಿದ್ದೇನೆ, ಆದರೆ ನಾನು ಪರಮಾತ್ಮನನ್ನು ಪಡೆಯುವ ಕಲ್ಪನೆಯೊಂದಿಗೆ ನನ್ನ ಆಸೆಗಳನ್ನು ತ್ಯಜಿಸಿದರೆ, ನಾನು ಅವನನ್ನು ಹೊಂದುತ್ತೇನೆ ಎನ್ನುವ ಖಚಿತತೆ ನನಗಿಲ್ಲ; ಆದ್ದರಿಂದ ನಾನು ಇದನ್ನು ತ್ಯಾಗ ಎಂದು ಕರೆಯುತ್ತೇನೆ." ಆದರೆ ನಾನು, ನಾನು ಅದನ್ನು ಒಪ್ಪಂದ ಅಥವಾ ಚೌಕಾಶಿ ಎಂದು ಕರೆಯುತ್ತೇನೆ! ಇದು ಪರಮಾತ್ಮನೊಂದಿಗೆ ಚೌಕಾಸಿ ಮಾಡುವುದು. ಒಬ್ಬನು ಅವನಿಗೆ(ಭಗವಂತನಿಗೆ) ಹೇಳುತ್ತಾನೆ, "ಕೊಡು ಮತ್ತು ತೆಗೆದುಕೊ; ನಾನು, ನನ್ನ ಆಸೆಗಳನ್ನು ಪೂರೈಸುವಲ್ಲಿ ನನಗಿರುವ ಸಂತೋಷವನ್ನು ನಾನು ನೀಡುತ್ತೇನೆ, ಅದಕ್ಕೆ ಬದಲಾಗಿ ನನ್ನೊಳಗೆ ನಿನ್ನನ್ನು ಅನುಭವಿಸುವ ಸಂತೋಷವನ್ನು ನೀನು ನನಗೆ ಕೊಡಬೇಕು, ಇಲ್ಲದಿದ್ದರೆ ಅದು ನ್ಯಾಯಯುತವಲ್ಲ." ಇದು ಸಮರ್ಪಣೆಯಲ್ಲ, ಇದು ಚೌಕಾಶಿ.

ಇದು ನಾನು ಆಗಾಗ್ಗೆ ಕೇಳಿರುವ ವಿಷಯ: "ನಾನು ಅನೇಕ ವಿಷಯಗಳನ್ನು ತ್ಯಾಗ ಮಾಡಿದ್ದೇನೆ, ನಾನು ತುಂಬಾ ಪ್ರಯತ್ನ ಮಾಡಿದ್ದೇನೆ, ತುಂಬಾ ಕಷ್ಟ ಪಟ್ಟಿದ್ದೇನೆ ಮತ್ತು ಈಗ ನೋಡಿ, ವಿನಿಮಯದಲ್ಲಿ ನನ್ನ ಬಳಿ ಏನೂ ಇಲ್ಲ." "ಆಶ್ಚರ್ಯವಿಲ್ಲ!" ಎಂದು ಮಾತ್ರ ನಾನು ಹೇಳಬಲ್ಲೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/349–50 – ಶ್ರೀಮಾತೆ**

## ಶರಣಾಗಲು ನಿಜವಾದ ಪ್ರತಿಬಂಧ

ವಿಶ್ವಾತ್ಮಕನಿಗಾಗಲಿ ಅಥವಾ ಅನಂತನಿಗಾಗಲಿ, ಸ್ವಯಂ–ಶರಣಾಗತಿ ಮಾಡಿಕೊಳ್ಳಲು ನಿಜವಾದ ಅಡ್ಡಿ ಯಾವುದೆಂದರೆ, ವ್ಯಕ್ತಿಯ ಸ್ವಂತ ಮಿತಿಗಳ ಪ್ರೀತಿಯಾಗಿದೆ. ಇದು ಸ್ವಾಭಾವಿಕ ಪ್ರೀತಿಯಾಗಿದೆ, ಏಕೆಂದರೆ ವ್ಯಕ್ತಿಯ

ರಚನೆಯಲ್ಲಿಯೇ ಮಿತಿಗಳ ಮೇಲೆ ಕೇಂದ್ರೀಕರಿಸುವ ಪ್ರವೃತ್ತಿ ಇರುತ್ತದೆ. ಅದಿಲ್ಲದೆ, ಪ್ರಜ್ಞೆಯ ಮಾನಸಿಕ ಮತ್ತು ಪ್ರಾಣಿಕ ಪ್ರಮುಖ ಕ್ರಿಯೆಗಳಲ್ಲಿ ಆಗಾಗ್ಗೆ ಸಂಭವಿಸುವಂತೆ, ಅಲ್ಲಿ ಪ್ರತ್ಯೇಕತೆಯ ಯಾವುದೇ ಅರ್ಥವಿಲ್ಲ – ಎಲ್ಲವೂ ಮಿಶ್ರಿತಗೊಳ್ಳುತ್ತದೆ. ಅಷ್ಟೊಂದು ಅಸ್ಥಿರವಾಗಿರದೆ, ವಿಶೇಷವಾಗಿ ಪ್ರತ್ಯೇಕತೆಗೆ ಕಾರಣವಾಗುವ ವೈಯಕ್ತಿಕತೆಯನ್ನು ಕಾಪಾಡುವ ದೇಹ ಇದಾಗಿದೆ. ಆದರೆ ಒಮ್ಮೆ ಈ ಪ್ರತ್ಯೇಕತೆಯನ್ನು ಸ್ಥಾಪಿಸಿದ ನಂತರ, ಅದನ್ನು ಕಳೆದುಕೊಳ್ಳುವ ಭಯವು ನುಸುಳಲು ಪ್ರಾರಂಭವಾಗುತ್ತದೆ – ಅನೇಕ ವಿಷಯಗಳಲ್ಲಿ ಇದೊಂದು ಆರೋಗ್ಯಕರ ಪ್ರವೃತ್ತಿ, ಆದರೆ ದೇವರಿಗೆ ಸಂಬಂಧಿಸಿದಂತೆ ತಪ್ಪಾಗಿ ಅನ್ವಯಿಸಲ್ಪಟ್ಟಿದೆ. ಏಕೆಂದರೆ, ದೈವಿಕದಲ್ಲಿ ನೀವು ನಿಜವಾಗಿಯೂ ನಿಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುವುದಿಲ್ಲ: ನೀವು ನಿಮ್ಮ ಅಹಂಕಾರವನ್ನು ಮಾತ್ರ ಬಿಟ್ಟುಬಿಡುತ್ತೀರಿ ಮತ್ತು ನಿಷ್ಠೆಯ ವ್ಯಕ್ತಿಯಾಗುತ್ತೀರಿ, ಸಾಮಾನ್ಯವಾಗಿ ಆತ್ಮವೆಂದು ಪರಿಗಣಿಸಿದ ತಾತ್ಕಾಲಿಕವಲ್ಲದ ದೈಹಿಕ ಪ್ರಜ್ಞೆಯ ನಿರ್ಮಾಣದಂತೆ ದಿವ್ಯ ವ್ಯಕ್ತಿಯಾಗುತ್ತೀರಿ. ದೈವಿಕ ಪ್ರಜ್ಞೆಯ ಒಂದು ಸ್ಪರ್ಶದಲ್ಲಿ ಯಾವುದೇ ನಷ್ಟವಿಲ್ಲ ಎನ್ನುವುದನ್ನು ನೀವು ತಕ್ಷಣ ನೋಡುತ್ತೀರಿ. ಇದಕ್ಕೆ ತದ್ವಿರುದ್ಧವಾಗಿ, ನೀವು ದೇಹದ ನೂರು ಸಾವುಗಳನ್ನು ಮತ್ತು ಪ್ರಾಣಿಕ–ಮಾನಸಿಕದ ಎಲ್ಲ ವಿಕಸನಗಳನ್ನು ತಡೆದುಕೊಳ್ಳುವ ನಿಜವಾದ ವೈಯಕ್ತಿಕ ಶಾಶ್ವತತೆಯನ್ನು ಪಡೆದುಕೊಳ್ಳುತ್ತೀರಿ. ಈ ರೂಪಾಂತರದ ಸ್ಪರ್ಶವಿಲ್ಲದೆ, ನೀವು ಯಾವಾಗಲೂ ಭಯದಲ್ಲಿರುವಿರಿ; ಅದರೊಂದಿಗೆ (ರೂಪಾಂತರದ ಸ್ಪರ್ಶ), ಅದರ ಪ್ರತ್ಯೇಕತೆಯನ್ನು ಕಳೆದುಕೊಳ್ಳದೆ ನಿಮ್ಮ ಭೌತಿಕ ಅಸ್ತಿತ್ವವನ್ನು ಮೆದು ಮಾಡಲು ಕ್ರಮೇಣ ಶಕ್ತಿಯನ್ನು ನೀವು ಬೆಳೆಸಿಕೊಳ್ಳುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/168–69**

**ದೇಹದ ಶರಣಾಗತಿ**

ನಿಮಗೆ ಎಲ್ಲೋ (ದೇಹದಲ್ಲಿ) ನೋವು ಇದೆ ಎಂದು ಭಾವಿಸೋಣ; ದೇಹದ ಪ್ರವೃತ್ತಿ ಮತ್ತು ಜೀವಕೋಶಗಳ ಪ್ರವೃತ್ತಿ ಏನೆಂದರೆ, ಆ ನೋವನ್ನು ಕುಗ್ಗಿಸಲು ಮತ್ತು ತಿರಸ್ಕರಿಸಲು ಪ್ರಯತ್ನಿಸುವುದು – ಇದು ಒಳ್ಳೆಯ ವಿಷಯವಲ್ಲ, ಅದು ನೋವನ್ನು ನಿರಂತರವಾಗಿ ಹೆಚ್ಚಾಗಿಸುತ್ತದೆ. ಆದ್ದರಿಂದ, ದೇಹಕ್ಕೆ ಕಲಿಸುವ ಮೊದಲ ಸಂಗತಿ ಏನೆಂದರೆ ನಿಶ್ಚಲವಾಗಿರುವುದು, ಯಾವುದೇ ಪ್ರತಿಕ್ರಿಯೆಯನ್ನು

ತೋರದೆ ಇರುವುದು; ಎಲ್ಲಕ್ಕಿಂತ ಹೆಚ್ಚಾಗಿ, ಯಾವುದೇ ಕುಗ್ಗುವಿಕೆ ಇಲ್ಲದೆ, ನಿರಾಕರಣೆಯ ಕ್ರಿಯೆ ಸಹ ಇಲ್ಲದೆ – ಪರಿಪೂರ್ಣ ನಿಶ್ಚಲತೆಯಿಂದ ಇರುವುದು. ಅದು ದೈಹಿಕ ಸಮಾನತೆ.

ಪರಿಪೂರ್ಣ ಸ್ಥಿರತೆ.

ಪರಿಪೂರ್ಣ ನಿಶ್ಚಲತೆಯ ನಂತರ ಆಂತರಿಕ ಮಹತ್ವಾಕಾಂಕ್ಷೆಯ ಚಲನೆಯು (ಕ್ರಿಯೆ) ಬರುತ್ತದೆ (ನಾನು ಯಾವಾಗಲೂ ಕೋಶಗಳ ಆಕಾಂಕ್ಷೆಯ ಬಗ್ಗೆ ಮಾತನಾಡುತ್ತೇನೆ – ಪದವಿಲ್ಲದಿದ್ದಕ್ಕೆ ನಾನು ಪದಗಳನ್ನು ಬಳಸುತ್ತೇನೆ, ಆದರೆ ಅದನ್ನು ವ್ಯಕ್ತಪಡಿಸಲು ಬೇರೆ ಮಾರ್ಗವಿಲ್ಲ), ಶರಣಾಗತಿ, ಅಂದರೆ, (ಯಾರೂ ತಿಳಿಯದ) ಸರ್ವೋಚ್ಚ ಇಚ್ಛೆಯ ಸ್ವಯಂಪ್ರೇರಿತ ಮತ್ತು ಸಂಪೂರ್ಣ ಸ್ವೀಕೃತಿ. ಸಂಗತಿಗಳು ಈ ರೀತಿಯಲ್ಲಿ ಅಥವಾ ಆ ರೀತಿಯಲ್ಲಿ ಹೋಗಬೇಕೆಂದು, ಅಂದರೆ ಕೆಲವು ಅಂಶಗಳ ವಿಘಟನೆಯ ಕಡೆಗೆ ಅಥವಾ ....ಕಡೆಗೆ ಹೋಗಬೇಕೆಂದು ಪೂರ್ಣ ಸಂಕಲ್ಪವು ಬಯಸುತ್ತದೆಯೇ? ಅಲ್ಲಿಯೂ ಸಹ ಅನಂತ ಛಾಯೆಗಳಿವೆ: ಎರಡು ಔನ್ನತ್ಯಗಳ ನಡುವೆ ಒಂದು ಮಾರ್ಗವಿರುತ್ತದೆ (ನಾನು ಚಿಕ್ಕ ಸಂಗತಿಯ ಸಾಕ್ಷಾತ್ಕಾರಗಳ ಬಗ್ಗೆ ಮಾತನಾಡುತ್ತೇನೆ, ಅದನ್ನು ಮರೆಯಬೇಡಿ); ನನ್ನ ಪ್ರಕಾರ ಒಬ್ಬ ವ್ಯಕ್ತಿಯು ಒಂದು ನಿರ್ದಿಷ್ಟ ಆಂತರಿಕ ನಿಲುವನ್ನ, ಕ್ರಿಯೆಯ ನಿಲುವನ್ನ, ಜೀವನದ ನಿಲುವನ್ನ ಹೊಂದಿದ್ದಾನೆ, ಮತ್ತು ಒಂದು ಕ್ರಿಯೆಯಿಂದ ಉನ್ನತ ಕ್ರಿಯೆಗೆ ಹಾದುಹೋಗುವಾಗ, ಯಾವಾಗಲೂ ಅವರೋಹಣ ಮತ್ತು ನಂತರ ಆರೋಹಣ ಸಂಭವಿಸುತ್ತದೆ – ಇದೊಂದು ಮಧ್ಯಕಾಲವೆಂದು ತಿಳಿಯಲಾಗಿದೆ. ನಂತರ, ನೀವು ಪಡೆಯುವ ಆಘಾತವು ನಿಮ್ಮನ್ನು ಮತ್ತೆ ಮೇಲಕ್ಕೆತ್ತಲು ಕೆಳಕ್ಕೆ ತಳ್ಳುತ್ತದೆಯೇ ಅಥವಾ ಹಳೆಯ ಕ್ರಿಯೆಯನ್ನು ತ್ಯಜಿಸಲು ಅದು ನಿಮ್ಮನ್ನು ಕೆಳಕ್ಕೆ ತಳ್ಳುತ್ತದೆಯೇ? – ಏಕೆಂದರೆ, ಅಲ್ಲಿ ಇರುವಿಕೆಯ ಚಿಕ್ಕ ಮಾರ್ಗಗಳಿವೆ, ಅವುಗಳು ಇತರ ಮಾರ್ಗಗಳಿಗೆ ಸ್ಥಳವನ್ನು ನೀಡುವ ಸಲುವಾಗಿ ಕಣ್ಮರೆಯಾಗಬೇಕು. ಹೆಚ್ಚಿನ ಸಾಮರಸ್ಯ ಮತ್ತು ಸಂಘಟನೆಯೊಂದಿಗೆ ಮತ್ತೆ ಮೇಲಕ್ಕೇರಲು ಒಲವು ತೋರುವ ಇತರರು ಇದ್ದಾರೆ. ಇದು ಎರಡನೇ ಅಂಶವಾಗಿದೆ. ಮುಂದೆ ಏನಾಗಬೇಕು ಎಂಬುದನ್ನು ಮುಂಚಿತವಾಗಿ ಪ್ರತಿಪಾದಿಸದೆ ನಾವು ಕಾದು ನೋಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಬಯಕೆ ಇದೆ – ನಿರಾಳವಾಗಿರುವ ಬಯಕೆ, ಶಾಂತಿಯಿಂದ ಇರಬೇಕೆಂಬ ಬಯಕೆ, ಎಲ್ಲ ಬಯಕೆಯೂ ಸಂಪೂರ್ಣವಾಗಿ ನಿಲ್ಲಬೇಕು,

ಕಣ್ಮರೆಯಾಗಬೇಕು. ನಾವು ಸಂಪೂರ್ಣವಾಗಿ ಪ್ರತಿಕ್ರಿಯೆಯಿಲ್ಲದೆ ಇರಬೇಕು, ಈ ರೀತಿ (ಮೇಲ್ಮುಖವಾಗಿ ತೆರೆದ ಅಂಗೈಗಳಿಂದ ಚಲನರಹಿತ ಅರ್ಪಣೆಯ ಸನ್ನೆ). ತದನಂತರ, ನಾವು ಹಾಗೆ ಇದ್ದಾಗ ("ನಾವು" ಎಂದರೆ ಜೀವಕೋಶಗಳು), ಸ್ವಲ್ಪ ಸಮಯದ ನಂತರ ಕ್ರಿಯೆಯು ಯಾವ ವರ್ಗಕ್ಕೆ ಸೇರಿದೆ ಎಂಬ ಗ್ರಹಿಕೆ ಬರುತ್ತದೆ ಮತ್ತು ಅದು ಕಣ್ಮರೆಯಾಗುವ ಹಾಗೂ ಇನ್ನೊಂದು ಸಂಗತಿಯಿಂದ (ಇದು ಸದ್ಯಕ್ಕೆ ತಿಳಿದಿಲ್ಲ) ಬದಲಾಯಿಸಲ್ಪಡುವ ಸಂಗತಿಯೋ ಅಥವಾ ಅದು ರೂಪಾಂತರ ಹೊಂದಬೇಕಾದ ಸಂಗತಿಯೋ ಎಂದು ನೋಡಲಿಕ್ಕಾಗಿ ಮಾತ್ರ ನಾವು ಅನುಸರಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/13–14**

**ಪರಿಪೂರ್ಣ ಶರಣಾಗತಿಯ ಸಂಕೇತ**

*ಶ್ರೀಮಾತೆಯವರೆ, ಈ ಕೆಳಗಿನ ಪ್ರಶ್ನೆಯನ್ನು ಇಲ್ಲಿ ಕೇಳಲಾಗಿದೆ: "ಪರಮಾತ್ಮನಿಗೆ ಶರಣಾಗಲು ಸಾಧಕನ ಸಂಕಲ್ಪವು ಅವನ ಜೀವನದಲ್ಲಿ ವಾಸ್ತವಿಕ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಸೂಚಿಸುವ ಸಂಕೇತ ಯಾವುದು?" ಶ್ರೀ ಅರವಿಂದರು ಉತ್ತರಿಸುತ್ತಾರೆ: "ಪ್ರಶ್ನೆ ಅಥವಾ ಪ್ರತಿಭಟನೆ ಅಥವಾ ಬೇಡಿಕೆ ಇಲ್ಲದೆ ಅಥವಾ ಷರತ್ತುಗಳಿಲ್ಲದೆ ಅವನು ಸಂಪೂರ್ಣ ವಿಧೇಯತೆಯನ್ನು ಹೊಂದಿದ್ದಾನೆ ಮತ್ತು ಅವನು ಪರಮಾತ್ಮನ ಎಲ್ಲಾ ಪ್ರಭಾವಗಳಿಗೆ ಉತ್ತರಿಸುತ್ತಾನೆ ಮತ್ತು ಪರಮಾತ್ಮನಿಂದ ಬರದ ಎಲ್ಲವನ್ನೂ ತಿರಸ್ಕರಿಸುತ್ತಾನೆ ಎನ್ನುವುದೇ ಸಂಕೇತ."*

*ಇದು ತೃಪ್ತಿ ನೀಡಿದ ಶರಣಾಗತಿಯಲ್ಲವೇ?*

ನೀವು ಏನು ಹೇಳುತ್ತೀರಿ ಎಂದು ನನಗೆ ಗೊತ್ತಾಗುತ್ತಿಲ್ಲ. ಅವನು ತನ್ನ ಶರಣಾಗತಿಯು ಪರಿಪೂರ್ಣವೆಂದು ತೋರಿಸುವ ಸಂಕೇತ ಯಾವುದೆಂದು ಕೇಳುತ್ತಿದ್ದಾನೆ. ಅಲ್ಲಿ ಸಕ್ರಿಯ ಅಥವಾ ನಿಷ್ಕ್ರಿಯ ಶರಣಾಗತಿಯ ಪ್ರಶ್ನೆಯೇ ಇಲ್ಲ. ಶರಣಾಗತಿಯ ನಿರ್ಣಯವು ಕೆಲವು ಫಲಿತಾಂಶಗಳನ್ನು ತರುತ್ತದೆ ಎಂದು ಅವನು ಹೇಳುತ್ತಾನೆ. ಮೊದಲ ಫಲಿತಾಂಶವೆಂದರೆ, ಪ್ರಶ್ನಿಸದೆ ವಿಧೇಯರಾಗಿರುವುದು ಮತ್ತು ಎರಡನೆಯದು ಪರಮಾತ್ಮನ ಪ್ರಭಾವವನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಭಾವಗಳನ್ನು ತಿರಸ್ಕರಿಸುವ ಶಕ್ತಿಯನ್ನು ಹೊಂದಿರುವುದಾಗಿದೆ. ಇವು

ಉತ್ತಮ ಫಲಿತಾಂಶಗಳಾಗಿವೆ. ಇವುಗಳನ್ನು ಸಾಧಿಸಿದವರು, ಈಗಾಗಲೇ ಸಾಕಷ್ಟು ಮುಂದುವರಿದಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/129**

ಹೌದು, ಉನ್ನತ ಪ್ರಾಣವು ಮನಸ್ಸಿನ ಪ್ರಭಾವದಲ್ಲಿರುವುದರಿಂದ ಮತ್ತು ಕೆಲವೊಮ್ಮೆ ಚೈತ್ಯವೂ ಸಹ ಅಗಿರುವುದರಿಂದ ಅದು ಶರಣಾಗಲು ಸಾಮಾನ್ಯವಾಗಿ ಕಡಿಮೆ ಕಷ್ಟಕರವಾಗಿರುತ್ತದೆ; ಆದ್ದರಿಂದ ಅದು ಹೆಚ್ಚು ಸುಲಭವಾಗಿ ಅರ್ಥಮಾಡಿಕೊಳ್ಳುತ್ತದೆ. ನಿಮ್ನ ಪ್ರಾಣವು ಮೂಲಭೂತವಾಗಿ ಆಸೆಗಳ ಮತ್ತು ಪ್ರಚೋದನೆಗಳ ಪ್ರಾಣವಾಗಿರುವುದರಿಂದ, ನಿಮ್ನ ಪ್ರಾಣಕ್ಕಿಂತ ಉನ್ನತ ಪ್ರಾಣವನ್ನು ಪರಿವರ್ತಿಸುವುದು ತುಂಬಾ ಸುಲಭ. ಇಲ್ಲಿ ಇದರ ಅರ್ಥವೇನೆಂದರೆ, ನಿಮ್ನ ಪ್ರಾಣವು ಶರಣಾಗಬಹುದು, ಅದು ವಿಧೇಯವಾಗಿರಲು ಒಪ್ಪುತ್ತದೆ, ಕೇಳಿದ್ದನ್ನು ಮಾಡಲು ಒಪ್ಪುತ್ತದೆ, ಆದರೆ ಎಂದಿಗೂ ತೃಪ್ತಿ ಹೊಂದುವುದಿಲ್ಲ. ಅದು ಸಂತಸದಿಂದಿಲ್ಲ; ಕೆಲವೊಮ್ಮೆ ಅದು ಸಂಕಟಪಡುತ್ತದೆ; ಅದು ತನ್ನ ಪ್ರತಿಭಟನೆಯನ್ನು ವಿಧೇಯತೆಯ ಮೂಲಕ ತನ್ನೊಳಗೆ ನೂಕುತ್ತದೆ, ಆದರೆ ಅದು ಸಹಕರಿಸುವುದಿಲ್ಲ. ಪ್ರಾಣವು ಆನಂದದ ನಿಜವಾದ ಪ್ರೀತಿಯೊಂದಿಗೆ ಸಹಕರಿಸದ ಹೊರತು, ಏನನ್ನೂ ಮಾಡಲಾಗುವುದಿಲ್ಲ; ಪರಿವರ್ತನೆ ಬರಲು ಸಾಧ್ಯವಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/204**

**ತಾಮಸಿಕ ಶರಣಾಗತಿ**

> *"ಷರತ್ತುಗಳನ್ನು ಪಾಲಿಸಲು ನಿರಾಕರಿಸುವ ತಾಮಸಿಕ ಶರಣಾಗತಿ" – ಷರತ್ತುಗಳನ್ನು ಪಾಲಿಸಲು ನಿರಾಕರಿಸಿದರೆ, ಅದು ಶರಣಾಗತಿಯೇ ಅಲ್ಲ, ಅಲ್ಲವೇ?*

ಖಂಡಿತವಾಗಿ. ಆದರೆ ತಾವು ಶರಣಾಗಿದ್ದೇವೆ ಎಂದು ಭಾವಿಸಿದ ಅನೇಕರು, "ನಾನು ಇನ್ನು ಮುಂದೆ ನನ್ನಷ್ಟಕ್ಕೆ ನಾನು ಏನನ್ನೂ ಮಾಡುವುದಿಲ್ಲ, ನಾನು ನನ್ನನ್ನು ದೇವರಿಗೆ ಒಪ್ಪಿಸಿಕೊಂಡಿದ್ದೇನೆ, ಪರಮಾತ್ಮನು ನನಗಾಗಿ ಎಲ್ಲವನ್ನೂ ಮಾಡಬೇಕು" ಎಂದು ಹೇಳುವವರೂ ಇದ್ದಾರೆ. ಇದನ್ನು ಅವರು ಶರಣಾಗತಿ ಎಂದು ಕರೆಯುತ್ತಾರೆ.... ಅಂದರೆ, ಇದು ಸೋಮಾರಿತನ ಮತ್ತು ತಮಸ್ಸಿನ

ಕ್ರಿಯೆಯಾಗಿದ್ದು ಅದು ಯಾವುದೇ ಪ್ರಯತ್ನವನ್ನು ಮಾಡಲು ಬಯಸುವುದಿಲ್ಲ ಮತ್ತು ನಿಮಗಾಗಿ ಪರಮಾತ್ಮನು ಎಲ್ಲವನ್ನೂ ಮಾಡಬೇಕೆಂದು ಇಷ್ಟಪಡುತ್ತಾನೆ, ಯಾಕೆಂದರೆ ಅದು ಹೆಚ್ಚು ಆರಾಮದಾಯಕವಾಗಿದೆ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/221**

## ಸಂಪೂರ್ಣ ಶರಣಾಗತಿಯ ಸ್ಥಿತಿ

ನಾವು ಸಂಪೂರ್ಣ ಶರಣಾಗತಿಯ ಸ್ಥಿತಿಯಲ್ಲಿದ್ದರೆ ಮತ್ತು ನಮ್ಮನ್ನು ನಾವು ಸಂಪೂರ್ಣವಾಗಿ ಅರ್ಪಿಸಿಕೊಂಡರೆ, ನಮ್ಮನ್ನು ನಾವು ಆ ಕೃಪೆಗೆ ಅರ್ಪಿಸಿಕೊಂಡರೆ ಮತ್ತು ಅದನ್ನು ತನ್ನಿಷ್ಟದಂತೆ ಮಾಡಲು ಅವಕಾಶ ನೀಡಿದರೆ, ಅದು ಸಹಜವಾಗಿಯೆ ತುಂಬಾ ಒಳ್ಳೆಯದು. ಆದರೆ ಅದರ ನಂತರ ಅದು ಏನು ಮಾಡುತ್ತದೆ ಎಂದು ನಾವು ಪ್ರಶ್ನಿಸಬಾರದು! "ಓಹ್! ಇದನ್ನು ಹೊಂದುವ ಆಲೋಚನೆಯೊಂದಿಗೆ ನಾನು ಅದನ್ನು ಮಾಡಿದೆ ಎಂದು ನಾವು ಹೇಳಬಾರದು, ಏಕೆಂದರೆ ನಮಗೆ ನಿಜವಾಗಿಯೂ ಏನನ್ನಾದರೂ ಪಡೆಯುವ ಆಲೋಚನೆ ಇದ್ದರೆ, ಅದನ್ನು ಸರಳವಾಗಿ, ಪ್ರಾಮಾಣಿಕವಾಗಿ, ವ್ಯವಸ್ಥಿತವಾಗಿ ಪ್ರತಿಪಾದಿಸುವುದು ಉತ್ತಮ. ನಂತರ, ಅದನ್ನು ಮಾಡಬೇಕೆ ಅಥವಾ ಬೇಡವೇ ಎಂಬುದನ್ನು ಆಯ್ಕೆ ಮಾಡುವುದು ಕೃಪೆಗೆ ಬಿಟ್ಟಿದ್ದು; ಆದರೆ ಯಾವುದೇ ಸಂದರ್ಭದಲ್ಲಿ, ನಾವು ಬಯಸಿದ್ದನ್ನು ಸ್ಪಷ್ಟವಾಗಿ ನಿರೂಪಿಸಬೇಕು, ಅದರಲ್ಲಿ ಯಾವುದೇ ಹಾನಿ ಇಲ್ಲ.

ನಮ್ಮ ವಿನಂತಿಗೆ ಸಮ್ಮತಿಯು ಸಿಗದಿದ್ದಾಗ ಮತ್ತು ನಾವು ಪ್ರತಿಭಟಿಸಿದಾಗ ಸಹಜವಾಗಿಯೇ ಎಲ್ಲವೂ ಕೆಟ್ಟದಾಗುತ್ತದೆ. ಆಗ ಸ್ವಾಭಾವಿಕವಾಗಿ ಅದು ಕೆಟ್ಟದಾಗುತ್ತದೆ. ಆ ಕ್ಷಣದಲ್ಲಿ ನಾವು ಹೊಂದಿರುವ ಬಯಕೆ ಅಥವಾ ಆಕಾಂಕ್ಷೆಯು ಹೆಚ್ಚು ಪ್ರಬುದ್ಧವಾಗಿಲ್ಲದಿರಬಹುದು ಮತ್ತು ಬಹುಶಃ ನಮಗೆ ಒಳ್ಳೆಯದಲ್ಲದ ಏನನ್ನಾದರೂ ನಾವು ಕೇಳಿರಬಹುದು ಎಂದು ಅರ್ಥಮಾಡಿಕೊಳ್ಳಬೇಕು. ಆ ಕ್ಷಣದಲ್ಲಿ ನಾವು ಬುದ್ಧಿವಂತನಾಗಿರಬೇಕು ಮತ್ತು "ಸರಿ, ನಿನ್ನ ಚಿತ್ತವು ನೆರವೇರಲಿ" ಎಂದು ಸರಳವಾಗಿ ಹೇಳಬೇಕು. ಆದರೆ ನಾವು ಆಂತರಿಕ ಗ್ರಹಿಕೆ ಮತ್ತು ಆಂತರಿಕ ಆದ್ಯತೆಯನ್ನು ಹೊಂದಿರುವವರೆಗೆ, ಅದನ್ನು ನಿರೂಪಿಸುವುದರಲ್ಲಿ ಯಾವುದೇ ಹಾನಿ ಇಲ್ಲ. ಇದು ತುಂಬಾ ಸಹಜವಾದ ಕ್ರಿಯೆಯಾಗಿದೆ.

ಉದಾಹರಣೆಗೆ, ನಾವು ಮೂರ್ಖನಾಗಿದ್ದರೆ ಅಥವಾ ತಪ್ಪು ಮಾಡಿದ್ದರೆ ಮತ್ತು ನಾವು ನಿಜವಾಗಿಯೂ, ಮತ್ತೆಂದೂ ಅದನ್ನು ಮಾಡಬಾರದೆಂದು ಪ್ರಾಮಾಣಿಕವಾಗಿ ಬಯಸಿದ್ದೇ ಆದರೆ, ಅಲ್ಲದೆ, ಅದನ್ನು ಕೇಳುವುದರಲ್ಲಿ ನನಗೆ ಯಾವುದೇ ಹಾನಿ ಕಾಣುತ್ತಿಲ್ಲ. ಮತ್ತು ವಾಸ್ತವವಾಗಿ, ನಾವು ಅದನ್ನು ಪ್ರಾಮಾಣಿಕತೆಯಿಂದ, ನಿಜವಾದ ಆಂತರಿಕ ಪ್ರಾಮಾಣಿಕತೆಯಿಂದ ಕೇಳಿದರೆ, ಅದು ಕೃಪೆ ಮಾಡುವ ದೊಡ್ಡ ಅವಕಾಶವಿದೆ.

ದೇವರು ನಿಮ್ಮನ್ನು ವಿರೋಧಿಸಲು ಇಷ್ಟಪಡುತ್ತಾನೆ ಎಂದು ನೀವು ಭಾವಿಸಬಾರದು. ಅವನು ಅದನ್ನು ಮಾಡಲು ಎಂದಿಗೂ ಉತ್ಸುಕನಾಗಿರುವುದಿಲ್ಲ! ನಿಮಗೆ ನಿಜವಾಗಿಯೂ ಯಾವುದು ಒಳ್ಳೆಯದು ಎನ್ನುವುದು ನಿಮಗಿಂತ ಉತ್ತಮವಾಗಿ ಅವನು ನೋಡಬಲ್ಲನು; ಆದರೆ ಇದು ಸಂಪೂರ್ಣವಾಗಿ ಅನಿವಾರ್ಯವಾದಾಗ ಮಾತ್ರ ಅವನು ನಿಮ್ಮ ಆಕಾಂಕ್ಷೆಯನ್ನು ವಿರೋಧಿಸುತ್ತಾನೆ. ಇಲ್ಲದಿದ್ದರೆ ನೀವು ಕೇಳುವ ಎಲ್ಲವನ್ನೂ ನೀಡಲು ಅವನು ಯಾವಾಗಲೂ ಸಿದ್ಧನಾಗಿರುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/254–55**

**ಕರ್ತವ್ಯದ ಶರಣಾಗತಿ**

ನಿಜ ಹೇಳುವುದಾದರೆ, ಒಂದು ಅಸ್ತಿತ್ವಕ್ಕೆ ಕೀಲಿಕೈ (ಮೂಲ/ಆಧಾರ) ಇಲ್ಲದ, ಅಂದರೆ ಸಮಸ್ಯೆಗಳನ್ನು ಮಾರ್ಗದರ್ಶನ ಮಾಡುವ ಮತ್ತು ಪರಿಹರಿಸುವ ಎಳೆಗಳನ್ನು ಹೊಂದಿರದ ಅಸ್ತಿತ್ವಕ್ಕೆ ಜವಾಬ್ದಾರರಾಗುವುದಕ್ಕಿಂತ ಹೆಚ್ಚು ಶೋಚನೀಯ ಸ್ಥಿತಿ ಇಲ್ಲ. ಪ್ರಾಣಿಯು ತನ್ನಷ್ಟಕ್ಕೆ ತಾನು ಯಾವುದೇ ತೊಂದರೆಗಳನ್ನು ಸೃಷ್ಟಿಸಿಕೊಳ್ಳುವುದಿಲ್ಲ: ಅದು ಸುಮ್ಮನೆ ಬದುಕುತ್ತದೆ. ಅದರ ಪ್ರವೃತ್ತಿಯು ಅದನ್ನು ಚಾಲನೆಗೊಳಿಸುತ್ತದೆ, ಅದು ಸಹಜವಾದ ಜ್ಞಾನವನ್ನು ಹೊಂದಿದ ಮತ್ತು ತನಗಿಂತ ಉನ್ನತವಾಗಿರುವ ಸಾಮೂಹಿಕ ಪ್ರಜ್ಞೆಯ ಮೇಲೆ ಅವಲಂಬಿತವಾಗಿದೆ, ಆದರೆ ಅದು ಯಾಂತ್ರಿಕವಾಗಿದೆ, ಸ್ವಯಂಪ್ರೇರಿತವಾಗಿದೆ, ಯಾವುದಕ್ಕಾದರು ಆಶಿಸುವುದು ಮತ್ತು ಅದನ್ನು ತರಲು ಪ್ರಯತ್ನಿಸುವ ಅಗತ್ಯವಿಲ್ಲ, ಅದು ತುಂಬಾ ಸಹಜವಾಗಿದೆ, ಮತ್ತು ಅದು ತನ್ನ ಜೀವನಕ್ಕೆ ಜವಾಬ್ದಾರನಾಗಿರುವುದಿಲ್ಲ, ಅದು ಚಿಂತಿಸುವುದಿಲ್ಲ. ಮನುಷ್ಯನೊಂದಿಗೆ, ತನ್ನ ಮೇಲೆ ತಾನು ಅವಲಂಬನೆಯಾಗುವ ಪ್ರಜ್ಞೆ ಹುಟ್ಟಿರುತ್ತದೆ ಮತ್ತು ಅವನಿಗೆ

ಅಗತ್ಯವಾದ ಜ್ಞಾನವಿಲ್ಲದಿರುವುದರಿಂದ ಹಿಂಸೆಯು ನಿರಂತರ ಫಲಿತಾಂಶವಾಗುತ್ತದೆ. ತನ್ನ ಸ್ವಂತ ಪ್ರಜ್ಞೆಗೆ ತನ್ನನ್ನು ತಾನು ಪೂರ್ಣವಾಗಿ ಒಪ್ಪಿಸಿಕೊಳ್ಳುವುದಕ್ಕಿಂತ ಉನ್ನತವಾದ ಪ್ರಜ್ಞೆಗೆ ಸಂಪೂರ್ಣವಾಗಿ ಶರಣಾಗುವುದರಿಂದ, ತನ್ನ ಚಿಂತೆಗಳನ್ನು ಒಪ್ಪಿಸುವುದರಿಂದ ಮತ್ತು ತನ್ನ ಜೀವನವನ್ನು ಮಾರ್ಗದರ್ಶನ ಮಾಡುವುದನ್ನು ಹಾಗೂ ಎಲ್ಲವನ್ನೂ ಕ್ರಮಗೊಳಿಸುವುದನ್ನು ಆ ಉನ್ನತ ಪ್ರಜ್ಞೆಗೆ ಬಿಡುವುದರಿಂದ ಮಾತ್ರ ಈ ಹಿಂಸೆಯು ಕೊನೆಗೊಳ್ಳಬಹುದು.

ನಮಗೆ ಅಗತ್ಯವಾದ ಜ್ಞಾನವಿರದಿದ್ದಾಗ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು? ದುರದೃಷ್ಟಕರ ಸಂಗತಿಯೆಂದರೆ, ಮನುಷ್ಯನು ತನ್ನ ಜೀವನದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂದು ನಂಬುತ್ತಾನೆ ಮತ್ತು ಅದನ್ನು ಮಾಡಲು ಅಗತ್ಯವಾದ ಜ್ಞಾನವನ್ನು ಅವನು ಹೊಂದಿಲ್ಲ. ಅದು ಅವನ ಎಲ್ಲಾ ತೊಂದರೆಗಳ ಮೂಲ – ಆ ಶಾಶ್ವತ ಪ್ರಶ್ನೆ, "ನಾನು ಏನು ಮಾಡಬೇಕು?..." ಇದಕ್ಕಿಂತ ಹರಿತವಾದದ್ದು ಇನ್ನೊಂದು "ಮುಂದೆ ಏನು ಸಂಭವಿಸಲಿದೆ?" ಹೆಚ್ಚು ಕಡಿಮೆ ಅದೇ ಸಮಯಕ್ಕೆ ಈ ಪ್ರಶ್ನೆಯನ್ನು ಉತ್ತರಿಸಲಾರದ ಅಸಮರ್ಥತೆ.

ಅದಕ್ಕಾಗಿಯೇ ಎಲ್ಲಾ ಆಧ್ಯಾತ್ಮಿಕ ಶಿಸ್ತುಗಳು ಎಲ್ಲಾ ಜವಾಬ್ದಾರಿಗಳನ್ನು ಬಿಟ್ಟುಕೊಡುವ ಮತ್ತು ಉನ್ನತ ತತ್ವವನ್ನು ಅವಲಂಬಿಸುವ ಅಗತ್ಯತೆಯೊಂದಿಗೆ ಪ್ರಾರಂಭವಾಗುತ್ತವೆ. ಇಲ್ಲದಿದ್ದರೆ ಶಾಂತಿ ಅಸಾಧ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/304–05 – ಶ್ರೀಮಾತೆ**

**ಆಂತರಿಕ ಶರಣಾಗತಿ**

ಶರಣಾಗತಿಯ ಮೇಲೆ ಅವಲಂಬಿತವಾದ ನಿಮ್ಮ ಸಾಧನೆಯು ಕ್ಷೀಣವಾದ ಭರವಸೆ ಮಾತ್ರ ಇದೆ ಎಂದು ಸೂಚಿಸುವುದು ನನ್ನ ಉದ್ದೇಶವಾಗಿರಲಿಲ್ಲ. ನಾನು ಯಾವಾಗಲೂ ಇದಕ್ಕೆ ವ್ಯತಿರಿಕ್ತವಾದದ್ದನ್ನು ಹೇಳಿದ್ದೇನೆ, ನಿಮ್ಮ ಆತ್ಮವು ನಿಜವಾಗಿಯೂ ಭಗವಂತನನ್ನು ಬಯಸುವುದರಿಂದ, ನೀವು ಅವನನ್ನು ತಲುಪುವುದು ಖಚಿತ; ನೀವು ಶರಣಾಗತರಾದರೆ ಮಾತ್ರ – ಮತ್ತು ಅದಕ್ಕಾಗಿಯೇ ಅವುಗಳು ಕೊಡುವ ಹೊಡೆತದ ಸಂಕಟಗಳ ಹೊರತಾಗಿ ಈ ನಿರಾಶೆಗಳನ್ನು

ನಾನು ಬಲವಾಗಿ ವಿರೋಧಿಸುತ್ತೇನೆ, ಏಕೆಂದರೆ ಅವುಗಳು ನಿಮ್ಮನ್ನು ಆ ಕಡೆಗೆ ಹೋಗುವಂತೆ ಪ್ರಯತ್ನಿಸುತ್ತವೆ – ಅದು ನಿರಾಶೆಗೊಳ್ಳಬಹುದೆ ಅಥವಾ ದೂರದ ಭವಿಷ್ಯಕ್ಕೆ ಮುಂದೂಡಬಹುದೆ.

ನಾನು ಇದನ್ನು ಬರೆದದ್ದು, ನಾವು ಭಗವಂತನನ್ನು ಬಯಸಿದರೆ, ಪರಮಾತ್ಮನು ಸ್ವತಃ ಹೃದಯದ ಶುದ್ಧೀಕರಣ ಮಾಡುವ ಕಾರ್ಯವನ್ನು ತೆಗೆದುಕೊಳ್ಳುತ್ತಾನೆ, ಸಾಧನೆಯು ವಿಕಾಸವಾಗಲು ಸಹಾಯ ಮಾಡುತ್ತಾನೆ ಮತ್ತು ಅಗತ್ಯ ಅನುಭವಗಳನ್ನು ನೀಡುತ್ತಾನೆ ಎನ್ನುವ ನಿಮ್ಮ ಮೊದಲಿನ ಯೋಗದ ಕಲ್ಪನೆಯ ಹೇಳಿಕೆಗೆ ಉತ್ತರವಾಗಿ. ನಾವು ದೇವರಲ್ಲಿ ನಂಬಿಕೆ ಹಾಗೂ ವಿಶ್ವಾಸವನ್ನು ಮತ್ತು ಶರಣಾಗತಿಯ ಇಚ್ಛೆಯನ್ನು ಹೊಂದಿದ್ದರೆ ಅದು ಆ ರೀತಿಯಲ್ಲಿ ಸಂಭವಿಸಬಹುದು ಮತ್ತು ಆಗಬಹುದು ಎಂದು ನಾನು ಹೇಳಬಯಸುತ್ತೇನೆ. ಯಾಕೆಂದರೆ ಅಂತಹ ಗ್ರಹಿಕೆಯು ನಾವು ನಮ್ಮ ಸ್ವಂತ ಪ್ರಯತ್ನಗಳನ್ನು ನಂಬುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ನಾವು ಆ ಭಗವಂತನ ಕರಗಳಲ್ಲಿ ಹಾಕಿಕೊಳ್ಳುವುದನ್ನು ಒಳಗೊಂಡಿರುತ್ತದೆ ಮತ್ತು ಅದು ನಾವು ಪರಮಾತ್ಮನಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಇಡುವುದನ್ನು ಮತ್ತು ಪ್ರಗತಿಪರ ಸಮರ್ಪಣೆಯನ್ನು ಸೂಚಿಸುತ್ತದೆ. ವಾಸ್ತವವಾಗಿ ಇದು ನಾನೇ ಅನುಸರಿಸಿದ ಸಾಧನಾ ತತ್ವವಾಗಿದೆ ಮತ್ತು ನಾನು ಕಂಡಂತೆ ಇದು ಯೋಗದ ಪ್ರಮುಖ ಭಾಗವಾಗಿದೆ. ಇದು, ರಾಮಕೃಷ್ಣರು ತಮ್ಮ ಚಿತ್ರದಲ್ಲಿರುವ ಮರಿ ಬೆಕ್ಕಿನ ವಿಧಾನವನ್ನು ಅರ್ಥೈಸಿಕೊಂಡಂತೆ ಎಂದು ನಾನು ಭಾವಿಸುತ್ತೇನೆ. ಆದರೆ ಎಲ್ಲರೂ ಒಂದೇ ಬಾರಿಗೆ ಅದನ್ನು ಅನುಸರಿಸಲು ಸಾಧ್ಯವಿಲ್ಲ; ಅವರು ಅದನ್ನು ತಲುಪಲು ಸಮಯ ತೆಗೆದುಕೊಳ್ಳುತ್ತದೆ – ಮನಸ್ಸು ಮತ್ತು ಪ್ರಾಣಿಕವು ಶಾಂತವಾದಾಗ ಅದು ಹೆಚ್ಚು ಬೆಳೆಯುತ್ತದೆ.

ಶರಣಾಗತಿ ಎಂದರೆ ಮನಸ್ಸಿನ ಹಾಗೂ ಪ್ರಾಣದ ಆಂತರಿಕ ಶರಣಾಗತಿ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಬಾಹ್ಯ ಶರಣಾಗತಿ ಎನ್ನುವುದೂ ಸಹ ಇದೆ, ಚೇತನ ಅಥವಾ ಸಾಧನೆಯ, ಅರ್ಪಣೆಯ, ದೈವೀ ಮಾರ್ಗದರ್ಶನದ ವಿಧೇಯತೆಯ ಅವಶ್ಯಕತೆಯೊಂದಿಗೆ ವ್ಯತಿರಿಕ್ತವಾಗಿ ಕಂಡುಬರುವ ಎಲ್ಲವನ್ನೂ ನೇರವಾಗಿ (ಆ ಹಂತವನ್ನು ತಲುಪಿದ್ದರೆ) ಅಥವಾ ಚೈತ್ಯನ ಮುಖಾಂತರ ಅಥವಾ ಗುರುವಿನ ಮಾರ್ಗದರ್ಶನಕ್ಕೆ ಅರ್ಪಿಸುವುದು. ಪ್ರಾಯೋಪವೇಶನಕ್ಕೂ

(ಉಪವಾಸದಿಂದ ಮರಣ ಹೊಂದುವಿಕೆ) ಶರಣಾಗತಿಗೂ ಯಾವುದೇ ಸಂಬಂಧವಿಲ್ಲ ಎಂದು ನಾನು ಹೇಳಬಹುದು; ಇದು ಅತ್ಯಂತ ಕಠೋರವಾದ ತಪಸ್ಸಿನ ಒಂದು ರೂಪವಾಗಿದೆ ಮತ್ತು ನನ್ನ ಅಭಿಪ್ರಾಯದಲ್ಲಿ ತುಂಬಾ ವಿಪರೀತ ರೀತಿಯ ಮತ್ತು ಅಪಾಯಕಾರಿ ತಪಸ್ಸಿನ ಒಂದು ರೂಪವಾಗಿದೆ.

*

**ಶರಣಾಗತಿಯ ತಿರುಳು**

ಈ ಆಂತರಿಕ ಶರಣಾಗತಿಯ ತಿರುಳು ಪರಮಾತ್ಮನ ಮೇಲಿನ ನಂಬಿಕೆ ಮತ್ತು ವಿಶ್ವಾಸವಾಗಿದೆ. ನಾವು "ನಮಗೆ ದೈವಿಕತೆ ಬೇಕು ಮತ್ತು ಬೇರೇನೂ ಬೇಡ" ಎಂಬ ಮನೋಭಾವವನ್ನು ತಳೆಯುತ್ತೇವೆ. ಅದನ್ನು ಬಿಟ್ಟುಕೊಡಲು ನಿಮ್ಮನ್ನು ಕೇಳಬಹುದೆಂದು ಎಂದು ನೀವು ಏಕೆ ಯೋಚಿಸಬೇಕು ಎಂದು ನನಗೆ ತಿಳಿಯುತ್ತಿಲ್ಲ – ಅದಿಲ್ಲದಿದ್ದರೆ ಯೋಗವನ್ನು ಮಾಡಲಾಗುವುದಿಲ್ಲ. "ನನ್ನನ್ನು ನಾನು ಸಂಪೂರ್ಣವಾಗಿ ಅವನಿಗೆ(ಪರಮಾತ್ಮನಿಗೆ) ಅರ್ಪಿಸಲು ಬಯಸುತ್ತೇನೆ ಮತ್ತು ನನ್ನಾತ್ಮವು ಅದನ್ನು ಬಯಸುತ್ತದೆ, ಆದ್ದರಿಂದ ನಾನು ಅವನನ್ನು ಭೇಟಿಯಾಗುತ್ತೇನೆ ಮತ್ತು ಅವನನ್ನು ಅರಿತುಕೊಳ್ಳುತ್ತೇನೆ. ನನ್ನನ್ನು ಅವನಲ್ಲಿಗೆ ಕರೆತರುವ ನನ್ನಲ್ಲಿನ ಅವನ ಕ್ರಿಯೆಯನ್ನು(ಅವನ ಕ್ರಿಯೆಯು ರಹಸ್ಯವಾಗಿರಬಹುದು ಅಥವಾ ಮುಕ್ತವಾಗಿರಬಹುದು, ಮುಸುಕಿದ್ದಾಗಿರಬಹುದು ಅಥವಾ ಸ್ಪಷ್ಟವಾಗಿದ್ದಿರ–ಬಹುದು) ಬಿಟ್ಟು ಬೇರೇನನ್ನೂ ಕೇಳುವುದಿಲ್ಲ. ಎಲ್ಲವೂ ನನ್ನ ಸ್ವಂತ ಸಮಯ ಮತ್ತು ಮಾರ್ಗದನುಸಾರವಾಗಿ ಆಗಬೇಕೆಂದು ನಾನು ಆಗ್ರಹಿಸುವುದಿಲ್ಲ; ಅವನು(ಪರಮಾತ್ಮ) ಎಲ್ಲವನ್ನೂ ತನ್ನದೇ ಆದ ಸಮಯ ಮತ್ತು ರೀತಿಯಲ್ಲಿ ಮಾಡಲಿ, ನಾನು ಅವನಲ್ಲಿ ನಂಬಿಕೆಯನ್ನಿಡುತ್ತೇನೆ, ಅವನ ಇಚ್ಛೆಯನ್ನು ಸ್ವೀಕರಿಸುತ್ತೇನೆ, ಅವನ ಬೆಳಕು, ಉಪಸ್ಥಿತಿ ಮತ್ತು ಸಂತೋಷಕ್ಕಾಗಿ ಅವಿರತವಾಗಿ ಹಾತೊರೆಯುತ್ತೇನೆ, ಅವನ ಮೇಲೆ ಅವಲಂಬಿತನಾಗಿ ಎಲ್ಲ ತೊಂದರೆಗಳನ್ನು ಮತ್ತು ವಿಳಂಬಗಳನ್ನು ಅನುಭವಿಸುತ್ತೇನೆ ಮತ್ತು ಎಂದಿಗೂ ಬಿಟ್ಟುಕೊಡುವುದಿಲ್ಲ. ನನ್ನ ಮನಸ್ಸು ಶಾಂತವಾಗಿರಲಿ ಮತ್ತು ಅವನ ಕಡೆಗೆ ತಿರುಗಲಿ ಮತ್ತು ಅವನು ಅದನ್ನು ತನ್ನ ಬೆಳಕಿಗೆ ತೆರೆಯಲಿ; ನನ್ನ ಜೀವನವು ಶಾಂತವಾಗಿರಲಿ ಮತ್ತು ಅವನ ಕಡೆಗೆ ತಿರುಗಲಿ ಮತ್ತು ಅವನ ಶಾಂತತೆಗೆ ಮತ್ತು ಆನಂದಕ್ಕೆ ಅದನ್ನು ತೆರೆಯಲಿ. ಎಲ್ಲವೂ ಅವನಿಗಾಗಿ ಮತ್ತು ಅವನಿಗಾಗಿ ನಾನು. ಏನೇ ಆಗಲಿ, ನಾನು

ಈ ಆಕಾಂಕ್ಷೆಯನ್ನು ಮತ್ತು ಸಮರ್ಪಣೆಯನ್ನು ಉಳಿಸಿಕೊಳ್ಳುತ್ತೇನೆ ಮತ್ತು ಅದು ನೆರವೇರುತ್ತದೆ ಎಂಬ ಪರಿಪೂರ್ಣ ಅವಲಂಬನೆಯಲ್ಲಿ ಮುಂದುವರಿಯುತ್ತೇನೆ." ನಾವು ಬೆಳೆಯಬೇಕಾದಂಥ ಮನೋಭಾವ ಅದಾಗಿದೆ; ಏಕೆಂದರೆ, ನಿಸ್ಸಂಶಯವಾಗಿ, ಅದನ್ನು ತಕ್ಷಣವೆ ಪರಿಪೂರ್ಣಗೊಳಿಸಲಾಗುವುದಿಲ್ಲ; ಮಾನಸಿಕ ಮತ್ತು ಪ್ರಾಣಿಕ ಕ್ರಿಯೆಗಳು ಅಡ್ಡಿ ಪಡಿಸುತ್ತವೆ; ಆದರೆ ನಾವು ಸಂಕಲ್ಪವನ್ನು ಅದರ ಜೊತೆ ಇಟ್ಟುಕೊಂಡರೆ, ಅದು ನಮ್ಮಲ್ಲಿ ಬೆಳೆಯುತ್ತದೆ. ಉಳಿದದ್ದು, ಮಾರ್ಗದರ್ಶಕ್ಕೆ ವಿಧೇಯತೆಯು ತನ್ನನ್ನು ತಾನು (ನಮ್ಮ ಮಾನಸಿಕ ಅಥವಾ ಪ್ರಾಣಿಕ ಕ್ರಿಯೆಯನ್ನು ಹಸ್ತಕ್ಷೇಪ ಮಾಡಲು ಅನುಮತಿಸದೆ) ಅಭಿವ್ಯಕ್ತಗೊಳಿಸಿಕೊಂಡ ವಿಷಯವಾಗಿದೆ.

ಸಾಧನೆ ಮಾಡಲು ಇರುವುದು ಇದೊಂದೇ ಮಾರ್ಗ ಮತ್ತು ಅದರ ಹೊರತು ಸಾಧನೆಯನ್ನು ಮಾಡಲಾಗದು ಎಂದು ಹೇಳುವುದು ನನ್ನ ಉದ್ದೇಶವಾಗಿರಲಿಲ್ಲ – ಇನ್ನೂ ಹಲವು ಮಾರ್ಗಗಳಿವೆ, ಅವುಗಳನ್ನು ಬಳಸಿ ನಾವು ಪರಮಾತ್ಮನನ್ನು ಕಾಣಬಹುದು. ಆದರೆ ನಾನು ತಿಳಿದಿರುವ ಏಕೈಕ ವಿಷಯವೆಂದರೆ, ಪ್ರಕೃತಿಯನ್ನು ಸಿದ್ಧಪಡಿಸುವ ಮೊದಲು ದೈವಿಕತೆಯಿಂದ ಸಾಧನವನ್ನು ತೆಗೆದುಕೊಳ್ಳುವುದು ಒಂದು ಸಂವೇದನಾಶೀಲ ಸಂಗತಿಯಾಗಿದೆ. ಇತರ ವಿಧಾನಗಳಲ್ಲಿ ದೈವಿಕ ಕ್ರಿಯೆ ಮತ್ತು ಸಹಾಯವನ್ನು ಕಾಲಕಾಲಕ್ಕೆ ಅನುಭವಿಸಬಹುದು, ಆದರೆ ಎಲ್ಲವೂ ಸಿದ್ಧಗೊಳ್ಳುವವರೆಗೆ ಅದು ಹೆಚ್ಚಾಗಿ ಪರದೆಯ ಹಿಂದೆ ಇರುತ್ತದೆ. ಕೆಲವು ಸಾಧನಗಳಲ್ಲಿ ದೈವಿಕ ಕ್ರಿಯೆಯನ್ನು ಗುರುತಿಸಲಾಗುವುದಿಲ್ಲ; ಎಲ್ಲವನ್ನೂ ತಪಸ್ಸಿನಿಂದಲೇ ಮಾಡಬೇಕು. ಹೆಚ್ಚಿನವುಗಳಲ್ಲಿ ಎರಡು ಮಾರ್ಗಗಳ ಮಿಶ್ರಣವಿದೆ, ಅಂತಿಮವಾಗಿ ತಪಸ್ಸು ನೇರ ಸಹಾಯ ಮತ್ತು ಮಧ್ಯಸ್ಥಿಕೆಯನ್ನು ಬೇಡುತ್ತದೆ. ಎಲ್ಲವನ್ನೂ ಮಾಡುವ ಪರಮಾತ್ಮನ ಕಲ್ಪನೆ ಮತ್ತು ಅನುಭವವು ಶರಣಾಗತಿಯ ಮೇಲೆ ಆಧರಿಸಿದ ಯೋಗಗಳಿಗೆ ಸೇರಿದೆ.

ಆದರೆ ಯಾವುದೇ ಮಾರ್ಗವನ್ನು ಅನುಸರಿಸಿದರೂ, ಮಾಡಬೇಕಾದ ಒಂದು ಕೆಲಸವೆಂದರೆ ನಿಷ್ಠೆಯಿಂದ ಇರುವುದು ಮತ್ತು ಅಂತ್ಯಕ್ಕೆ ಹೋಗುವುದು. ನೀವು ಎಷ್ಟೋ ಸಲ ಆ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ – ಅದಕ್ಕೆ ಬದ್ಧರಾಗಿರಿ, ಪ್ರಾಣದ ಬಿರುಗಾಳಿಗಳು ನಿಮ್ಮ ಆತ್ಮದ ಆಕಾಂಕ್ಷೆಯನ್ನು ತಣಿಸಲು ಬಿಡಬೇಡಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/69–70**

**ಸಂಪೂರ್ಣ ಶರಣಾಗತಿ**

ಸಂಪೂರ್ಣ ಶರಣಾಗತಿಯು ಅತಿ ಕಡಿಮೆ ಸಮಯದಲ್ಲಿ ಸಾಧ್ಯವಿಲ್ಲ, – ಸಂಪೂರ್ಣ ಶರಣಾಗತಿ ಎಂದರೆ ಜೀವಿಗಳ ಪ್ರತಿಯೊಂದು ಭಾಗದಲ್ಲಿನ ಅಹಂಕಾರದ ಗಂಟುಗಳನ್ನು ಕತ್ತರಿಸಿ ಅವುಗಳನ್ನು ಮುಕ್ತವಾಗಿ ಮತ್ತು ಸಂಪೂರ್ಣವಾಗಿ ದೈವಕ್ಕೆ ಅರ್ಪಿಸುವುದು. ಮನಸ್ಸು, ಪ್ರಾಣ, ಭೌತಿಕ ಪ್ರಜ್ಞೆ (ಮತ್ತು ಇವುಗಳ ಎಲ್ಲಾ ಚಲನೆಗಳಲ್ಲಿನ ಪ್ರತಿಯೊಂದು ಭಾಗವೂ ಸಹ) ತಮ್ಮದೇ ಆದ ಮಾರ್ಗವನ್ನು ತ್ಯಜಿಸಲು ಮತ್ತು ದೈವಿಕ ಮಾರ್ಗವನ್ನು ಒಪ್ಪಿಕೊಳ್ಳಲು ಒಂದರ ನಂತರ ಒಂದರಂತೆ ಪ್ರತ್ಯೇಕವಾಗಿ ಶರಣಾಗಲೇಬೇಕು. ನಾವು ಏನನ್ನು ಮಾಡಬಹುದೆಂದರೆ, ಪ್ರಾರಂಭದಿಂದಲೇ ಒಂದು ಪ್ರಮುಖ ಸಂಕಲ್ಪವನ್ನು ಹಾಗೂ ಸ್ವ–ಸಮರ್ಪಣೆಯನ್ನು ಮಾಡುವುದು ಮತ್ತು ಸ್ವ–ಸಮರ್ಪಣೆಯನ್ನು ಪೂರ್ಣಗೊಳಿಸಲು, ಪ್ರತಿ ಹಂತದಲ್ಲೂ, ತನ್ನಷ್ಟಕ್ಕೆ ತಾನು ಅರ್ಪಿಸಿಕೊಳ್ಳುವ ಪ್ರತಿಯೊಂದು ಅವಕಾಶದ ಲಾಭವನ್ನು ತೆಗೆದುಕೊಳ್ಳುತ್ತ ಅದನ್ನು ನಮಗೆ ಸರಿ ಎನಿಸಿದ ಮಾರ್ಗದಲ್ಲಿ ಕಾರ್ಯರೂಪಕ್ಕೆ ತರುವುದು. ಒಂದು ದಿಶೆಯಲ್ಲಿನ ಶರಣಾಗತಿಯು ಉಳಿದವುಗಳನ್ನು ಸುಲಭಗೊಳಿಸುತ್ತದೆ, ಹೆಚ್ಚು ಅನಿವಾರ್ಯವನ್ನಾಗಿಸುತ್ತದೆ;

ಆದರೆ ಅದು ಇನ್ನುಳಿದ ಗಂಟುಗಳನ್ನು (ವಿಶೇಷವಾಗಿ ಈಗಿನ ವ್ಯಕ್ತಿತ್ವಕ್ಕೆ ನಿಕಟವಾಗಿ ಅಂಟಿಕೊಂಡ ಗಂಟುಗಳನ್ನು) ತನ್ನಷ್ಟಕ್ಕೆ ತಾನು ಕಡಿದುಕೊಳ್ಳಲಾರದು ಅಥವಾ ಸಡಿಲಗೊಳಿಸಲಾರದು, ಮತ್ತು ಅದರ ಪ್ರಮುಖ ಇಚ್ಛೆಯನ್ನು ಸ್ಥಿರಗೊಳಿಸಿದ ನಂತರ ಮತ್ತು ಆಚರಣೆಯಲ್ಲಿ ಅದರ ಸಂಕಲ್ಪದ ಮೇಲೆ ಮೊದಲ ಮುದ್ರೆಗಳನ್ನು ಹಾಕಿದ ನಂತರವೂ ಅದರ ಕಾಪಾಡಬೇಕಾದ ರಚನೆಗಳು ಅನೇಕ ವೇಳೆ ದೊಡ್ಡ ತೊಂದರೆಗಳನ್ನು ಉಂಟುಮಾಡಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/72–73 – ಶ್ರೀ ಅರವಿಂದರು**

**ಶರಣಾಗತಿ ಮತ್ತು ನಿರಂತರ ಪ್ರಗತಿ**

ಶರಣಾಗತಿಯು ಕದಡದ ಮತ್ತು ಅಡೆತಡೆಯಿಲ್ಲದ ಮತ್ತು ನಿರಂತರ ಪ್ರಗತಿಯನ್ನು ಖಚಿತಪಡಿಸುವುದಿಲ್ಲ. ಕಾರಣವೇನೆಂದರೆ ನಿಮ್ಮ ಶರಣಾಗತಿಯು ಸ್ಪಷ್ಟ ಮತ್ತು ಪೂರ್ಣವಾಗಿರುವುದಿಲ್ಲ. ನಿಮ್ಮಲ್ಲಿಯ ಒಂದು ಭಾಗ ಮಾತ್ರ

ಶರಣಾಗಿರುತ್ತದೆ; ಇಂದು ಒಂದು ಭಾಗ ಶರಣಾಗತವಾದರೆ, ಇನ್ನೊಂದು ಭಾಗ ಮರುದಿನ ಶರಣಾಗುತ್ತದೆ. ಯೋಗದ ಸಂಪೂರ್ಣ ಉದ್ದೇಶವು ಎಲ್ಲಾ ವಿಭಿನ್ನ ಭಾಗಗಳನ್ನು ಒಟ್ಟುಗೂಡಿಸುವುದು ಮತ್ತು ಅವಿಭಜಿತ ಏಕತೆಯನ್ನು ರೂಪಿಸುವುದು. ಅಲ್ಲಿಯವರೆಗೆ ನೀವು ತೊಂದರೆಗಳಿಲ್ಲದೆ ಇರಲು ಸಾಧ್ಯವಿಲ್ಲ – ತೊಂದರೆಗಳು, ಉದಾಹರಣೆಗೆ, ಅನುಮಾನ ಅಥವಾ ಖಿನ್ನತೆ ಅಥವಾ ಹಿಂಜರಿಕೆಯಂತಹ ತೊಂದರೆಗಳು ಸಾಮಾನ್ಯ. ಇಡೀ ಜಗತ್ತು ವಿಷದಿಂದ ತುಂಬಿದೆ. ಪ್ರತಿ ಉಸಿರಿನೊಂದಿಗೆ ನೀವು ಅದನ್ನು ತೆಗೆದುಕೊಳ್ಳುತ್ತೀರಿ. ನೀವು ಅನಪೇಕ್ಷಿತ ವ್ಯಕ್ತಿಯೊಂದಿಗೆ ಕೆಲವು ಪದಗಳನ್ನು ವಿನಿಮಯ ಮಾಡಿಕೊಂಡಾಗ ಅಥವಾ ಅಂತಹ ವ್ಯಕ್ತಿ ನಿಮ್ಮ ಹತ್ತಿರ ಹಾದುಹೋದರೂ ಸಹ, ನೀವು ಅವನಿಂದ ಸೋಂಕನ್ನು ಅಂಟಿಸಿಕೊಳ್ಳಬಹುದು. ನೀವು ಪ್ಲೇಗ್ ಇರುವ ಸ್ಥಳದ ಬಳಿಗೆ ಬಂದರೆ ಸಾಕು, ಅದರ ವಿಷದ ಸೋಂಕಿಗೆ ಒಳಗಾಗುವಿರಿ; ಕನಿಷ್ಠ ಅದು ಅಲ್ಲಿದೆ ಎಂದು ನಿಮಗೆ ತಿಳಿದಿರಬೇಕಾಗಿಲ್ಲ. ನೀವು ಸಂಪಾದಿಸಲು ತಿಂಗಳುಗಳನ್ನೇ ತೆಗೆದುಕೊಂಡಿದ್ದರೂ ನೀವು ಕೆಲವೇ ನಿಮಿಷಗಳಲ್ಲಿ ಕಳೆದುಕೊಳ್ಳಬಹುದು. ನೀವು ಎಲ್ಲಿಯವರೆಗೆ ಮಾನವೀಯತೆಗೆ ಸೇರಿದವರಾಗಿರುತ್ತೀರೊ ಮತ್ತು ನೀವು ಸಾಮಾನ್ಯ ಜೀವನವನ್ನು ನಡೆಸುವವರಾಗಿರುತ್ತೀರೊ, ನೀವು ಪ್ರಪಂಚದ ಜನರೊಂದಿಗೆ ಬೆರೆಯುವುದು ಅಷ್ಟು ಮುಖ್ಯವೆನಿಸುವುದಿಲ್ಲ; ಆದರೆ ನೀವು ದೈವೀ ಜೀವನವನ್ನು ಬಯಸುವವರಾಗಿದ್ದರೆ, ನಿಮ್ಮ ಸುತ್ತ ಮುತ್ತಲಿನ ಜನರ ಬಗ್ಗೆ ಮತ್ತು ಪರಿಸರದ ಬಗ್ಗೆ ನೀವು ಹೆಚ್ಚು ಜಾಗರೂಕರಾಗಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/6–7**

**ನಾನು ನಿಮ್ಮವನಾಗಲು ಬಯಸುತ್ತೇನೆ**

ಒಮ್ಮೆ ನೀವು ಪರಮಾತ್ಮನ ಕಡೆಗೆ ತಿರುಗಿ, “ನಾನು ನಿನ್ನವನಾಗಲು ಬಯಸುತ್ತೇನೆ” ಎಂದು ಹೇಳಿದರೆ ಮತ್ತು ಪರಮಾತ್ಮನು “ಹೌದು” ಇಡೀ ಪ್ರಪಂಚವು ನಿಮ್ಮನ್ನು ಅದರಿಂದ ದೂರವಿರಿಸಲು ಸಾಧ್ಯವಿಲ್ಲ ಎಂದು ಪರಮಾತ್ಮನು ಹೇಳುತ್ತಾನೆ. ಪ್ರಮುಖ ಪುರುಷನು ತನ್ನ ಶರಣಾಗತಿಯನ್ನು ಮಾಡಿಕೊಂಡಾಗ, ಮುಖ್ಯವೆನಿಸಿದ ಕಷ್ಟವು ಕಣ್ಮರೆಯಾಗುತ್ತದೆ. ಬಾಹ್ಯ ಪುರುಷನು ಒಂದು ಚಿಪ್ಪಿದ್ದಂತೆ. ಸಾಮಾನ್ಯ ಜನರಲ್ಲಿ ಹೊರ ಪದರವು(ಚಿಪ್ಪು) ಎಷ್ಟು ಗಟ್ಟಿ

ಮತ್ತು ದಪ್ಪವಾಗಿರುತ್ತದೆ ಎಂದರೆ, ಅವರು ತಮ್ಮೊಳಗಿರುವ ಪರಮಾತ್ಮನ ಬಗ್ಗೆ ತಿಳಿದಿರುವುದಿಲ್ಲ. ಒಮ್ಮೆ, ಒಂದು ಕ್ಷಣ ಮಾತ್ರವೆ, "ನಾನು ಇಲ್ಲಿದ್ದೇನೆ ಮತ್ತು ನಾನು ನಿನ್ನವನು" ಎಂದು ಅಂತರಂಗವು ಹೇಳಿದರೆ, ಅದು ಸೇತುವೆಯನ್ನು ನಿರ್ಮಿಸಿದಂತೆ ಮತ್ತು ಎರಡೂ ಭಾಗಗಳು ಸಂಪೂರ್ಣವಾಗಿ ಒಂದಾಗಿ, ಒಳ ಹಾಗೂ ಹೊರ ಭಾಗಗಳು ಒಂದಾಗುವವರೆಗೆ ಚಿಪ್ಪು ಕೊಂಚ–ಕೊಂಚ ತೆಳುವಾಗುತ್ತ ಬರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/7**

**ತ್ಯಾಗ ಮಾಡಲು**

ತ್ಯಾಗ ಮಾಡುವುದು ಎಂದರೆ, ನಾವು ಯಾವುದಕ್ಕೆ ಅಂಟಿಕೊಂಡಿದ್ದೇವೆಯೊ ಅದನ್ನು ತ್ಯಜಿಸುವುದು. ನಮ್ಮ ಜೀವನವನ್ನು ತ್ಯಾಗ ಮಾಡುವುದು ಎಂದರೆ ನಾವು ಅಂಟಿಕೊಂಡಿರುವುದಕ್ಕೆ ನಮ್ಮ ಜೀವನವನ್ನು ತ್ಯಜಿಸುವುದು; ಇಲ್ಲದಿದ್ದರೆ ಅದು ತ್ಯಾಗವಲ್ಲ, ಉಡುಗೊರೆಯಾಗುತ್ತದೆ. ನೀವು "ತ್ಯಾಗ" ಎಂಬ ಪದವನ್ನು ಬಳಸಿದರೆ, ನೀವು ಅದನ್ನು ಬಿಟ್ಟುಕೊಟ್ಟಾಗ ಅದು ನಿಮ್ಮನ್ನು ನೋಯಿಸುತ್ತದೆ ಎಂದರ್ಥ. "ತ್ಯಾಗ" ಎಂಬ ಪದವನ್ನು ಮನಸ್ಸಿಗೆ ತೋಚಿದಂತೆ ಬಳಸಲಾಗುತ್ತದೆ, ಅದು ತಿಳಿದಿರುವ ವಿಷಯ, ಆದರೆ ನಾನು ನಿಜವಾದ ಅರ್ಥದಲ್ಲಿ ಮಾತನಾಡುತ್ತಿದ್ದೇನೆ. ತನಗೆ ಪ್ರಿಯವಾದುದನ್ನು ಮಾತ್ರ ತ್ಯಾಗ ಮಾಡಬಹುದು. ನಾವು ಅದಕ್ಕೆ ಅಂಟಿಕೊಳ್ಳದಿದ್ದರೆ, ಅದು ತ್ಯಾಗವಲ್ಲ, ನಾವು ನೀಡುವ ಎಲ್ಲಾ ಸಂತೋಷದೊಂದಿಗೆ ಅದು ಉಡುಗೊರೆಯಾಗಿದೆ. ಶರಣಾಗತಿಯು ನೋವಿನಿಂದ ಕೂಡಿದ್ದರೆ ಅದು ಶರಣಾಗತಿಯಲ್ಲ, ಅದಕ್ಕೆ ಬೆಲೆಯಿಲ್ಲ. ಶರಣಾಗತಿಯು ನಿಜವಾಗಿಯೂ ಆನಂದದಿಂದ ಕೂಡಿದ ನಿವೇದನೆಯಾಗಿರಬೇಕು (ನಾನು ಸೌಮಿಷನ್ [ಫ್ರೆಂಚ್ ಶಬ್ದ] ಎಂಬ ಪದವನ್ನು ಶರಣಾಗತಿಯ ಅರ್ಥದಲ್ಲಿ ಬಳಸುತ್ತಿದ್ದೇನೆ, ಆದರೆ ಇದು ಸಂಪೂರ್ಣವಾಗಿ ಶರಣಾಗತಿ ಅಲ್ಲ – ಶರಣಾಗತಿಯು ಸೌಮಿಷನ್ ಮತ್ತು ವರ್ಜಿಸುವ ನಡುವೆ ಇದೆ). ನಾವು ಏನನ್ನಾದರೂ ಬಿಟ್ಟುಕೊಟ್ಟರೆ, ನಮ್ಮನ್ನು ನಾವು ಸಮರ್ಪಿಸಿಕೊಳ್ಳುತ್ತೇವೆ, ಆದರೆ ತ್ಯಾಗವಿಲ್ಲದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/314**

ಸರಿ, ಶರಣಾಗತಿ, ಅಂದರೆ, ಪರಮಾತ್ಮನಿಗೆ ಶರಣಾಗತಿಯು, ಸಂತೋಷದಾಯಕ–ವಾಗಿರಬೇಕು, ಆನಂದದಾಯಕವಾಗಿರಬೇಕು, ಸಂತೋಷದಿಂದ ಮಾಡಿದ್ದಾಗಿರಬೇಕು; ಅದು ಬಲವಾಗಿರಬೇಕು, ದೌರ್ಬಲ್ಯದ ಮತ್ತು ದುರ್ಬಲತೆಯ ಮೂಲಕ ಶರಣಾಗತಿಯನ್ನು ಮಾಡಿಕೊಳ್ಳಬಾರದು, ಆದರೆ ಕ್ರಿಯಾಶೀಲ ಮತ್ತು ಬಲವಾದ ಇಚ್ಛೆಯೊಂದಿಗೆ ಮಾಡಿಕೊಳ್ಳಬೇಕು. ತದನಂತರ ಶರಣಾಗತಿಯು ನಿಚ್ಚಳ ನಿರಾಸಕ್ತಿಯಾಗಿ ಉಳಿಯಬಾರದು: "ನಾನು ಶರಣಾಗತನಾಗಿದ್ದೇನೆ, ನನಗೆ ಜೀವನದಲ್ಲಿ ಮಾಡಲು ಇನ್ನೇನೂ ಇಲ್ಲ, ನಾನು ಶಾಂತವಾಗಿ ಮಾತ್ರ ಇರಬೇಕು, ನನ್ನ ಶರಣಾಗತಿಯಾಗಿದೆ." ಶರಣಾಗತಿಯು ಸಹಾಯಕವಾಗಿರಬೇಕು, ಅಂದರೆ, ಅದು ಕ್ರಿಯಾಶೀಲವಾಗಿರಬೇಕು – ಅದು ಕೆಲ ಉಪಯುಕ್ತವಾದ ಕೆಲಸವನ್ನು ಮಾಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/357 – ಶ್ರೀಮಾತೆ**

ಶರಣಾಗತಿಯು ಇಲ್ಲದಿದ್ದರೆ ಸಂಪೂರ್ಣ ಪುರುಷನ ಪರಿವರ್ತನೆ ಸಾಧ್ಯವಿಲ್ಲ.

*

ಯಾವುದೇ ವಿಧಾನದಿಂದಾದರೂ ಸರಿ ಶರಣಾಗತಿ ಒಳ್ಳೆಯದು, ಆದರೆ ನಿಸ್ಸಂಶಯವಾಗಿ ವ್ಯಕ್ತಿಗತವಾದ ಶರಣಾಗತಿಯು ಸಾಕಾಗುವುದಿಲ್ಲ – ಅದಕ್ಕಾಗಿ ಶರಣಾಗತಿಯು ಬಾಹ್ಯ ಸ್ವಭಾವದ ಯಾವುದೇ ರೂಪಾಂತರವಿಲ್ಲದೆ ಆಂತರಿಕ ಅನುಭವಕ್ಕೆ ಸೀಮಿತವಾಗಬಹುದು.

*

ಇದು (ಸಾಧನೆಯನ್ನು ತನ್ನಿಂದ ಮಾಡಿದ್ದಕ್ಕಿಂತ ಹೆಚ್ಚಾಗಿ ದೈವಿಕದಿಂದ ಮಾಡಲ್ಪಟ್ಟಿದೆ ಎಂಬ ಕಲ್ಪನೆ) ಒಂದು ಸತ್ಯ, ಆದರೆ ಆ ಸತ್ಯವು (ಪೂರ್ತಿ ಅಥವಾ ಭಾಗಶಃ) ಸಾಕ್ಷಾತ್ಕಾರವಾಗುತ್ತ ಹೋದಂತೆ ಪ್ರಜ್ಞೆಗೆ ಪರಿಣಾಮಕಾರಿಯಾಗುವುದಿಲ್ಲ. ಅದರಿಂದಾಗಿ ಜಡವಾಗುವ ಜನರು ಕಲ್ಪನೆಯನ್ನು ಸ್ವೀಕರಿಸುತ್ತಾರೆ ಆದರೆ ಅದನ್ನು ಅರಿತುಕೊಳ್ಳುವುದಿಲ್ಲ – ಆದ್ದರಿಂದ ಅವರಿಗೆ ತಪಸ್ಸಿನ ಬಲ ಅಥವಾ ದೈವೀ ಕೃಪೆಯ ಬಲವಿಲ್ಲ. ಮತ್ತೊಂದೆಡೆ, ಅದನ್ನು ಅರಿತುಕೊಳ್ಳಬಲ್ಲವರು ತಮ್ಮ ತಪಸ್ಸಿನಲ್ಲಿ ಮತ್ತು ಅದರ ಹಿಂದೆಯೂ ಸಹ ದೈವೀ ಶಕ್ತಿಯ ಕ್ರಿಯೆಯನ್ನು ಅನುಭವಿಸುತ್ತಾರೆ.

*

ನಿಮ್ಮ ಶರಣಾಗತಿಯನ್ನು ಪ್ರಾಮಾಣಿಕತೆಯೊಂದಿಗೆ, ಸಂಪೂರ್ಣ ಸ್ವ–ಸಮರ್ಪಣೆ–ಯೊಂದಿಗೆ ಮಾಡಿ, ಮತ್ತು ನೀವು ಹೆಚ್ಚಿನ ವೇಗದಲ್ಲಿ ಮುಂದುವರಿಯುತ್ತೀರಿ, ನೀವು ಹೆಚ್ಚು ವೇಗವಾಗಿ ಹೋಗುತ್ತೀರಿ – ಆದರೆ ನೀವು ಇದನ್ನು ಲೆಕ್ಕಾಚಾರದಿಂದ ಮಾಡಬಾರದು, ಏಕೆಂದರೆ ಅದು ಎಲ್ಲವನ್ನೂ ಹಾಳುಮಾಡುತ್ತದೆ!

*

ಪರಮಾತ್ಮನಿಗೆ ಮತ್ತು ದೈವ ಸ್ವರೂಪಿಯಾದ ಶ್ರೀಮಾತೆಯವರಿಗೆ ಸ್ವಯಂ ಶರಣಾಗತಿಯು, ಎಷ್ಟೇ ಕಷ್ಟವಾದರೂ, ನಮ್ಮ ಏಕೈಕ ಪರಿಣಾಮಕಾರಿ ಸಾಧನವಾಗಿದೆ ಮತ್ತು ನಮ್ಮ ಏಕೈಕ ಆಶ್ರಯವಾಗಿದೆ. ಶ್ರೀಮಾತೆಯವರಿಗೆ ಸ್ವಯಂ ಶರಣಾಗತಿ ಎಂದರೆ ನಮ್ಮ ಸ್ವಭಾವವು ಅವರ ಕೈಯಲ್ಲಿಯ ಒಂದು ಸಾಧನವಾಗಿರಬೇಕು, ತಾಯಿಯ ತೋಳುಗಳಲ್ಲಿ ಮಗುವಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/171**

ಯಾರು ತಮ್ಮನ್ನು ತಾವು ಯಾವುದೇ ಸಂಕೋಚವಿಲ್ಲದೆ ಮತ್ತು ತಮ್ಮ ಎಲ್ಲ ಭಾಗಗಳಲ್ಲಿ ಪರಮಾತ್ಮನಿಗೆ ಸಮರ್ಪಿಸಿಕೊಳ್ಳುತ್ತಾರೊ, ಅವರಿಗೆ ಪರಮಾತ್ಮನು ತನ್ನನ್ನು ತಾನು ಕೊಡುತ್ತಾನೆ. ಅವರಿಗೆ, ಶಾಂತತೆ, ಬೆಳಕು, ಪ್ರಭಾವ, ಅತ್ಯಾನಂದ, ಸ್ವಾತಂತ್ರ್ಯ, ವಿಶಾಲತೆ, ಜ್ಞಾನದ ಉನ್ನತಿಗಳು, ಆನಂದ ಸಾಗರಗಳು.

*

ಶರಣಾಗತಿ ಎಂದರೆ ತನ್ನನ್ನು ತಾನು ಪರಮಾತ್ಮನಿಗೆ ಸಮರ್ಪಿಸಿಕೊಳ್ಳುವುದು – ತನ್ನಲ್ಲಿರುವ ಎಲ್ಲವನ್ನೂ ತನ್ನದೆಂದು ಪರಿಗಣಿಸದೆ ಎಲ್ಲವನ್ನೂ ಪರಮಾತ್ಮನಿಗೆ ಅರ್ಪಿಸುವುದು, ಪರಮಾತ್ಮನ ಆದೇಶವನ್ನು ಮಾತ್ರ ಪಾಲಿಸುವುದು, ಅಹಂಕಾರಕ್ಕಲ್ಲದೆ ಪರಮಾತ್ಮನಿಗಾಗಿ ಮಾತ್ರ ಜೀವಿಸುವುದು.

*

ಶರಣಾಗತಿ ಎಂದರೆ ತನ್ನಲ್ಲಿರುವ ಎಲ್ಲವನ್ನೂ ದೇವನಿಗೆ ಸಮರ್ಪಿಸುವುದು, ತನ್ನಲ್ಲಿರುವ ಮತ್ತು ಹೊಂದಿರುವ ಎಲ್ಲವನ್ನೂ ಅವನಿಗೆ ಅರ್ಪಿಸುವುದು, ನಮ್ಮ ಕಲ್ಪನೆಗಳಿಗಾಗಿ, ಆಸೆಗಳಿಗಾಗಿ, ಅಭ್ಯಾಸಗಳಿಗಾಗಿ ಆಗ್ರಹಿಸದೆ, ಅವುಗಳನ್ನು ತನ್ನ

ಜ್ಞಾನ, ಇಚ್ಛೆ ಮತ್ತು ಕ್ರಿಯೆಯಿಂದ ಬದಲಾಯಿಸಲು ದೈವೀ ಸತ್ಯಕ್ಕೆ ಅನುವು ಮಾಡಿಕೊಡುವುದು ಶರಣಾಗತಿಯಾಗಿದೆ.

*

ಶರಣಾಗತಿ ಎಂದರೆ ಸಂಪೂರ್ಣವಾಗಿ ಶ್ರೀಮಾತೆಯ ಕರಗಳಲ್ಲಿರುವುದು ಮತ್ತು ಅಹಂಕಾರದಿಂದ ಅಥವಾ ಯಾವುದೇ ರೀತಿಯಲ್ಲಿ ಅವಳ ಬೆಳಕನ್ನು, ಜ್ಞಾನವನ್ನು, ಇಚ್ಛೆಯನ್ನು, ಅವಳ ಶಕ್ತಿಯ ಕಾರ್ಯವನ್ನು ವಿರೋಧಿಸದಿರುವುದು.

*

ಈ ಪ್ರಪಂಚದ ಎಲ್ಲಾ ಲೀಲೆಯು ವ್ಯಕ್ತಿಗತ ಪುರುಷನಲ್ಲಿ ಒಂದು ನಿರ್ದಿಷ್ಟ ಸಾಪೇಕ್ಷ ಮುಕ್ತವಾದ ಇಚ್ಛೆಯನ್ನು ಆಧರಿಸಿದೆ. ಸಾಧನೆಯಲ್ಲಿಯೂ ಸಹ ಅದು ಉಳಿಯುತ್ತದೆ ಮತ್ತು ಪ್ರತಿ ಹಂತದಲ್ಲೂ ಅವನ ಒಪ್ಪಿಗೆ ಅಗತ್ಯ – ಪರಮಾತ್ಮನಿಗೆ ಶರಣಾಗತಿಯಿಂದ ಅವನು ಅಜ್ಞಾನ, ಪ್ರತ್ಯೇಕತೆ ಮತ್ತು ಅಹಂಕಾರದಿಂದ ಪಾರಾದರೂ, ಪ್ರತಿ ಹಂತದಲ್ಲೂ ಅದು ಮುಕ್ತ ಶರಣಾಗತಿಯಾಗಿರಬೇಕು.

*

ಹೃದಯ ಮತ್ತು ಪ್ರಕೃತಿಯು ಶುದ್ಧೀಕರಿಸಲ್ಪಟ್ಟಾಗ, ಆಂತರಿಕ ಪ್ರಜ್ಞೆಯು ಜಾಗೃತಗೊಂಡಾಗ, ಮುಸುಕುಗಳನ್ನು ಕಳಚಿದಾಗ, ನಮ್ಮನ್ನು ನಾವು ನಂಬಿಕೆ ಮತ್ತು ವಿಶ್ವಾಸದಿಂದ ಪರಮಾತ್ಮನಿಗೆ ಸಮರ್ಪಿಸಿಕೊಂಡಾಗ ಪರಮಾತ್ಮನಿಂದ ಎಲ್ಲವೂ ಸಾಧ್ಯ – ನಾವು ಸಂಪೂರ್ಣವಾಗಿ ಎಲ್ಲವನ್ನು ಮಾಡಲು ಸಾಧ್ಯವಾಗದಿದ್ದರೂ, ಆ ದಿಶೆಯಲ್ಲಿ ಹೆಚ್ಚು-ಪ್ರಯತ್ನ ಮಾಡಿದಾಗ, ಆಂತರಿಕ ಸಹಾಯ ಮತ್ತು ಮಾರ್ಗದರ್ಶನವು ಹೆಚ್ಚು ಬರುತ್ತದೆ ಮತ್ತು ದೈವಿಕ ಸಂಪರ್ಕ ಮತ್ತು ಅನುಭವವು ಆಂತರಿಕವಾಗಿ ಬೆಳೆಯುತ್ತದೆ. ಪ್ರಶ್ನಿಸುವ ಮನಸ್ಸು ಕಡಿಮೆ ಕ್ರಿಯಾಶೀಲವಾದರೆ ಶರಣಾಗುವ ನಮ್ರತೆ ಮತ್ತು ಇಚ್ಛೆ ನಿಮ್ಮಲ್ಲಿ ಬೆಳೆಯುತ್ತಿದ್ದರೆ, ಇದು ಸಾಧ್ಯವಾಗಬೇಕು. ಆಗ ಬೇರೆ ಯಾವುದೇ ಶಕ್ತಿ ಮತ್ತು ತಪಸ್ಸು ಅಗತ್ಯವಿಲ್ಲ, ಇದು ಮಾತ್ರ ಸಾಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/67–68**

ನಮ್ಮ ಶರಣಾಗತಿಯು ಸ್ವತಃ ಶ್ರೀಮಾತೆಯವರಿಗೆ ಮಾತ್ರವಿರಬೇಕು – ಬಲಕ್ಕೂ (ಶಕ್ತಿ) ಸಹ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/78**

**ಗುರುವಿಗೆ ಶರಣು**

*ಎಲ್ಲ ಶರಣಾಗತಿಗಳಾಚೆಗಿನ ಶರಣಾಗತಿ ಎಂದು ಕರೆಯುವಂತೆ ಮಾಡುವ ಗುರುವಿನ ಶರಣಾಗತಿಯನ್ನು ಅಷ್ಟೊಂದು ಭವ್ಯ ಮತ್ತು ದಿವ್ಯ ಮಾಡುವುದು ಯಾವುದು?*

ಏಕೆಂದರೆ ಅದರ ಮೂಲಕ (ಗುರುವಿಗೆ ಶರಣಾಗತಿ) ನೀವು ವ್ಯಕ್ತಿಗತವಲ್ಲದಕ್ಕೆ ಮಾತ್ರವಲ್ಲದೆ ವ್ಯಕ್ತಿಗತಕ್ಕೂ, ನಿಮ್ಮಲ್ಲಿರುವ ದೈವೀಕತೆಗೆ ಮಾತ್ರವಲ್ಲದೆ ನಿಮ್ಮ ಹೊರಗಿನ ದೈವೀಕತೆಗೂ ಶರಣಾಗುತ್ತೀರಿ; ಅಹಂಕಾರವು ಅಸ್ತಿತ್ವದಲ್ಲಿ ಇಲ್ಲದ ಆತ್ಮನಲ್ಲಿ ಹಿಂದೆ ಸರಿದುಕೊಳ್ಳುವುದರಿಂದ ಮಾತ್ರವಲ್ಲದೆ, ಅದು ಪ್ರಭುವಾಗಿರುವ ವ್ಯಕ್ತಿಗತ ಸ್ವರೂಪದಲ್ಲೂ ಅಹಂಕಾರವನ್ನು ಮೀರಿಸುವ ಒಂದು ಅವಕಾಶವನ್ನು ನೀವು ಪಡೆದುಕೊಳ್ಳುವಿರಿ. ಇದು ಪರಮಾತ್ಮನಿಗೆ ಶರಣಾಗತಿಯನ್ನು ಪೂರ್ಣಗೊಳಿಸುವ ಇಚ್ಛೆಯ ಸಂಕೇತವಾಗಿದೆ. ಇದೆಲ್ಲವೂ ನಿಜವಾಗಬೇಕಾದರೆ ಅದು ಸತ್ಯವಾದ ಆಧ್ಯಾತ್ಮಿಕ ಶರಣಾಗತಿಯಾಗಬೇಕು.

*

ನಾವು ಪ್ರಾಮಾಣಿಕವಾಗಿ ಶರಣಾಗತಿಯನ್ನು ಮಾಡುವ ನಿರ್ಣಯವನ್ನು ತೆಗೆದುಕೊಂಡಾಗ, ಸಾಧನೆಯ ಜೀವನಕ್ಕೆ ಪ್ರಾಮುಖ್ಯವೆನಿಸಿದ ಯಾವುದನ್ನೂ ಮುಚ್ಚಿಡಬಾರದು.

ತಪ್ಪೊಪ್ಪಿಗೆಯು ಅಡ್ಡಿಪಡಿಸುವ ಅಂಶಗಳ ಪ್ರಜ್ಞೆಯನ್ನು ಶುದ್ಧೀಕರಿಸಲು ಸಹಾಯ ಮಾಡುತ್ತದೆ ಮತ್ತು ಅದು ಆಂತರಿಕ ವಾಯುವನ್ನು ನಿರ್ಮಲಗೊಳಿಸುತ್ತದೆ ಹಾಗೂ ಗುರು ಮತ್ತು ಶಿಷ್ಯರ ನಡುವೆ ಸಂಬಂಧವನ್ನು ಹೆಚ್ಚು ನಿಕಟ ಮತ್ತು ಪರಿಣಾಮಕಾರಿ ಮಾಡುತ್ತದೆ.

*

ಇಲ್ಲ. ಗುರುವಿಗೆ ಶರಣಾಗುವಾಗುವ ಪ್ರಕ್ರಿಯೆಯಲ್ಲಿ, ಅವನಲ್ಲಿರುವ ಪರಮಾತ್ಮನಿಗೆ ಶರಣಾಗುತ್ತಾನೆ – ಅದು ಕೇವಲ ಮಾನವ ಅಸ್ತಿತ್ವವಾಗಿದ್ದರೆ ಅದು ನಿಷ್ಪ್ರಯೋಜಕ. ಆದರೆ ಪರಮಾತ್ಮನ ಸನ್ನಿಧಿಯ ಪ್ರಜ್ಞೆಯೇ ಗುರುವನ್ನು ನಿಜವಾದ ಗುರುವನ್ನಾಗಿ ಮಾಡುತ್ತದೆ. ಶಿಷ್ಯನು ತಾನು ಶರಣಾಗುವ ಗುರುವನ್ನು ಮಾನವನೆಂದು ಯೋಚಿಸಿ ಅವನಿಗೆ ಶರಣಾಗಿದ್ದರೂ, ಆ ಉಪಸ್ಥಿತಿಯು ಅದನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡುತ್ತದೆ.

ಹೌದು (ನಿರಾಕಾರ ಪರಮಾತ್ಮನಿಗೆ ಶರಣಾಗುವ ಪುರುಷನ ಭಾಗಗಳನ್ನು ಗುಣಗಳಿಗೆ ಮತ್ತು ಅಹಂಕಾರಕ್ಕೆ ಒಳಪಡಿಸುತ್ತದೆ) – ಏಕೆಂದರೆ ಸ್ಥಾಯಿ ಭಾಗಗಳು ಮಾತ್ರ ನಿರಾಕಾರದಲ್ಲಿ ಮುಕ್ತವಾಗಿರುತ್ತವೆ, ಕ್ರಿಯಾಶೀಲ ಸ್ವಭಾವವು ಗುಣಗಳ ಕ್ರೀಡೆಯಲ್ಲಿ ಇನ್ನೂ ಇರುತ್ತದೆ. ಅನೇಕರು ತಾವು ಅಹಂಕಾರದಿಂದ ಮುಕ್ತರು ಎಂದು ಭಾವಿಸುತ್ತಾರೆ. ಏಕೆಂದರೆ ಅವರು ನಿರಾಕಾರ ಅಸ್ತಿತ್ವದ ಅನುಭವವನ್ನು ಪಡೆದುಕೊಂಡಿರುತ್ತಾರೆ, ಅಹಂಕಾರದ ಅಂಶವು ಮೊದಲಿನಂತೆಯೇ ಅವರ ಕ್ರಿಯೆಯಲ್ಲಿ ಉಳಿದಿದೆ ಎನ್ನುವುದನ್ನು ಅವರು ನೋಡುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/193–94 – ಶ್ರೀ ಅರವಿಂದರು**

## ಶ್ರೀಮಾತೆಗೆ ಸಮರ್ಪಣೆ

**– ಅನು: ಕಿಶೋರಕುಮಾರ ಕಾಸಾರ**

### ನೈಜ ಪ್ರವೃತ್ತಿಗಳು

ಎಲ್ಲಿಯವರೆಗೆ ಮಾನವನು ತನ್ನ ವೈಚಾರಿಕ ಗ್ರಹಿಕೆಯಿಂದ ದಿವ್ಯಮಾತೆಯನ್ನು ಸಮೀಪಿಸಲು ಪ್ರಯತ್ನಿಸುವನೋ, ಅಲ್ಲಿಯವರೆಗೂ ಅವನ ಜಡಮತಿ ಮತ್ತು ವೈಚಾರಿಕ ಮತಿಗಳ ನಡುವೆ ಸಂದೇಹ, ಗೊಂದಲ ಮತ್ತು ಅಸಮಾಧಾನಗಳು ಮನೆಮಾಡಿಕೊಂಡಿರುತ್ತವೆ. ಉದಾಹರಣೆಗೆ ನಮ್ಮ ಬೇಡಿಕೆಗಳಿಗೆ ದಿವ್ಯಮಾತೆಯು ಹೇಗೆ ಸ್ಪಂದಿಸುತ್ತಾಳೆ ಮತ್ತು ನಮ್ಮ ಆಕಾಂಕ್ಷೆಗಳಿಗೆ ಅವಳು ಯಾವ ರೀತಿಯ ಫಲಗಳನ್ನು ಕರುಣಿಸುತ್ತಾಳೆ ಎಂಬುದರ ಆಧಾರದ ಮೇಲೆ ಅವಳ ಶಕ್ತಿಯನ್ನು ನಿರ್ಣಯಿಸಲಾಗುತ್ತದೆ. ನಮ್ಮ ವೈಚಾರಿಕ ಮಿತಿಯಲ್ಲಿ ಬಯಸುವ ಎಲ್ಲಾ

ಆಕಾಂಕ್ಷೆಗಳನ್ನು ದೈವದ ಮೇಲೆ ಹೇರದೆ, ನಮ್ಮ ಸಂಕಲ್ಪಕ್ಕೆ ದೈವ ಕರುಣಿಸಲಿರುವ ಫಲಿತಾಂಶವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕಿದೆ. ಇದನ್ನೇ ಸಾಧನೆಯ ಪ್ರವೃತ್ತಿ ಎನ್ನುವರು. 'ನನ್ನ ಆಕಾಂಕ್ಷೆಗೆ ತಕ್ಕ ಪ್ರತಿಫಲವನ್ನು ಬಯಸುವುದು ನನ್ನ ಹಕ್ಕು, ಅದು ನನ್ನ ಸ್ವಾತಂತ್ರ್ಯ, ಅದನ್ನು ನಾನು ಪಡೆದೇ ತೀರುತ್ತೇನೆ, ಅದಕ್ಕೋಸ್ಕರ ನಾನು ದೈವದ ವಿರುದ್ಧ ದಂಗೆಯೇಳಲೂ ಸಿದ್ಧ!' ಎಂಬ ಬಂಡಾಯ ವಾದವನ್ನು ತೊರೆದು ದೈವತದಲ್ಲಿ ಸಮರ್ಪಣೆಗೊಳ್ಳಬೇಕು. ಮತ್ತು ಅದು ನೀಡುವ ಫಲವನ್ನು ಸಂತೋಷದಿಂದ ಸ್ವೀಕರಿಸಿ ಅದಕ್ಕೆ ಋಣಿಯಾಗಿರಬೇಕು. ಆಗ ಮಾತ್ರ ನಾವು ದಿವ್ಯತೆಯ ಮೂಲದಿಂದ ನ್ಯಾಯಯುತವಾದ ಫಲಿತಾಂಶವನ್ನು ಪಡೆಯಬಲ್ಲೆವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/46**

## ಗೀತೆ ಮತ್ತು ಸಮರ್ಪಣೆ

ಗೀತೆಯು ವೇದಾಂತಿಕ ಸಂಪ್ರದಾಯವನ್ನು ಅನುಸರಿಸುತ್ತಿದ್ದು, ಅದು ಪರಮ ಪುರುಷನ ದಿವ್ಯತೆ–ಭವ್ಯತೆಗಳನ್ನು ನಮ್ಮೆದುರಿಗೆ ತೆರೆದಿಡುತ್ತದೆ. ಅದರ ಜೊತೆಜೊತೆಗೆ ದಿವ್ಯಮಾತೆಯ ಕುರಿತಾದಂತಹ ವಿಚಾರವನ್ನು ಕೂಡ ಮಂಡಿಸುತ್ತದೆ. ಏಕೆಂದರೆ ಅದು ವೈಶ್ವಿಕ–ಪ್ರಕೃತಿಯನ್ನೂ ಮೀರಿದ ಪರಮ ಸಾಕ್ಷಾತ್ಕಾರದ ವಲಯವನ್ನು ನಮ್ಮೆದುರಿಗೆ ತೆರೆದುತೋರುತ್ತದೆ. ಆದರೆ ತಾಂತ್ರಿಕ ಸಂಪ್ರದಾಯವು ಪುರುಷನನ್ನು ತೊರೆದು, ಕೇವಲ ದಿವ್ಯಮಾತೆಯ ಶಕ್ತಿ ಸ್ವರೂಪವನ್ನು ಮಾತ್ರ ಬಣ್ಣಿಸುತ್ತದೆ. ಹಾಗೂ ಈ ಈಶ್ವರೀ ತತ್ವವೇ ಸಕಲಕ್ಕೂ ಸರ್ವಾಧಾರವೆಂಬ ಸಿದ್ಧಾಂತವನ್ನು ಮಂಡಿಸುತ್ತದೆ. ಏಕೆಂದರೆ ಇದು ವೈಶ್ವಿಕ–ಪ್ರಕೃತಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು, ಅದರ ಮೇಲೆ ನಿಯಂತ್ರಣವನ್ನು ಸಾಧಿಸಿ, ಕೊನೆಗೆ ಅದರ ಮುಖಾಂತರವೇ ಸರ್ವೋಚ್ಚ ಸಾಕ್ಷಾತ್ಕಾರವನ್ನು ಪಡೆಯುವ ವಿಧಾನವನ್ನು ವಿವರಿಸುತ್ತದೆ. ಆದರೆ ಯೋಗ ಸಿದ್ಧಾಂತವು ಈ ಎರಡೂ ತತ್ವಗಳನ್ನು ಒಪ್ಪಿಕೊಳ್ಳುತ್ತದೆ. ಏಕೆಂದರೆ ದಿವ್ಯಮಾತೆಯಲ್ಲಿ ಸಮರ್ಪಣೆಗೊಳ್ಳದೆ ಯೋಗ ಸಾಧನೆಯು ಸಾಧ್ಯವಿಲ್ಲ.

ಪುರುಷೋತ್ತಮನಿಗೆ ಸಂಬಂಧಿಸಿದ ವಿಚಾರದಲ್ಲಿ ದಿವ್ಯಮಾತೆಯು ಸರ್ವ ಲೋಕಗಳಿಗೂ ಧಾರಕ ಶಕ್ತಿಯಾಗಿ, ಸರ್ವೋಚ್ಚ ದೈವೀಕ ಪ್ರಜ್ಞೆಯಾಗಿ, ಸೃಷ್ಟಿಯ

ಆದ್ಯ ಶಕ್ತಿಯಾಗಿ ತನ್ನೊಳಗೆ ದಿವ್ಯತೆಯನ್ನು ಹೊತ್ತು ಕ್ಷರ ಮತ್ತು ಅಕ್ಷರಗಳ ಮೂಲಕ ಇಡೀ ವಿಶ್ವದಲ್ಲಿ ದಿವ್ಯತೆಯನ್ನು ಪ್ರಚುರಪಡಿಸುತ್ತಾಳೆ. ಅಕ್ಷರ ಸಿದ್ಧಿಯಲ್ಲಿ ಅವಳು ಪರಾಶಕ್ತಿಯಾಗಿ ಸ್ಥಾಣು ವಿಷ್ಣುವನ್ನು ತನ್ನೊಳಗೆ ಹೊತ್ತು, ತಾನೂ ಸಹ ಸ್ಥಾಣು ಶಕ್ತಿಯಾಗಿ ಪುರುಷನೊಳಗೆ ನೆಲೆಸಿ ಸೃಷ್ಟಿಯ ಹಿಮ್ಮೇಳದಲ್ಲಿ ನಿಂತು ಸಕಲ ವಿಶ್ವವನ್ನು ಮುನ್ನಡೆಸುತ್ತಾಳೆ. ಇನ್ನು ಕ್ಷರಸಿದ್ಧಿಯಲ್ಲಿ ಜಂಗಮ ಜಿಷ್ಣುವಿನಂತೆ ಪ್ರತಿಯೊಂದು ಚೇತನಗಳಲ್ಲಿ ಜಂಗಮ ಶಕ್ತಿಯಾಗಿ–ವೈಶ್ವೀಕ ಶಕ್ತಿಯಾಗಿ ಅಭಿವ್ಯಕ್ತಿಗೊಳ್ಳುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/56**

**ದಿವ್ಯಮಾತೆ ಮತ್ತು ನಿರ್ಭಾವುಕತೆ**

ನೀವೊಂದು ಸಲ ನಿಮ್ಮ ಪತ್ರದಲ್ಲಿ, "ಎಲ್ಲಾ ವಿಧದಿಂದಲೂ ಸಮರ್ಪಣೆಯು ಒಳ್ಳೆಯದು, ಆದರೆ ಅದಕ್ಕೆ ನಿರ್ಭಾವುಕತೆಯೊಂದೇ ಸಾಕಾಗುವದಿಲ್ಲ. ಅದನ್ನು ಸಾಧಿಸಬೇಕಿದ್ದರೆ ನಮ್ಮ ವೈಯಕ್ತಿಕ ಜೀವನದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಮಗೆ ದೊರೆಯುವ ಆಂತರಿಕ ಅನುಭೂತಿಗಳಲ್ಲಿ ವ್ಯತ್ಯಯವು ಕಂಡುಬರುವುದು" ಎಂದು ಬರೆದಿದ್ದೀರಿ. ಆದರೆ ಹಾಗೆಂದರೇನು ಎಂದು ನನಗೆ ಅರ್ಥವಾಗುತ್ತಿಲ್ಲ.

ನಿಮಗೆ ಇಷ್ಟೊಂದು ಸರಳ ಮತ್ತು ಸುಂದರವಾದ ವ್ಯಾಖ್ಯೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದರೆ ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಯಾವಾಗಲೂ ಯೋಗ ಸಾಧನೆಯಲ್ಲಿ ನಿರ್ಭಾವುಕತೆಯನ್ನು ಮೀರಿ ಮುಂದೋಡಿದಾಗ ಮಾತ್ರ ನಮಗೆ ಆಂತರಿಕ ಅನುಭೂತಿಗಳಾಗುತ್ತವೆ. ಈ ಸಾಧನೆ ಹೀಗೆ ಮುಂದುವರೆದರೆ ಅದು ನಮ್ಮನ್ನು ಮುಕ್ತಿಯ ಶಿಖರದೆಡೆಗೆ ಕೊಂಡೊಯ್ಯುತ್ತದೆ. ದಿವ್ಯತೆಯ ಪೂರ್ಣ ಅನಾವರಣಗೊಳ್ಳದ ಹೊರತು ಇಡೀ ಪ್ರಕೃತಿಯ ಚಕ್ರ ಪ್ರವರ್ತನವು ಸಾಧ್ಯವಿಲ್ಲ. ಹಾಗಾದಾಗ ವಿಶ್ವದಲ್ಲಿ ದಿವ್ಯಮಾತೆಯ ಸನ್ನಿಧಿಯೂ ಇರುವುದಿಲ್ಲ, ನಮ್ಮೆಲ್ಲರ ಉಪಸ್ಥಿತಿಯೂ ಇರುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/87**

**ಸಾಧನೆಗೆ ಸಾಧನಗಳು**

ದಿವ್ಯಮಾತೆಯೆಡೆಗಿನ ಆಕಾಂಕ್ಷೆ, ಸ್ಮರಣೆ, ನಿರಾಕರಣೆಗಳು ಮತ್ತು ಸಮರ್ಪಣಾ ವಿಧಾನದ ಮೂಲಕ ಅವಳ ದಿವ್ಯ ಪ್ರಜ್ಞೆಯೊಡನೆ ಒಂದಾಗುವ ಪ್ರಮೇಯಗಳೇ ಸಾಧನೆಗೆ ಮುಖ್ಯ ಸಾಧನಗಳಾಗಿವೆ. ಆದರೆ ಕೆಲವರು ಇವೆಲ್ಲವುಗಳನ್ನು ತೊರೆದು ತಮ್ಮದೆ ಆದ ಕ್ಷುದ್ರ ಮಾರ್ಗಗಳಿಂದ ಸರ್ವೋತ್ಕೃಷ್ಟ ಸ್ತರವನ್ನೇರಲು ಪ್ರಯತ್ನಿಸುತ್ತಾರೆ. ಇದನ್ನೇ ಅಜ್ಞಾನದ ಪರಮಾವಧಿ ಎನ್ನುವರು. ನಾನು ಆರಂಭಿಕ ಹಂತದಿಂದಲೂ ಒಂದು ವಿಚಾರವನ್ನು ನಿಮ್ಮೊಂದಿಗೆ ಪದೆ–ಪದೆ ಚರ್ಚಿಸುತ್ತಲೇ ಬಂದಿದ್ದೇನೆ. ಅದೇನೆಂದರೆ ದೈವದೊಂದಿಗಿನ ಅನುಸ್ಪಂದನ, ಅದರ ಗುರಿ – ಕಾರ್ಯವಿಧಾನ, ದರ್ಶನದ ಪರಿಣಾಮ ಮತ್ತು ಯೋಗಿಕ ಅನುಭೂತಿಗಳು ಮಾನವನ ಸ್ವಂತ ಉದ್ದೇಶ ಮತ್ತು ಅಹಮಿಕೆಯ ಪಾಲಾಗದಿರಲಿ. ಏಕೆಂದರೆ ಯೋಗ್ಯ ಗುರಿ–ನಿರ್ಧಾರಗಳಿಲ್ಲದ ಸಾಧಕನು ಧ್ಯಾನ, ದರ್ಶನ ಮತ್ತು ಯೋಗದ ವಿಧಾನಗಳನ್ನು ತನ್ನ ಕುಕೃತ್ಯಗಳಿಗಾಗಿ ದುರುಪಯೋಗಪಡಿಸಿ–ಕೊಳ್ಳಬಹುದು. ಹಾಗೆಂದು ಧ್ಯಾನ, ದರ್ಶನ ಮತ್ತು ಯೋಗದ ವಿಧಾನಗಳನ್ನು ಸಾಧನೆಯ ಸಾಧನಗಳೆಂದು ಪರಿಗಣನೆಗೆ ತೆಗೆದುಕೊಳ್ಳಬಾರದು ಎಂದಲ್ಲ.

ನೀವು ಪ್ರತೀ ಬಾರಿ ದಿವ್ಯಮಾತೆಯನ್ನು ನೆನೆದಾಗಲೂ ನಿಮ್ಮ ಸ್ಮರಣೆಗೆ ಮೂಲಕಾರಣ ದಿವ್ಯತೆಯೇ ಆಗಿರುತ್ತದೆ, ಏಕೆಂದರೆ ದಿವ್ಯತೆಯಿಂದ ಹರಿದು ಬರುವ ಆಜ್ಞೆಗಳೇ ನಿಮ್ಮ ಕಾರ್ಯಕ್ಕೆ ಪ್ರೇರೇಪಣೆಯಾಗಿರುತ್ತವೆ. ಆದರೆ ಕೆಲವೊಂದು ಬಾರಿ ಕುಕೃತ್ಯಗಳನ್ನೆಸಗಿ ಅದೂ ಸಹ ದಿವ್ಯತೆಯ ಆಜ್ಞೆಯೇ ಆಗಿದೆ ಎಂದು ಹಾರಿಕೆಯ ಉತ್ತರವನ್ನು ಕೊಡುವ ಮನಸ್ಥಿತಿಗಳು ಸಮಾಜಕ್ಕೆ ಅಪಾಯಕಾರಿಯಾಗಿವೆ. ಪ್ರಕೃತಿಯಿಂದ ಬಹಿಷ್ಕೃತಗೊಳ್ಳಬೇಕಿರುವ ದ್ರವ್ಯಗಳಿಗೆ ಪೂರ್ಣ ತಿರಸ್ಕಾರವನ್ನು ನೀಡುವ ಬದಲು ಅವುಗಳನ್ನು ಯೋಗ್ಯ ರೀತಿಯಲ್ಲಿ ಸ್ವೀಕರಿಸುವ ಮೂಲಕ ಈ ಅಪಾಯಕಾರಿ ನಿಲುವುಗಳನ್ನು ತಡೆಯಬಹುದಾಗಿದೆ.

ಆಂತರಿಕ ಅನುಭೂತಿಗಳನ್ನು ತೊರೆದು ಕೇವಲ ಬಾಹ್ಯದ ಐಹಿಕ ಸುಖ ಸಂಪದಕ್ಕಾಗಿ ಬದುಕುವ ಜೀವನವು ಪ್ರತಿಯೋರ್ವರಿಗೂ ಪ್ರತಿ ಹಂತದಲ್ಲೂ ಹಿತಕರವಾಗಿಯೇ ಇರುತ್ತದೆ ಎಂದು ಹೇಳಲಾಗದು. ಇದಕ್ಕೆ ವ್ಯತಿರಿಕ್ತವೆಂಬಂತೆ ವಾನಪ್ರಸ್ಥದ ವೈರಾಗ್ಯಯುತ ಜೀವನವೂ ಕೂಡ ಪ್ರತಿಯೋರ್ವರಿಗೂ ಪ್ರತಿ

ಹಂತದಲ್ಲೂ ಯುಕ್ತಫಲವನ್ನೇ ನೀಡುವಂತಹುದು ಎಂದು ಕೂಡ ಹೇಳುವಂತಿಲ್ಲ. ಈ ಎರಡೂ ನಿಯಮಗಳಲ್ಲಿ ಕೆಲವೊಂದು ಅನಾನುಕೂಲತೆಗಳಿವೆ. ನಿರಂಕುಶತೆಯ ವಿಲಾಸೀ ಜೀವನದ ಮುಖ್ಯ ಅನಾನುಕೂಲತೆಯೆಂದರೆ, ಆ ಹಂತದಲ್ಲಿ ವ್ಯಕ್ತಿಗತರು ಬಾಹ್ಯ ರಂಜನೆಗಳಿಗೆ ಒಗ್ಗಿಕೊಂಡಿರುವದರಿಂದ, ಬಹಿರಂಗದ ಆ ಕೃತಕ ವೈಭವಗಳು ಅವರ ವೈಚಾರಿಕ ಮತಿಯನ್ನು ಮಂದಗೊಳಿಸಿ, ಅವರ ಆಂತರಿಕ ಪ್ರಬುದ್ಧತೆಯನ್ನು ಲುಪ್ತಗೊಳಿಸಿ, ದೈವದೆಡೆಗಿನ ಸಮರ್ಪಣಾ ಭಾವನೆಯನ್ನು ಮೊಟಕುಗೊಳಿಸಿ, ಅವರಿಗೆ ದಿವ್ಯತೆಯೊಡನಿರುವ ಸಂಪರ್ಕವನ್ನು ಸಂಪೂರ್ಣವಾಗಿ ಕಡಿದುಹಾಕುತ್ತದೆ. ಇನ್ನು ವೈರಾಗ್ಯಯುತ ಜೀವನದ ಅನಾನುಕೂಲತೆಯೆಂದರೆ, ಅದು ಸಾಧಕನಲ್ಲಿ ಏಕಪಕ್ಷೀಯತನವನ್ನು ಬೆಳೆಸಿ ಅವನನ್ನು ಏಕಾಂಗಿ ಮತ್ತು ಮೌನಿಯನ್ನಾಗಿಸುತ್ತದೆ, ಅವನನ್ನು ವ್ಯಕ್ತಿನಿಷ್ಠನನ್ನಾಗಿಸಿ ಮರ್ತ್ಯದ ಜಡ ಸಂಪರ್ಕಗಳಿಂದ ದೂರ ಸರಿಯುವಂತೆ ಪ್ರೇರೇಪಿಸುತ್ತದೆ. ಇದರಿಂದ ಸಾಧಕನು ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು ಭ್ರಮೆ ಮತ್ತು ವಾಸ್ತವಿಕತೆಗಳ ನಡುವಿನ ಅಂತರವನ್ನು ತಿಳಿಯಲಾರದ ಸ್ಥಿತಿಯನ್ನು ತಲುಪಬಹುದು. ಈ ಎರಡೂ ಮಾರ್ಗಗಳನ್ನು ತೊರೆದು, ಬದುಕು ಮತ್ತು ಜೀವನಕ್ಕೆ ಹೆಚ್ಚಿನ ಒತ್ತು ನೀಡುವ ಮಧ್ಯಮ ಮಾರ್ಗವು ಮನುಜನಲ್ಲಿ ಬಾಹ್ಯದ ಕೃತ್ರಿಮ ದ್ರವ್ಯಗಳನ್ನು ಸಂಪೂರ್ಣವಾಗಿ ತೊರೆಯದೆ ಅವುಗಳನ್ನು ಒಂದು ನವೀನ ದೃಷ್ಟಿಕೋನದಿಂದ ಸ್ವೀಕರಿಸಿ ಅವುಗಳನ್ನು ತಮ್ಮ ಆಂತರಿಕ ಪ್ರಜ್ಞೆಯ ಜಾಗೃತಿಗಾಗಿ ಬಳಸಿಕೊಳ್ಳುವ ಜ್ಞಾನವನ್ನು ತುಂಬುತ್ತದೆ. ಹಾಗಾಗಿ ನಾವು ಕರ್ಮಠರಾಗಿ ಬಾಹ್ಯದ ಸಂಗತಿಗಳನ್ನು ವರ್ಜಿಸುವದರ ಬದಲಾಗಿ ಪ್ರಜ್ಞಾಪೂರ್ವಕವಾಗಿ ಅವುಗಳೊಂದಿಗಿನ ನಮ್ಮ ಸಂಪರ್ಕವನ್ನು ಕಡಿಮೆಗೊಳಿಸಿಕೊಳ್ಳುವ ಅವಶ್ಯಕತೆಯಿದೆ. ಆದರೆ ಈ ವಿಷಯದಲ್ಲಿ ಯಾವುದೇ ನಿಯಮವನ್ನು ನಿಮ್ಮ ಮೇಲೆ ಸಂಪೂರ್ಣವಾಗಿ ಹೇರುವಂತಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/138**

## ಪ್ರಮುಖವಾದ ಪ್ರಯತ್ನ

ಸಾಧಕನ ಪ್ರಮುಖವಾದ ಪ್ರಯತ್ನಗಳೆಂದರೆ ಅವನ ಆಕಾಂಕ್ಷೆ, ನಿರಾಕರಣೆ ಮತ್ತು ಸಮರ್ಪಣೆಗಳು. ಸಾಧಕನು ಈ ಮೂರು ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಪೂರೈಸಿದರೆ ಸಾಕು. ಆ ದಿವ್ಯಮಾತೆಯ ಕೃಪೆ ಮತ್ತು ನಮ್ಮೊಳಗೆ ಜಾಗೃತವಾಗಿ ಕಾರ್ಯನಿರ್ವಹಿಸುತ್ತಿರುವ ಅವಳ ದಿವ್ಯಶಕ್ತಿಯು, ನಮ್ಮ

ಪ್ರಯತ್ನಕ್ಕೆ ತಕ್ಕ ಫಲಗಳನ್ನು ಕರುಣಿಸುತ್ತವೆ. ಆದರೆ ಈ ಮೂರೂ ಪ್ರಯತ್ನಗಳಲ್ಲಿ ಪ್ರಮುಖವಾದುದೆಂದರೆ ಸಮರ್ಪಣೆ! ಈ ಸಮರ್ಪಣಾ ಮನೋಭಾವನೆಯಲ್ಲಿ ಮುಖ್ಯವಾಗಿ ನಂಬಿಕೆ, ವಿಶ್ವಾಸ ಮತ್ತು ಎಂತಹ ಕಷ್ಟದ ಪರಿಸ್ಥಿತಿಯಲ್ಲೂ ನಾವು ತೋರುವ ತಾಳ್ಮೆಯ ಅವಶ್ಯಕತೆಯಿರುತ್ತದೆ. ನಮ್ಮಲ್ಲಿ ಆಕಾಂಕ್ಷೆಯಿದ್ದರೆ ಮಾತ್ರ ನಂಬಿಕೆ ಮತ್ತು ವಿಶ್ವಾಸಗಳು ಉಳಿಯುತ್ತವೆ ಎಂಬ ನಿಯಮವೇನಿಲ್ಲ! ಕೆಲವೊಂದು ಸಂದರ್ಭಗಳಲ್ಲಿ ಮರ್ತ್ಯದ ಜಡತ್ವದ ಒತ್ತಡಗಳಿಗೆ ಮಣಿದು ನಮ್ಮಲ್ಲಿನ ಆಕಾಂಕ್ಷೆಯು ಅಳಿದುಹೋದರೂ ನಮ್ಮ ನಂಬಿಕೆ, ವಿಶ್ವಾಸ ಮತ್ತು ತಾಳ್ಮೆಗಳಿಗೇನೂ ಹಾನಿಯಾಗಿರುವದಿಲ್ಲ. ಅವು ಮೊದಲಿನಂತೆಯೇ ನಮ್ಮೊಳಗೆ ಜಾಗೃತವಾಗಿರುತ್ತವೆ. ಇದಕ್ಕೆ ವೈರುದ್ಧ್ಯವೆಂಬಂತೆ ಕೆಲವೊಮ್ಮೆ ಸಾಧಕನಲ್ಲಿ ಆಕಾಂಕ್ಷೆಯು ಸ್ಥಬ್ದವಾಗಿ, ಅದರ ಜೊತೆಜೊತೆಗೆ ನಂಬಿಕೆ ಮತ್ತು ತಾಳ್ಮೆಗಳು ಕೂಡ ವಿಫಲವಾದಲ್ಲಿ ಸಾಧಕನು ತನ್ನ ಸ್ವಪ್ರಯತ್ನದ ಮೇಲೆ ಅವಲಂಬಿತನಾಗಿ ಮುನ್ನುಗ್ಗಬೇಕು. ಆ ಹಂತದಲ್ಲಿ ಧೃತಿಗೆಟ್ಟ ಸಾಧಕನು, "ಅಯ್ಯೋ! ನನ್ನ ಆಕಾಂಕ್ಷೆಯು ವಿಫಲವಾಗಿದೆ. ನನ್ನ ಉನ್ನತಿಗೆ ಇನ್ನಾವ ಭರವಸೆಯೂ ಉಳಿದಿಲ್ಲ. ಆಕಾಂಕ್ಷೆಯು ಇಲ್ಲದ ಈ ಸಂದರ್ಭದಲ್ಲಿ ದಿವ್ಯಮಾತೆಯು ನನ್ನನ್ನು ಯಾವ ರೀತಿಯಲ್ಲಿ ಸಹಕರಿಸುವಳೋ ತಿಳಿದಿಲ್ಲ?"ಎಂದು ಗೋಳಿಡುವನು. ಆದರೆ ಧೃಡ ಸಂಕಲ್ಪವನ್ನು ಮತ್ತೆ ಚೈತನ್ಯದಲ್ಲಿ ತುಂಬಿಕೊಂಡು, "ಇಷ್ಟಕ್ಕೇ ಧೃತಿಗೆಡುವ ಅವಶ್ಯಕತೆಯಿಲ್ಲ, ನನ್ನಿಂದ ಕಳೆದುಹೋದ ಆಕಾಂಕ್ಷೆಯು ಕೇಲವೇಕ್ಷಣಗಳಲ್ಲಿ ಮತ್ತೆ ಪ್ರಜ್ಞೆಯಲ್ಲಿ ಹಿಂದಿರುಗುವುದು. ಅಲ್ಲಿಯವರೆಗೆ ನನಗೆ ನಾನು ಒಬ್ಬೊಂಟಿಗ–ನಾಗಿರುವೆನೆಂದು ಭಾಸವಾದರು ಕೂಡ, ಆ ದಿವ್ಯಮಾತೆಯ ಸಾಮಿಪ್ಯವನ್ನು ಅನುಭವಿಸುತ್ತಲೇ ಇರುತ್ತೇನೆ. ಅವಳು ಸದಾಕಾಲ ನನ್ನೊಂದಿಗಿದ್ದು ಈ ಅಂಧಕಾರದ ಕೂಪದಿಂದ ನನ್ನನ್ನು ಹಿಡಿದೆತ್ತಿ ಪ್ರಕಾಶದೆಡೆಗೆ ಕರೆದೊಯ್ಯುತ್ತಾಳೆ ಎಂಬ ಭರವಸೆ ನನ್ನಲ್ಲಿದೆ!"ಎಂದು ಅವಳ ಅನುಭೂತಿಯನ್ನು ಅನುಭವಿಸಬೇಕು. ಸಾಧಕನಲ್ಲಿ ಖಿನ್ನತೆಯು ಮನೆಮಾಡಿದಾಗ ಅವನಿಂದ ಯಾವ ಸಾಧನೆಯೂ ಸಾಧ್ಯವಿಲ್ಲ. ನಮ್ಮ ಧೃಡ ಸಂಕಲ್ಪ ಹೇಗಿರಬೇಕೆಂದರೆ ಖಿನ್ನತೆಯು ನಮ್ಮನ್ನಾವರಿಸಲು ಬಂದಾಗ್ಯೂ ನಮ್ಮ ಆಕಾಂಕ್ಷೆಯ ಸಾಮರ್ಥ್ಯವನ್ನು ಕಂಡು ಹೆದರಿ ಹಿಂತಿರುಗಬೇಕು. ಈ ಖಿನ್ನತೆಯೊಂದೇ ನಮ್ಮನ್ನು ತಾಮಸಿಕ ಸಮರ್ಪಣೆಯೆಡೆಗೆ ತಳ್ಳಲು ಶಕ್ಯವಾಗಿಲ್ಲ. ಯಾವಾಗ ನಾವು, "ನನ್ನಿಂದ ಯಾವುದೇ ಸಾಧನೆಗಳು ಸಾಧ್ಯವಿಲ್ಲ. ದಿವ್ಯಮಾತೆಯೇ ನನ್ನಿಂದ ಆ ಕಾರ್ಯಗಳನ್ನು ಮಾಡಿಸಲಿ. ಅದಕ್ಕಾಗಿ

ನನಗೆ ಆಕಾಂಕ್ಷೆ, ನಿರಾಕರಣೆ ಮತ್ತು ಸಮರ್ಪಣಾ ಮನೋಭಾವನೆಗಳ ಅವಶ್ಯಕತೆಯೂ ಇಲ್ಲ. ಅವಳೇ ನನ್ನನ್ನು ಮುನ್ನಡೆಸಲಿ" ಎಂದು ಸೋಮಾರಿತನವನ್ನು ಮೈಗೂಡಿಸಿಕೊಳ್ಳುವೆವೋ ಆಗ ತಾಮಸಿಕ ಸಮರ್ಪಣೆಯು ನಮ್ಮನ್ನು ನಿಧಾನವಾಗಿ ಆವರಿಸಿಕೊಳ್ಳುವುದು. ಸಾಧನೆಯ ಹಾದಿಯಲ್ಲಿರುವ ಎರಡು ಮನೋಭಾವನೆಗಳ ನಡುವೆ ಅಗಾಧವಾದ ವ್ಯತ್ಯಾಸವಿದೆ. ಮೊದಲನೆಯದು ಯಾವ ಕಾರ್ಯವನ್ನೂ ಮಾಡದೆ ತಟಸ್ಥ ನೀತಿಯನ್ನನುಸರಿಸುವ ಪಲಾಯನಾವಾದಿಯದ್ದು, ಇನ್ನೊಂದು ತನ್ನ ಸಾಮರ್ಥ್ಯವಿರುವಷ್ಟು ಕಾರ್ಯವನ್ನು ಮಾಡುವ ಸಾಧಕನದ್ದು. ಇಲ್ಲಿ ಸಾಧಕನು ತನ್ನ ಕಾರ್ಯಚಟುವಟಿಕೆಗೆ ಪ್ರತಿಕೂಲವಾದ ವಾತಾವರಣವು ಸೃಷ್ಟಿಯಾದಾಗ ಅವನು ಕೆಲ ಸಮಯದವರೆಗೆ ಶಾಂತವಾಗಿದ್ದು, ತನ್ನ ಜೊತೆಗಿರುವ ದಿವ್ಯಮಾತೆಯ ಸನ್ನಿಧಿಯನ್ನು ಅನುಭವಿಸುತ್ತಾನೆ. ಹಾಗೂ ಕೆಲಹೊತ್ತಿನ ನಂತರ ಮತ್ತೆ ಕಾರ್ಯಪ್ರವೃತ್ತನಾಗಿ ಮುನ್ನುಗ್ಗುತ್ತಾನೆ, ತನ್ನ ನಂಬಿಕೆಯನ್ನು ಮೊಟಕುಗೊಳಿಸಲೆಂದು ಬಂದ ವಿರೋಧಿ ಶಕ್ತಿಗಳನ್ನು ಹೆದರಿ ಓಡುವಂತೆ ತನ್ನ ಸಾಮರ್ಥ್ಯವನ್ನು ಮರಳಿ ಹಿಂಪಡೆಯುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/140**

## ಪ್ರಗತಿಪರ ಸಮರ್ಪಣೆ

ಸಮರ್ಪಣಾ ಮನೋಭಾವನೆಯಿಲ್ಲದೆ ದಿವ್ಯಮಾತೆಯನ್ನು ಸಮೀಪಿಸಬೇಕೆಂಬ ಪ್ರಯತ್ನಕ್ಕೆ ಆಧ್ಯಾತ್ಮಿಕ ನೆಲೆಯಲ್ಲಿ ಯಾವುದೇ ಸ್ಥಾನವಿಲ್ಲ. ಯೋಗ ಸಾಧನೆಯಲ್ಲಿ ನಿರತರಾಗಿರುವ ಸಾಧಕರಿಗೆ ಸ್ವ–ಅರ್ಪಣೆ ಮತ್ತು ಸಮರ್ಪಣೆಯ ಮನೋಭಾವನೆಗಳು ಅತ್ಯಗತ್ಯ. ಏಕೆಂದರೆ ಪ್ರಗತಿಪರ ರೂಪದ ಸಮರ್ಪಣೆಯಿಲ್ಲದೆ ಸಾಧಕನು ತನ್ನ ಯಾವುದೇ ಗುರಿಯನ್ನು ತಲುಪಲು ಸಾಧ್ಯವಿಲ್ಲ. ದಿವ್ಯಮಾತೆಯನ್ನು ಸಮೀಪಿಸುವದೆಂದರೆ ಅವಳ ದಿವ್ಯಶಕ್ತಿಯನ್ನು ನಮ್ಮ ಚೈತನ್ಯದೊಳಗೆ ಆಹ್ವಾನಿಸುವದು ಎಂದರ್ಥ. ಒಂದುವೇಳೆ ನೀವು ಸಮರ್ಪಣಾ ಮನೋಭಾವನೆಯಿಲ್ಲದೆ ದಿವ್ಯಮಾತೆಯನ್ನು ಸಮೀಪಿಸಲು ಪ್ರಯತ್ನಿಸುತ್ತಿದ್ದರೆ, ಅವಳ ದಿವ್ಯಶಕ್ತಿಯು ಎಂದಿಗೂ ನಿಮ್ಮ ಚೈತನ್ಯದೊಳಗೆ ಪ್ರವೇಶಿಸುವದಿಲ್ಲ. ಹಾಗೊಂದು ವೇಳೆ ಅದು ನಿಮ್ಮೊಳಗೆ ಪ್ರವಹಿಸಿ ಕಾರ್ಯಪ್ರವೃತ್ತವಾದರೂ ಸಹ ಆ ಶಕ್ತಿಯು ನಿಮ್ಮ ಇಚ್ಛೆಗೆ ತಕ್ಕಂತೆ ನಡೆದು ಗುರಿಯಿರದ ಮಾರ್ಗದಲ್ಲಿ ಸಾಗುವುದೇ ವಿನಃ ತನ್ನ ದಿವ್ಯ ಮಾರ್ಗವನ್ನು ತುಳಿದು

ಋತವನ್ನೆಂದಿಗೂ ತಲುಪುವದಿಲ್ಲ. ಈ ರೀತಿಯ ಸಂದಿಗ್ಧಗಳನ್ನು ರೂಪಿಸುವ ಅಸುರೀ ಶಕ್ತಿಗಳು ಮತ್ತು ವೈಚಾರಿಕ ಹಂತದ ಅಹಮಿಕೆಯ ಅಂಶಗಳು ಆ ದಿವ್ಯ ಶಕ್ತಿಯನ್ನು ದಿವ್ಯತೆಯ ಅವತರಣಕ್ಕಾಗಿ ಸದುಪಯೋಗಪಡಿಸಿಕೊಳ್ಳದೇ ತನ್ನ ಸ್ವಂತದ ಕುಕೃತ್ಯಗಳಿಗಾಗಿ ದುರುಪಯೋಗಪಡಿಸಿಕೊಳ್ಳುತ್ತವೆ. ಈ ಕ್ಷುದ್ರತೆಯು ದಿವ್ಯತೆಯ ಮೂಲದಿಂದ ಹೊರಡುವ ದೈವೀಕ ದ್ರವ್ಯಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾಗಿರುತ್ತದೆಯೇ ಹೊರತು, ತನ್ನಿಂದ ಸಾಧ್ಯವಾದಷ್ಟು ದ್ರವ್ಯಗಳನ್ನು ದಿವ್ಯತೆಗೆ ಸಮರ್ಪಿಸಲು ಪ್ರಯತ್ನಿಸುವದಿಲ್ಲ. ಇದಕ್ಕೆ ವೈರುದ್ಧ್ಯವೆಂಬಂತೆ ಆತ್ಮ ಮತ್ತು ಋತಚೇತನಗಳು ಸದಾ ತಮ್ಮನ್ನು ತಾವು ದಿವ್ಯತೆಯೆಡೆಗೆ ತೆರೆದುಕೊಂಡಿರುತ್ತವೆ. ಇದು ಕೇವಲ ಸ್ವಾರ್ಪಣೆಯಲ್ಲ. ಬದಲಾಗಿ ಸಂತೋಷ ಮತ್ತು ಉತ್ಸಾಹಗಳಿಂದ ಕೂಡಿದ ಸಮರ್ಪಣೆಯಾಗಿದೆ.

ಯೋಗಸಿದ್ಧಿಯ ಮೂಲಕ ಸಾಧಕನು ವೈಚಾರಿಕ ನೆಲೆಗಟ್ಟಿನ ಸಂಸ್ಕೃತಿಯ ಕಟ್ಟಳೆಯನ್ನು ಮೀರಿ ಮೇಲೇರಬಲ್ಲನು. ವಿಚಾರ ಮತ್ತು ವೈಚಾರಿಕತೆಗಳು ಬೌದ್ಧಿಕ ಸ್ತರದಲ್ಲಿ ರೂಪುಗೊಂಡಿದ್ದು, ಇವು ಕೇವಲ ಅರ್ಧಸತ್ಯಗಳಾಗಿರುತ್ತವೆ. ಈ ವಿಚಾರಗಳು ನಮ್ಮನ್ನು ಅಲ್ಪ ತೃಪ್ತರನ್ನಾಗಿಸಿ ನಮ್ಮ ಆರೋಹಣ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುತ್ತದೆ. ಹಾಗೂ ನಮ್ಮ ಬದುಕನ್ನು ಪರಿವರ್ತನೆ ಮತ್ತು ರೂಪಾಂತರಣಗಳಿಂದ ದೂರವಿರಿಸುತ್ತದೆ. ಕೆಲವೊಮ್ಮೆ ತೋರಿಕೆಯ ಮಟ್ಟದಲ್ಲಿ ಬದಲಾವಣೆಗಳನ್ನು ಮಾಡಿದರೂ ಸಹ ಅವು ಪ್ರವರ್ತನದಷ್ಟು ಅಗಾಧವಾದ ವ್ಯಾಪ್ತಿಯನ್ನು ಹೊಂದಿರುವದಿಲ್ಲ. ಒಬ್ಬ ಆಧ್ಯಾತ್ಮಿಕ ಸಾಧಕನು ವಿಚಾರ ಮತ್ತು ವೈಚಾರಿಕತೆಯ ಬಲೆಯಲ್ಲಿ ಸಿಲುಕಿಕೊಳ್ಳದೆ ಮುನ್ನುಗ್ಗಿ ತನ್ನ ಋತಂಬರದ ಗುರಿ ಶಿಖರವನ್ನು ತಲುಪುತ್ತಾನೆ. ಹಾಗಾಗಿ ನಾವೆಲ್ಲರೂ ನಮ್ಮ ವೈಚಾರಿಕ ಮತಿಯನ್ನು ತೊರೆದು ಆಧ್ಯಾತ್ಮಿಕತೆಯ ಮೂಲಕ ನಮ್ಮ ಬುದ್ಧಿ ಮತ್ತು ಬದುಕನ್ನು ಪರಿವರ್ತಿಸಿಕೊಳ್ಳಬೇಕಿದೆ. ಈ ಪರಿವರ್ತನೆಯು ದಿವ್ಯಮಾತೆಯ ದಿವ್ಯಶಕ್ತಿಯಲ್ಲಿ ಸಮರ್ಪಣೆಗೊಳ್ಳದೆ ಸಾಧ್ಯವಿಲ್ಲ.

ನಿರ್ಭಾವುಕತೆಯ ಸಾಧನೆಯು ಬದುಕಿಗೆ ಬೆನ್ನು ತೋರಿಸುವ ವಿಧಾನವಾಗಿದೆ. ಈ ಮಾರ್ಗದಲ್ಲಿ ನಡೆಯುವ ಸಾಧಕನು ಸಮರ್ಪಣಾ ಮನೋಭಾವನೆಯಿಂದ ಅತ್ಯುನ್ನತ ಶಕ್ತಿಯೆಡೆಗೆ ತೆರೆದುಕೊಳ್ಳುವ ಬದಲಾಗಿ ತನ್ನ ಸ್ವ–ಪ್ರಯತ್ನವನ್ನು ಮಾತ್ರ ನಂಬಿ ಮುನ್ನುಗ್ಗುತ್ತಿರುತ್ತಾನೆ. ಈ ವಿಧಾನದಲ್ಲಿ ಸಾಧಕನಿಗೆ ಮೇಲಿನ ಸ್ತರದಿಂದ

ಯಾವುದೇ ವಿಧವಾದ ಸಲಹೆ ಮತ್ತು ಸಹಾಯಗಳು ದೊರೆಯದಿದ್ದರೂ ಸಹ ಆ ವಿಧವಾದ ಸಾಧಕರಲ್ಲಿ ತನ್ನ ಸ್ವಂತದ ಶಕ್ತಿ–ಸಾಮರ್ಥ್ಯಗಳಿಂದ ಏನನ್ನಾದರೂ ಸಾಧಿಸಬೇಕೆಂಬ ಛಲವನ್ನು ತುಂಬುತ್ತದೆ.

ಇನ್ನೊಂದು ಹಂತದಲ್ಲಿ ಯಾವಾಗ ಸಾಧಕನು ದಿವ್ಯಮಾತೆಯಲ್ಲಿ ಸಮರ್ಪಣೆಗೊಳ್ಳುವ ಸಂದರ್ಭ ಒದಗಿ ಬರುವುದೋ ಆಗ, ಅವನಿಗೆ ತನ್ನ ಗುರಿ ಸಾಧನೆಗಾಗಿ ಸ್ವ–ಪ್ರಯತ್ನ ಮತ್ತು ಋತದ ಸಹಾಯಕ ಅಂಶಗಳೆರಡೂ ಅವಶ್ಯಕವೆಂಬ ಸತ್ಯದ ಅರಿವಾಗುತ್ತದೆ.

ಸಾಧನೆಗಾಗಿ ಪ್ರಗತಿಪರ ರೂಪದ ಸಮರ್ಪಣೆಯು ಅತ್ಯವಶ್ಯಕ. ಯಾರೂ ಕೂಡ ಆರಂಭಿಕ ಹಂತದಿಂದಲೇ ಸಮರ್ಪಣೆಯನ್ನು ಒಪ್ಪಿಕೊಳ್ಳುವದಿಲ್ಲ. ಇದು ಸಹಜ. ಏಕೆಂದರೆ ಪ್ರತಿಯೋರ್ವರೂ ಬೇರೊಬ್ಬರನ್ನು ಅನುಕರಿಸುವದರಿಂದ ಬೇರೊಬ್ಬರಲ್ಲಿ ಇಲ್ಲದೇ ಇರುವ ಸಮರ್ಪಣಾ ಭಾವನೆಯನ್ನು ತನ್ನಲ್ಲಿ ಸ್ಥಾಪಿಸಿಕೊಳ್ಳುವುದು ಕೊಂಚ ಕಷ್ಟಸಾಧ್ಯವೇ ಸರಿ. ಹಾಗಾಗಿಯೇ ಸಮರ್ಪಣೆಯ ತತ್ವಗಳು ಸ್ತರದಿಂದ ಸ್ತರಕ್ಕೆ, ಕ್ಷೇತ್ರದಿಂದ ಕ್ಷೇತ್ರಕ್ಕೆ ವ್ಯತ್ಯಯವಾಗುತ್ತ ಸಾಗುತ್ತವೆ. ಇದು ಆಯಾ ತಾಣಗಳ ನೈಸರ್ಗಿಕ ಅಂಶಗಳ ಮೇಲೆ ನಿರ್ಧಾರಿತವಾಗಿರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/141**

## ಸತ್ಯ ಮತ್ತು ಸಂಪೂರ್ಣವಾದ ಸಮರ್ಪಣಾ ಮನೋಭಾವನೆಯಿರಲಿ

ನಿಮಗೆ ನಿಮ್ಮ ಸಾಧನೆಯಲ್ಲಿ ಪೂರ್ಣರೂಪದ ಪ್ರಗತಿಯು ದೊರೆಯಬೇಕಿದ್ದರೆ ನಿಮ್ಮ ಅರ್ಪಣೆ–ಸಮರ್ಪಣೆಗಳು ಪ್ರಮಾಣಿಕತೆ, ಸತ್ಯ ಮತ್ತು ಸಂಪೂರ್ಣತೆಯಿಂದ ಕೂಡಿರಬೇಕು. ತಮ್ಮ ಜಡದ ವೈಯಕ್ತಿಯ ಆಸೆಗಳನ್ನು ಆಧ್ಯಾತ್ಮಿಕ ಆಕಾಂಕ್ಷೆಗಳೊಡನೆ ಬೆರೆಸಿ ಸಾಧನೆಯನ್ನು ಕಲುಷಿತಗೊಳಿಸುವ ಮನುಜರಿಗೆ ಇದು ಸಾಧ್ಯವಾಗುವದಿಲ್ಲ. ಇದನ್ನು ಸಾಧಿಸಬೇಕಿದ್ದರೆ ಕುಟುಂಬ–ಮನೆ–ಮಕ್ಕಳೆಂಬ ಬಯಕೆಗಳನ್ನು ತೊರೆಯಬೇಕಾಗುತ್ತದೆ. ಈ ಯೋಗ ಸಾಧನೆಯಲ್ಲಿ ಪ್ರಗತಿಯನ್ನು ಸಾಧಿಸಬೇಕಾದರೆ ನಿಮ್ಮ ಆಲೋಚನೆ–ಆಕಾಂಕ್ಷೆಗಳೆಲ್ಲವೂ ಋತಂಬರ ಪ್ರಜ್ಞೆಯನ್ನು ತಲುಪುವುದು ಮತ್ತು ಆ ಋತವನ್ನು ನಿಮ್ಮ ವಿಚಾರ, ಭಾವನೆ, ಕ್ರಿಯೆ ಮತ್ತು ಸ್ವಭಾವಗಳಲ್ಲಿ ಅಳವಡಿಸಿಕೊಳ್ಳುವದರ ಮೇಲೆಯೇ ಕೇಂದ್ರಿಕೃತವಾಗಿರಬೇಕು. ಸಾಧಕನು ಋತಂಬರ ಪ್ರಜ್ಞೆಯ ದಿವ್ಯಜ್ಯೋತಿಯಲ್ಲಿ ಒಂದಾಗುವವರೆಗೂ

ಸಂಬಂಧಗಳೆಂಬ ಬಂಧನಗಳು ಅವನನ್ನು ಆವರಿಸಿರುತ್ತವೆ. ಒಂದೊಮ್ಮೆ ಅವನು ದಿವ್ಯಮಾತೆಯ ಇಚ್ಛೆ ಮತ್ತು ಶಕ್ತಿಯಲ್ಲಿ ಲೀನವಾಗಿ ಬಿಟ್ಟರೆ ಜಡದ ಸಂಬಂಧಗಳೆಲ್ಲವೂ ಸರಿದು ಅವನು ಋತಚೇತನ ಮತ್ತು ದಿವ್ಯಜೀವನಗಳ ಅವಿಭಾಜ್ಯ ಅಂಗವಾಗಿಬಿಡುತ್ತಾನೆ. ಆಗ ಅವನು ತನ್ನ ಸಂಬಂಧಿಕರನ್ನು ಜಡಮತಿ ಮತ್ತು ವೈಚಾರಿಕ ಮತಿಯಲ್ಲಿ ಈಕ್ಷಿಸದೇ ತನ್ನ ದಿವ್ಯ ಚಕ್ಷುವಿನಿಂದ ದೃಷ್ಟಿಸುತ್ತಾನೆ. ಈ ಸತ್ಯವನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಿದೆ.

ನಿಮ್ಮೊಳಗಿನ ಅತೀಂದ್ರಿಯ ಕಾಯವು ದಿವ್ಯಮಾತೆಯಲ್ಲಿ ಅರ್ಪಣೆ–ಸಮರ್ಪಣೆಗೊಂಡು ಋತಂಬರ ಪ್ರಜ್ಞೆಯೆಡೆಗೆ ಆರೋಹಿಸಲು ಶಕ್ಯವಾಗಿದೆ. ಆದರೆ ನಿಮ್ಮ ಕೆಳಮಟ್ಟದ ವೈಚಾರಿಕ ಮತಿಯು ಭುವಿಯೊಡನೆ ತೀವ್ರತರವಾದ ಬಂಧನವನ್ನು ಹೊಂದಿದ್ದು, ಅದರ ಮರ್ತ್ಯದ ಸಂಸ್ಕಾರಗಳು ಮತ್ತು ತನ್ನ ಬಯಕೆಯನ್ನು ಈಡೆರಿಸಿಕೊಳ್ಳಲೆಂದು ಅದು ತುಳಿವ ಕಲುಷಿತ ಮಾರ್ಗದಿಂದಾಗಿ ನಮ್ಮ ಸ್ಥೂಲಮತಿಯು ತನ್ನ ವಿಚಾರ ಮತ್ತು ಅಭ್ಯಾಸಗಳನ್ನು ತೊರೆದು ಋತದೆಡೆಗೆ ಮುಖಮಾಡಲು ಪ್ರಯತ್ನಿಸುವದಿಲ್ಲ. ಈ ನಡೆಯೇ ನಿಮ್ಮ ಸಾಧನೆಯ ಪ್ರಗತಿಯನ್ನು ಕುಂಠಿತಗೊಳಿಸಲು ಮುಖ್ಯಕಾರಣವಾಗಿದೆ. ಏಕೆಂದರೆ, ನಿಮ್ಮ ದೈನಂದಿನ ನಡತೆ ಮತ್ತು ಉಪಭೋಗಿತ ದ್ರವ್ಯಗಳು ನಿಮ್ಮನ್ನು ಸಾಧನೆಯಿಂದ ಹಿಂದೆಗೆಯುವಂತೆ ಸದಾ ಪ್ರೇರೇಪಿಸುತ್ತಿರುತ್ತವೆ. ಹಾಗಾಗಿ ನಾವು ನಮ್ಮ ಎಲ್ಲ ವೈರುದ್ಧ್ಯದ ನಡತೆಗಳನ್ನು ತೊರೆಯಬೇಕಿದೆ. ಒಂದುವೇಳೆ ನೀವು ಆ ದಿವ್ಯತೆಯನ್ನು ನಿಮ್ಮ ಅತೀಂದ್ರಯ ಕಾಯವಷ್ಟೇ ಅಲ್ಲದೇ ನಿಮ್ಮ ಜಡಮತಿ ಮತ್ತು ವೈಚಾರಿಕ ಮತಿಗಳಲ್ಲೂ ಸ್ಥಾಪಿಸಿ–ಕೊಳ್ಳಬೇಕೆಂದು ನಿರ್ಧರಿಸಿದ್ದರೆ ನಿಮ್ಮ ಕಾರ್ಯಕ್ಕೆ ಆ ದಿವ್ಯಮಾತೆಯೊಬ್ಬಳೇ ಸಹಕಾರಿಯಾಗಬಲ್ಲಳು. ಅವಳೇ ನಮ್ಮನ್ನು ಈ ಜಂಜಡಗಳಿಂದ ಮುಕ್ತವಾಗಿಸಲು ಶಕ್ಯಳು. ಒಂದೊಮ್ಮೆ ನೀವು ಆ ಋತ ಚೇತನವನ್ನು ಅನುಭವಿಸಿದ್ದೇ ಆದಲ್ಲಿ ಜಡದ ಬಂಧನಗಳು, ಸ್ವಂತದ ಕಲ್ಪನೆಗಳು, ವೈಯಕ್ತಿಕ ಆಸೆಗಳಾವುವೂ ನಿಮ್ಮ ದಾರಿಯಲ್ಲಿ ಸುಳಿದು ಮಾರ್ಗ ಪ್ರತಿಬಂಧಕವನ್ನೊಡ್ಡುವದಿಲ್ಲ. ಆಗ ನೀವು ಎಲ್ಲೇ ಇದ್ದರೂ, ಯಾವ ಸಂದರ್ಭದಲ್ಲೇ ಇದ್ದರೂ ನಿಮ್ಮೊಡನೆ ಸದಾ ಜೊತೆಯಾಗಿರುವ ದಿವ್ಯಮಾತೆಯ ಸನ್ನಿಧಿಯನ್ನು ಅನುಭವಿಸುವಿರಿ. ಆಗ ತೃಪ್ತಭಾವನೆ, ಮನಶ್ಯಾಂತಿ, ಆತ್ಮವಿಶ್ವಾಸಗಳು ತಾನೇ ತಾನಾಗಿಯೇ ನಿಮ್ಮೊಳಗೆ ನೆಲೆಸಿ ಆ ದಿವ್ಯಮಾತೆಯ ಚಿತ್ತ ಅಭಿವ್ಯಕ್ತಿಗಾಗಿ ಕಾಯುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/142**

**ಆತ್ಮಾಭಿಮಾನಕ್ಕೆ ಅಂಟಿಕೊಂಡಿರುವುದು**

ಜೀವನ ಸಂಗ್ರಾಮವು ಎಷ್ಟೇ ಕಠಿಣತರವಾದರೂ ಸಹ ನಾವಿಲ್ಲಿ ಕೊನೆಯವರೆಗೂ ಹೋರಾಡಲೇಬೇಕಿದೆ. ನಿಜವಾಗಿ ಹೇಳಬೇಕೆಂದರೆ ನೀವು ಇಲ್ಲಿಯವರೆಗೂ ಒಂದೇ ಒಂದು ಕಠಿಣತರವಾದ ಅಡಚಣೆಯನ್ನು ಸಹ ಎದುರಿಸಿ ಅದನ್ನು ನಿಮ್ಮ ಕೈವಶವನ್ನಾಗಿ ಮಾಡಿಕೊಂಡೇ ಇಲ್ಲ. ನಿಮ್ಮ ಪ್ರಜ್ಞೆಯ ಕೇಂದ್ರ ಭಾಗದಲ್ಲಿ ಮನೆಮಾಡಿಕೊಂಡಿರುವ ಅಹಮಿಕೆ ಮತ್ತು ಪ್ರತ್ಯೇಕತಾ ಭಾವನೆಗಳು ನಿಮ್ಮ ಆಧ್ಯಾತ್ಮಿಕ ಆಕಾಂಕ್ಷೆಯು ಸದಾ ಆತ್ಮಾಭಿಮಾನದೊಡನೆ ಅಂಟಿಕೊಂಡಿರುವಂತೆ ಮಾಡಿವೆ. ಈ ಮನೋಭಾವನೆಯು ನಮ್ಮನ್ನು ಋತಚೇತನ ಮತ್ತು ದಿವ್ಯತೆಯೆಡೆಗಿನ ಆರೋಹಣಕ್ಕೆ ತಡೆಯೊಡ್ಡಬಲ್ಲದು. ಯಾವಾಗ ದಿವ್ಯಮಾತೆಯು ತನ್ನ ಶಕ್ತಿಯನ್ನು ನಿಮ್ಮ ಮೇಲೆ ಪ್ರವಹಿಸುವಳೋ, ಅಥವಾ ನೀವೇ ನಿಮ್ಮ ಸ್ವ–ಪ್ರಯತ್ನದಿಂದ ಅವಳ ದಿವ್ಯಶಕ್ತಿಯನ್ನು ನಿಮ್ಮೆಡೆಗೆ ಸೆಳೆಯುವಿರೋ ಅಲ್ಲಿಯವರೆಗೂ ನಮ್ಮ ಆರೋಹಣ ಪ್ರಕ್ರಿಯೆ ಸ್ಥಗಿತವಾಗಿಯೇ ಇರುತ್ತದೆ. ಒಂದೊಮ್ಮೆ ನಿಮ್ಮ ಪ್ರಜ್ಞೆಯು ಅವಳ ಶಕ್ತಿಯೊಡನೆ ಸಮ್ಮಿಳಿತವಾದರೆ ಆ ಮನೋಭಾವನೆಯು ತನ್ನ ಪ್ರತಿಬಂಧಕ ಕಾರ್ಯಗಳನ್ನು ತೊರೆದು ನಮ್ಮ ಮಾರ್ಗದಿಂದ ಹಿಂದೆ ಸರಿಯುತ್ತದೆ. ಈ ಆತ್ಮಾಭಿಮಾನವು ತನ್ನದೇ ಆದ ಶಕ್ತಿ, ಸಾಧನೆ, ತಪಸ್ಸಿನಿಂದ ನಮ್ಮ ವೈಚಾರಿಕತೆ ಮತ್ತು ಅಹಮಿಕೆಯ ಬೇಡಿಕೆಗಳಿಗೆ ಅನುಗುಣವಾಗಿ ಕೃತ್ರಿಮ ಸೃಷ್ಟಿಯೊಂದನ್ನು ತನ್ನದೇ ಆದ ರೀತಿಯಲ್ಲಿ ನಿರ್ಮಿಸಿ ಪ್ರಜ್ಞೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಈ ಹಂತದಲ್ಲಿ ದಿವ್ಯಮಾತೆಯೆಡೆಗಿನ ನಿಮ್ಮ ಅರ್ಪಣೆ–ಸಮರ್ಪಣೆಗಳು ಸ್ಥಗಿತವಾಗಿ ನಿಮ್ಮ ಪ್ರಗತಿಯನ್ನು ಕುಂಠಿತಗೊಳಿಸಲಾಗುತ್ತದೆ. ಸಾಧನೆಯಲ್ಲಿ ಪ್ರಗತಿಯನ್ನು ಸಂಪಾದಿಸಬೇಕಿದ್ದರೆ ಯೋಗಿ, ಸನ್ಯಾಸಿ ಅಥವಾ ತಪಸ್ವಿಯಾಗಿ ವೈರಾಗ್ಯಯುತ ಜೀವನವನ್ನು ಸಾಗಿಸುವದೊಂದೇ ಮುಖ್ಯವಲ್ಲ. ಬದಲಾಗಿ ನಿಮ್ಮ ಜೀವನದಲ್ಲಿ ನೀವು ಮಾಡಿಕೊಳ್ಳಬೇಕಿರುವ ಮಹತ್ತರವಾದ ರೂಪಾಂತರಣವು ಮುಖ್ಯವಾಗುತ್ತದೆ. ಈ ರೂಪಾಂತರಣಕ್ಕಾಗಿ ನೀವೊಂದು ಹಸುಗೂಸಿನಂತೆ ದಿವ್ಯಮಾತೆಯೆಡೆಗೆ ನಿಮ್ಮನ್ನು ನೀವು ಸಮರ್ಪಿಸಿಕೊಳ್ಳಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/143**

*ಜೀವನದಲ್ಲಿ ಬಹಳ ಕಷ್ಟಗಳಿಗೆ ತುತ್ತಾಗಿ ದುಃಖವನ್ನನುಭವಿಸುತ್ತಿರುವ ಮಹಿಳೆಯೋರ್ವರು ಪತ್ರವೊಂದರಲ್ಲಿ ತಾವು ಈ ಮಾರ್ಗವನ್ನನುಸರಿಸಿ ಮನಶ್ಶಾಂತಿಯನ್ನು ಪಡೆಯಲು ಬಯಸುತ್ತಿರುವರೆಂದು ತಿಳಿಸಿದ್ದಾರೆ. ನಾನು ಅವರಿಗೆ ಏನೆಂದು ಉತ್ತರಿಸಲಿ?*

ನೀವವರಿಗೆ ಸಂಕ್ಷಿಪ್ತವಾಗಿ ವಿವರಿಸಿ – ಈ ಸಾಂಸಾರಿಕ ಜೀವನವು ಸಂಗ್ರಾಮದಂತಿದ್ದು ಸದಾ ಅಶಾಂತಿಯ ತವರುನೆಲೆಯಂತೆ ಪ್ರಕ್ಷುಬ್ಧವಾಗಿರುತ್ತದೆ ಎಂದು ತಿಳಿಸಿ. ಹಾಗೂ ಈ ಜಂಜಡಗಳಿಂದ ಮುಕ್ತವಾಗಲು ಸರಿಯಾದ ಮಾರ್ಗದಲ್ಲಿ ನಡೆದು ತನ್ನನ್ನು ತಾನು ದಿವ್ಯತೆಯಲ್ಲಿ ಸಮರ್ಪಿಸಿಕೊಂಡು ದೈವೀಕ ಶಾಂತಿಯನ್ನು ಕರುಣಿಸುವಂತೆ ಪ್ರಾರ್ಥಿಸಬೇಕು. ಒಂದೊಮ್ಮೆ ಆ ಶಾಂತಿಯು ಅವರಲ್ಲಿ ನೆಲೆಸಿ ಮನಸ್ಸು ಹಗುರವಾದಾಗ ಅವರಿಗೆ ದಿವ್ಯಮಾತೆಯು ತನ್ನನ್ನು ಸದಾ ಪೋಷಿಸುತ್ತ ಸರ್ವಸ್ವವನ್ನೂ ತನ್ನೆಡೆಗೆ ದಯಪಾಲಿಸುತ್ತಿರುವಳು ಎಂಬ ಅನುಭವವು ವ್ಯಕ್ತವಾಗುತ್ತದೆ. ಹಾಗಾಗಿ ಅವರಿಗೆ ಶಾಂತಿಯ ಅವಶ್ಯಕತೆ ಇದ್ದರೆ ಈ ಮಾರ್ಗವನ್ನನುಸರಿಸುವಂತೆ ತಿಳಿಸಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/345**

**ಸಮರ್ಪಣೆಯ ಮೂಲತತ್ವ**

ಸಂತಸದ ಕ್ಷಣಗಳಲ್ಲಿ ನೀವು ನಿಮ್ಮನ್ನು ಆಕ್ರಮಿಸಲು ಬರುವ ಆಲೋಚನೆಗಳೆಡೆಗೆ ಗಮನವನ್ನೇ ಹರಿಸುವದಿಲ್ಲ. ಸಮರ್ಪಣೆಯ ತತ್ವವೆಂದರೆ ಯಾವುದೋ ಒಂದು ಕಾರ್ಯವನ್ನು ಮಾಡುವ ಮೊದಲು ದಿವ್ಯಮಾತೆಯನ್ನು ಕೇಳಿ ಮುಂದುವರಿಯುವದಲ್ಲ. ಬದಲಾಗಿ ಪೂರ್ಣ ಹೃದಯದಿಂದ ಅವಳ ಪ್ರಭಾವ ಮತ್ತು ಮಾರ್ಗದರ್ಶನಗಳನ್ನು ಸ್ವಿಕರಿಸುವದೇ ಆಗಿದೆ. ಯಾವಾಗ ಶಾಂತಿ–ಸಂತಸಗಳು ನಮಗಾಗಿ ಮೇಲಿನ ಸ್ತರದಿಂದ ಕೆಳಗಿಳಿದು ಬರುವವೋ, ಆಗ ಅವುಗಳನ್ನು ಪ್ರಶ್ನಿಸದೇ ಆರೋಪಿಸದೇ ಅವುಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು, ನಮ್ಮೊಳಗೆ ಪ್ರವಹಿಸಿ ಕಾರ್ಯ ನಿರ್ವಹಿಸಲೆಂದು ಬರುವ ದಿವ್ಯಶಕ್ತಿಯನ್ನು ವಿರೋಧಿಸದೆ, ಅದರ ಪಾಡಿಗೆ ಅದು ತನ್ನ ಕ್ರಿಯಾ ವಿಧಾನಗಳನ್ನು ಮುಂದುವರಿಸಲು ಸಹಕರಿಸಬೇಕು, ನಮ್ಮನ್ನು ಪ್ರೇರೆಪಿಸಲೆಂದು ಬರುವ ಜ್ಞಾನವನ್ನು ಸ್ವೀಕರಿಸಿ ಅದರಂತೆ ಮುಂದುವರೆಯಬೇಕು, ನಮ್ಮನ್ನು ತನ್ನ

ಸಾಧನವನ್ನಾಗಿಸುವ ಇಚ್ಛೆಯನ್ನು ಸ್ವಾಗತಿಸಿ ಅದನ್ನು ನಮ್ಮೊಳಗೆ ಆಮಂತ್ರಿಸಿಕೊಳ್ಳಬೇಕು. ಋತ ಮತ್ತು ಋತಚೇತನದೆಡೆಗಿನ ಮಾರ್ಗದ ಬಗೆಗೆ ತನಗಿಂತಲೂ ಹೆಚ್ಚಿಗೆ ತಿಳಿದುಕೊಂಡ ಗುರುವಿನಿಂದ ಮಾರ್ಗದರ್ಶನವನ್ನು ಪಡೆದುಕೊಳ್ಳುವುದು ಒಳ್ಳೆಯದು. ಇದೇನು ಅಷ್ಟೊಂದು ಕ್ಲಿಷ್ಟಕರವಾದ ಸಮಸ್ಯೆಯಲ್ಲ, ಇದು ತುಂಬಾ ಸರಳವಾದ ಸಾಮಾನ್ಯ ವಿಷಯವಾಗಿದೆ. ನೀವು ಹೇಳುವಂತೆ ಆ ಒಂದು ನಿರ್ದಿಷ್ಟವಾದ ನಿಯಂತ್ರಣ ಕಾಯಿದೆಯನ್ನು ಯಾರ ಮೇಲೂ ಬಲವಂತವಾಗಿ ಹೇರುವಂತಿಲ್ಲ. ಆಶ್ರಮವಾಸಿಗಳಲ್ಲಿ ಕೆಲವರು ಮಾತ್ರ ಆ ನಿಯಮವನ್ನು ಅನುಸರಿಸುತ್ತಿದ್ದಾರೆ. ನೀವು ಉಲ್ಲೇಖಿಸಿದ ಕಳೆದ ಒಂದೆರಡು ವರ್ಷಗಳಿಂದ ಯಾವುದೇ ಕಾರ್ಯವನ್ನು ಮಾಡುವ ಮೊದಲು ದಿವ್ಯಮಾತೆಯನ್ನು ಕೇಳಿ ಮುನ್ನಡೆಯುವ ವಿಧಾನವನ್ನು ಕನಸಿನಲ್ಲಿಯೂ ಕೂಡ ನೆನೆಸಿರಲಿಲ್ಲ. ಆದರೆ ಈಗಲೂ ಕೂಡ ಅವರು ಅದನ್ನೇ ಮಾಡಿದರೆ, ಅದು ದಿವ್ಯಮಾತೆಯು ಅವರಿಗೆ ಹೇಳಿ ಮಾಡಿಸಿದ್ದಲ್ಲ ಅಥವಾ ಅವರ ಮೇಲೆ ಬಲವಂತವಾಗಿ ಹೇರಿದ ವಿಧಾನವೂ ಅಲ್ಲ. ಏಕೆಂದರೆ ಈಗ ಅವರಿಗೆ ತನ್ನ ಸಾಧನೆಯಲ್ಲಿ ಪ್ರಗತಿಯನ್ನು ಹೊಂದಬೇಕಾದರೆ ಅದು ಅತ್ಯವಶ್ಯಕ ಎಂಬ ಭಾವನೆಯು ಬೆಳೆದಿದೆ. ದಿವ್ಯಮಾತೆಯು ಅವರ ಮೇಲೆ ಯಾವುದೇ ಬಲವಂತದ ನಿಯಮವನ್ನು ಹೇರಿಲ್ಲ. ಅವರೇ ತಮ್ಮದೇ ಆದ ವಿಭಿನ್ನ ಮಾರ್ಗದಲ್ಲಿ ನಡೆದು ಸ್ವಂತ ಜೀವನ ನಿಯಮವೊಂದನ್ನು ರೂಪಿಸಿಕೊಂಡು ಅದರ ಮೂಲಕವೇ ಏಕಾಗ್ರತೆ ಮತ್ತು ದಿವ್ಯಮಾತೆಯ ಕೃಪೆಯನ್ನು ಸಂಪಾದಿಸಲು ಪ್ರಯತ್ನಿಸುತ್ತಿದ್ದಾರೆ. ಒಂದು ಬಾರಿ ದಿವ್ಯಮಾತೆಯು ನಿಮ್ಮನ್ನುದ್ದೇಶಿಸಿ ಯಾವ ವಿಧಾನವನ್ನನುಸರಿಸಿ ಪ್ರಗತಿಯನ್ನು ಹೊಂದಲು ಬಯಸುತ್ತಿರುವರೋ, ಅದೇ ಮಾರ್ಗವನ್ನು ನೀವೂ ಸಹ ಅನುಸರಿಸಬೇಕೆಂಬ ನಿಯಮವೇನಿಲ್ಲವೆಂದು ತಿಳಿಸಿದ್ದರು. ಯಾವಾಗ ಪ್ರತಿಯೊಬ್ಬರಿಗೂ ಈ ಮಾರ್ಗವನ್ನನುಸರಿಸಬೇಕೆಂಬ ತೀವ್ರ ಅಭಿಲಾಷೆ ಮೂಡುವುದೋ ಆಗ ಸ್ವತಃ ಅವರೇ ಮೇಲೆದ್ದು ಮುನ್ನಡೆವರು. 120 ಜನರಿರುವ ಈ ಆಶ್ರಮದಲ್ಲಿ ನಾವು ವಿಧಿಸಿದ ಬಾಹ್ಯ ಸಮರ್ಪಣೆಯ ನಿಯಮವನ್ನು ಸ್ವಾಪೇಕ್ಷೆಯಿಂದ ಅನುಸರಿಸುವವರು ಅರ್ಧ ಡಜನ್ ಜನರೂ ಸಹ ಇಲ್ಲದಿರುವಾಗ ನಿಮ್ಮ ಸ್ವಾತಂತ್ರಕ್ಕಾಗಿ ನೀವೇಕೆ ಇಷ್ಟು ಭಯಪಡುತ್ತಿರುವಿರೆಂದೇ ನನಗೆ ಅರ್ಥವಾಗುತ್ತಿಲ್ಲ. ಇನ್ನೊಂದು ವಿಷಯ, ನಾವು ಕೆಲ ಜನರನ್ನು ಒರಟರನ್ನಾಗಿಸಿ ಅವರನ್ನು ಮಾತನಾಡದಿರುವಂತೆ ಮಾಡಿದ್ದೇವೆ ಎಂಬ

ಆಪಾದನೆಯ ಬಗೆಗೆ ನೀವೇನು ಹೇಳುವಿರಿ? ಯಾರು A ಮತ್ತು B ನನಗೆ ತಿಳಿದಿರುವಂತೆ ಅವರು ಅವಿಶ್ರಾಂತರೂ, ನಿರರ್ಗಳವಾಗಿ ಮಾತನಾಡುವವರೂ ಆಗಿದ್ದಾರೆ. ಹಾಗಾಗಿ ನೀವು ನನ್ನ ವಿರುದ್ಧ ಎತ್ತಿದ ಆಪಾದನೆಗೆ ನಾನು ನಿರ್ದೋಷಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/143**

ನಮ್ಮನ್ನು ಸಂಪೂರ್ಣವಾಗಿ ದಿವ್ಯಮಾತೆಯಲ್ಲಿ ಸಮರ್ಪಿಸಿಕೊಂಡು ಅವಳ ಮೇಲೆ ನಂಬಿಕೆಯಿಡುವದೊಂದೇ ಯೋಗ್ಯ ಮನೋಭಾವನೆಯಾಗಿದೆ. ಆಗ ಮಾತ್ರ ಅವಳು ನಮ್ಮನ್ನು ಗುರಿಯಿರುವ ಮಾರ್ಗದಲ್ಲಿ ನಡೆಸುತ್ತಾಳೆ.

*

ನನಗೆ ತಿಳಿದಂತೆ ನೀವು ಮಾಡಬೇಕಿರುವ ಮುಖ್ಯ ಕಾರ್ಯಗಳೆಂದರೆ –

1. ನೀವು ದಿವ್ಯಮಾತೆಯಲ್ಲಿ ಸಂಪೂರ್ಣವಾಗಿ, ಪ್ರಾಮಾಣಿಕವಾಗಿ, ಸರಳವಾಗಿ ಮತ್ತು ನಿಮ್ಮ ಅಹಮಿಕೆಯನ್ನು ತೊರೆದು ಸಮರ್ಪಣೆಗೊಳ್ಳಬೇಕು.
2. ನಿಮ್ಮ ಬಾಹ್ಯ ಜೀವನದಲ್ಲಿ ನೀವು ಬೆಳೆಸಿಕೊಂಡ ಹವ್ಯಾಸಗಳ ಬಗೆಗೆ ಜಾಗರೂಕತೆಯಿಂದಿರುವುದು. ಮತ್ತು ಅವುಗಳನ್ನು ನಿಧಾನವಾಗಿ ತೊರೆಯುವುದು.
3. ನಿಮ್ಮ ಅಂತರಂಗದೊಳಗಿರುವ ಅಸ್ಪಷ್ಟ ಭಾಗಗಳನ್ನು ದಿವ್ಯ ಪ್ರಕಾಶದೆಡೆಗೆ ತೆರೆದು ಅವುಗಳ ಚಲನೆಗೆ ಸಹಕರಿಸುವುದು.

ನಿಮ್ಮ ಬೌದ್ಧಿಕ ಮಿತಿಗೆ ಮೀಸಲಾಗಿರುವ ವಿಚಾರಗಳನ್ನು ದೈವೀಕ ಶಕ್ತಿಯಲ್ಲಿ ಸಂಪೂರ್ಣ ಮನೋಭಾವನೆಯಿಂದ ಸಮರ್ಪಣೆ ಮಾಡದೆ, ಅದೇ ಸಮಯಕ್ಕೆ ಸತ್ಯದ ಮುಖವಾಡವನ್ನು ತೊಟ್ಟು ನಿಮ್ಮನ್ನು ಮೋಸಗೊಳಿಸಲೆಂದು ಬರುವ ಅಧೋಲೋಕದ ವಿಚಾರಗಳಲ್ಲಿ ಅಥವಾ ಅಸುರೀ ಶಕ್ತಿಗಳಲ್ಲಿ ನಿಮ್ಮನ್ನು ನೀವು ಅರ್ಪಿಸಿಕೊಂಡಲ್ಲಿ ಅದು ನಿಮ್ಮ ಜೀವನ ಮಾರ್ಗದಲ್ಲಿ ಮಹತ್ತರವಾದ ತಿರುವೊಂದನ್ನು ಸೃಷ್ಟಿಸಬಹುದು.

ನಾನು ಪದೇಪದೇ ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುವದೇನೆಂದರೆ, ಈ ರೀತಿಯ ತಟಸ್ಥ ನೀತಿಯು ನಿಮ್ಮಲ್ಲಿ ಸಮರ್ಪಣಾ ಮನೋಭಾವನೆಯನ್ನು

ತುಂಬುವದಿಲ್ಲ. ಇನ್ನೊಂದು ವಿಷಯ, ನೀವು ಒಂದೇ ಸಮಯದಲ್ಲಿ ದಿವ್ಯಮಾತೆ ಮತ್ತು ಕೆಳ ಹಂತದ ವೈಶ್ವಿಕ ಶಕ್ತಿಗಳೆರಡರಲ್ಲೂ ಸಮರ್ಪಣೆಗೊಳ್ಳಲು ಸಾಧ್ಯವಿಲ್ಲ. ನಿಮ್ಮ ವೈಚಾರಿಕ ಮತಿಗೆ ವಿರುದ್ಧವಾಗಿ ನಿಮ್ಮ ಸರ್ವಸ್ವವನ್ನೂ ಅವಳಡಿಯಲ್ಲಿ ಸಮರ್ಪಿಸುವುದೇ ಯೋಗದ ತತ್ವವಾಗಿದೆ. ನೀವು ನಿಮ್ಮತನವನ್ನು ದಿವ್ಯಮಾತೆಯಡಿಯಲ್ಲಿ ಸಮರ್ಪಿಸುತ್ತಿರುವಿರಿ ಎಂದರೆ, ನೀವು ಬೇರೆಯಾವ ಶಕ್ತಿಗಳಿಗೂ ಕೈಗೊಂಬೆಯಾಗಿಲ್ಲವೆಂದೇ ಅರ್ಥ.

ಹಾಗಾಗಿ ಪಕ್ಷಪಾತೀಯ ಭಾವನೆ (ಅತೀಂದ್ರಿಯ ಭಾವನೆ, ಪ್ರಜ್ಞಾಪೂರ್ವಕ ದೃಷ್ಟಿಕೋನ ಮತ್ತು ಆಲೋಚನೆಗೂ ಮಿಗಿಲಾದ ಕಾಣ್ಕೆಯಿಂದ ದ್ರವ್ಯಗಳಲ್ಲಿನ ವ್ಯತ್ಯಯಗಳನ್ನು ಅರ್ಥೈಸಿಕೊಳ್ಳುವ ಮನಸ್ಥಿತಿ) ಮತ್ತು ನಿರಾಕರಣೆಗಳು ಸಮರ್ಪಣೆ ಮತ್ತು ಶುದ್ಧೀಕರಣ ಪ್ರಕ್ರಿಯೆಯಲ್ಲಿ ಅತ್ಯವಶ್ಯಕವಾದ ಅಂಶಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/149**

## ನೀವು ಈ ರೂಪಾಂತರಣದ ಪ್ರಕ್ರಿಯೆಯನ್ನು ಬಯಸುವದಾದರೆ

ನೀವು ಈ ರೂಪಾಂತರಣದ ಪ್ರಕ್ರಿಯೆಯನ್ನು ಬಯಸುವದಾದರೆ, ನೀವು ನಿಮ್ಮತನವನ್ನು ಪ್ರತಿರೋಧ ಮತ್ತು ವಿರೋಧಾಭಾಸವಿಲ್ಲದಂತೆ ಸಂಪೂರ್ಣವಾಗಿ ದಿವ್ಯಮಾತೆ ಮತ್ತವಳ ಶಕ್ತಿಯಡಿಯಲ್ಲಿ ಸಮರ್ಪಿಸಿರಿ. ಮತ್ತು ನಿಮ್ಮೊಳಗೆ ಅವಳು ತನ್ನ ಕಾರ್ಯ ಚಟುವಟಿಕೆಯನ್ನು ಅಡೆತಡೆಯಿಲ್ಲದಂತೆ ನಿರ್ವಹಿಸಲು ಸಹಕರಿಸಿ. ಈ ಹಂತದಲ್ಲಿ ನಿಮ್ಮೊಳಗೆ ಮೂರು ಮುಖ್ಯವಾದ ಭಾವನೆಗಳಿರಲಿ. ಅವುಗಳೆಂದರೆ ಪ್ರಜ್ಞೆ, ಸುನಮ್ಯತೆ ಮತ್ತು ಬೇರೊಂದು ಶಕ್ತಿಯೆಡೆಗೆ ಮುಖಮಾಡಿರದ ನಿಮ್ಮ ಸಮರ್ಪಣಾ ಮನೋಭಾವನೆಗಳು. ನೀವು ನಿಮ್ಮ ಆತ್ಮ, ಮನಸ್ಸು, ಹೃದಯ, ಜೀವನ ಮತ್ತು ದೇಹದ ಪ್ರತಿಯೊಂದು ಜೀವಕೋಶಗಳ ಚಲನೆಯಲ್ಲೂ ಸಹಿತ ಪ್ರಜ್ಞಾಪೂರ್ವಕವಾಗಿ ಜಾಗೃತರಾಗಿರಬೇಕು. ಅದರೊಟ್ಟಿಗೆ ದಿವ್ಯಮಾತೆಯ ಶಕ್ತಿ ಮತ್ತು ಕ್ರಿಯಾ ಚಟುವಟಿಕೆಗಳ ಕುರಿತ ಜ್ಞಾನವಿರಬೇಕು. ಏಕೆಂದರೆ ಅವಳು ಎಲ್ಲಾ ಸಂದರ್ಭಗಳಲ್ಲೂ ನಿಮ್ಮ ಅಸ್ಪಷ್ಟ ಮತ್ತು ಅಪ್ರಜ್ಞಾವಸ್ಥೆಯ ಭಾಗಗಳಲ್ಲಿ ತನ್ನ ಕ್ರಿಯೆಗಳನ್ನು ಮುಂದುವರಿಸುತ್ತಿರುತ್ತಾಳೆ. ನೀವು ಅವಳೊಂದಿಗೆ ಜಾಗೃತಾವಸ್ಥೆಯಲ್ಲಿರುವಾಗ ನಡೆವ ಕ್ರಿಯೆಗಳಿಗೂ ನೀವು ಅವಳೊಂದಿಗೆ ನೇರ ಸಂಪರ್ಕದಲ್ಲಿದ್ದಾಗ ನಡೆವ ಕ್ರಿಯೆಗಳಿಗೂ ವ್ಯತ್ಯಾಸವಿರುತ್ತದೆ.

ಹಾಗಾಗಿ ಎಲ್ಲ ಸಂದರ್ಭಗಳಲ್ಲೂ ಅವಳ ಒಂದು ಸ್ಪರ್ಶಕ್ಕೆ ನಿಮ್ಮ ಭಾವನೆಗಳು ಸುನಮ್ಯವಾಗಿರಬೇಕು. ತನ್ನಷ್ಟಕ್ಕೆ ತಾನೆ ಸ್ವಯಂಪೂರ್ಣವೆನಿಸಿಕೊಂಡ ಮನಸ್ಸಿನ ಅಜ್ಞಾನದ ನೆಲೆಯಿಂದ ಹೊರಡುವ ಅನುಮಾನಯುತ ಪ್ರಶ್ನೆಗಳು ಮತ್ತು ವಿವಾದಾತ್ಮಕ ಹೇಳಿಕೆಗಳು ನಮ್ಮ ಜ್ಞಾನೋದಯ ಮತ್ತು ರೂಪಾಂತರಣ ಪ್ರಕ್ರಿಯೆಗಳಿಗೆ ತೊಡಕಾಗಬಹುದು. ಮನುಷ್ಯನ ವೈಚಾರಿಕ ಮಿತಿಯಲ್ಲಿ ರೂಪುಗೊಳ್ಳುವ ದೋಷಪೂರಿತ ಬಯಕೆಗಳು ಮತ್ತು ನೇರವಲ್ಲದ ಇಚ್ಛೆಗಳು ಅವನನ್ನು ದೈವೀ ಪ್ರಭಾವಕ್ಕೆ ಒಳಗಾಗುವದನ್ನು ತಡೆಗಟ್ಟಲು ಸದಾ ಪ್ರಯತ್ನಿಸುತ್ತಿರುತ್ತವೆ. ಅಸಾಮರ್ಥ್ಯ, ಜಡತ್ವ ಮತ್ತು ತಾಮಸಿಕ ದ್ರವ್ಯಗಳು ಮನುಷ್ಯನ ಪ್ರಜ್ಞಾ ಪ್ರವರ್ಧನೆಗೆ ಪ್ರತಿರೋಧವನ್ನೊಡ್ಡುತ್ತವೆ. ಕುಬ್ಜಮನದ ಅಂಧಕಾರದ ಕ್ಷುದ್ರ ಸಂತಸಗಳಿಗೆ ಹೊಂದಿಕೊಂಡ ಮನಸ್ಥಿತಿಯು ನಿತ್ಯಸತ್ಯವಾದ ಆನಂದದೆಡೆಗೆ ಮುಖಮಾಡುವುದೇ ಇಲ್ಲ. ಸೋಮಾರಿತನದಿಂದ ಅಧೋ ಸ್ತರದ ಕೊಳಚೆಯಲ್ಲಿ ಬಿದ್ದಲ್ಲೇ ಬಿದ್ದ ಮೆದ್ದ ಹಾವಿನಂತಾದ ಪ್ರಜ್ಞೆಯು ತನ್ನನ್ನು ಕೈಹಿಡಿದು ಎಬ್ಬಿಸಲು ಪ್ರಯತ್ನಿಸುತ್ತಿರುವ ಊರ್ಧ್ವದ ಸ್ಪರ್ಶಗಳಿಗೆ ಪ್ರತಿಸ್ಪಂದಿಸುವದಿಲ್ಲ. ಇವೆಲ್ಲ ಸಂದಿಗ್ಧಗಳನ್ನು ತೊಡೆದು ನಿಮ್ಮ ಆಂತರಿಕ–ಬಾಹ್ಯ ಎರಡರಲ್ಲೂ ಸಮರ್ಪಣಾ ಮನೋಭಾವನೆಯನ್ನು ತುಂಬಿಕೊಂಡದ್ದೇ ಆದಲ್ಲಿ ಅದು ನಿಮ್ಮಲ್ಲಿ ಸುನಮ್ಯತಾ ಮನೋಭಾವನೆಯನ್ನು ತುಂಬುತ್ತದೆ. ಊರ್ಧ್ವದ ಪಾತಳಿಗಳಿಂದ ನಿರಂತರವಾಗಿ ಉದ್ಭವಿಸುವ ಜ್ಞಾನ, ಪ್ರಕಾಶ, ಶಕ್ತಿ, ಸೌಂದರ್ಯಗಳು ನಿಮ್ಮ ಪ್ರಜ್ಞೆಯ ಪೂರ್ಣ ಜಾಗೃತಿಗಾಗಿ ಶ್ರಮಿಸುತ್ತವೆ. ಅಂತಿಮವಾಗಿ ನಮ್ಮ ಜಡ ಭೌತಿಕವಾದ ಸ್ಥೂಲ ಶರೀರವೂ ಸಹ ಸುಪ್ರಮಾನಸದ ಸರ್ವೋಚ್ಚ ಪ್ರಜ್ಞಾಶಕ್ತಿಗಳಿಗೆ ಸ್ಪಂದಿಸಿ, ಆ ಸುಪ್ರಮಾನಸದ ಸುತ್ತಲೂ ಪ್ರವಹಿಸುತ್ತಿರುವ ಶಕ್ತಿ ಸಂಚಾರವನ್ನನುಭವಿಸುತ್ತ ಅಲ್ಲಿನ ಸರ್ವೋಚ್ಚ ಪ್ರೇಮ ಮತ್ತು ಆನಂದದ ಪರಿಧಿಯನ್ನು ಕಂಡು ರೋಮಾಂಚನಗೊಳ್ಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/25**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾಹ್ನವಿ**

**14**

### ಯಜ್ಞದ ಭೋಕ್ತೃ

ಪರಮಾತ್ಮನು ವಿಶ್ವಾತೀತನಾಗಿದ್ದು, ದೇಶ–ಕಾಲಗಳ ಮಿತಿಯನ್ನು ಮೀರಿದ್ದು ಪ್ರಕೃತಿಯ ಕ್ರಿಯೆ, ಚಟುವಟಿಕೆ, ಕಾರ್ಯಗಳನ್ನು ದಾಟಿ ಆಚೆ ಇದ್ದಾನೆ. ಅವನು ಅಕ್ಷರಶಃ ವಿಶ್ವಾತೀತ ಸತ್ವ. ಅವನ ಸಾಂತ ರೂಪ, ಸಾಂತ ಜೀವಿಯಾಗಿ ತೋರುವುದು, ಅವನ ಬಯಕೆ, ಆಶೆ, ಅವುಗಳ ಪೂರೈಕೆ, ತೃಪ್ತಿ ಇವಾವೂ ಅವನದಲ್ಲ, ಎಲ್ಲವೂ ಪ್ರಕೃತಿಯದೇ. ಅವೆಲ್ಲವನ್ನೂ ಪ್ರಕೃತಿಯು ಅವನಿಗೆ ಯಜ್ಞದ ಆಹುತಿ ರೂಪದಲ್ಲಿ ನೀಡುತ್ತದೆ. ಎಲ್ಲವೂ ಉಪಕರಣಗಳ ರೂಪದಲ್ಲಿಯೇ ಉಪಯೋಗವಾಗುತ್ತದೆ. ಮುಖ್ಯ ಉದ್ದೇಶ ಮಾತ್ರ ಪುರುಷನ ಯಜ್ಞವೇ ಆಗಿರುತ್ತದೆ. ಇದು ನಮಗೆ ಅರಿವಾಗದೇ ಇರುವ ಮುಖ್ಯ ಕಾರಣವೇನೆಂದರೆ ಅಜ್ಞಾನವೇ, ಅಹಂಕಾರವು ಅಜ್ಞಾನದ ಮುದ್ರೆ ಇದ್ದ ಹಾಗೆ; ಇದರಿಂದಾಗಿಯೇ ಮಾನವನು ಯಜ್ಞದ ಈ ನಿಯಮವನ್ನು ಕಡೆಗಣಿಸುತ್ತಾನೆ, ಮರೆಯುತ್ತಾನೆ, ಎಲ್ಲವನ್ನು ತನಗಾಗಿ, ತನ್ನ ಭೋಗಕ್ಕಾಗಿ ಎಂದೇ ಭಾವಿಸುತ್ತಾನೆ. ಪ್ರಕೃತಿಯು ಯಾವುದನ್ನು ಒತ್ತಡ ಹೇರಿ ಪಡೆಯುವುದೋ ಅದಕ್ಕಷ್ಟೇ ಅದು ಆಂತರಿಕವಾಗಿರಲಿ ಅಥವಾ ಬಾಹ್ಯವಾಗಿರಲಿ – ಅವನು ಕೊಡ ಮಾಡುತ್ತಾನೆ (ತ್ಯಾಗ ಮಾಡಲು ಸಿದ್ಧನಾಗುತ್ತಾನೆ). ವಾಸ್ತವವಾಗಿ ಅವನು ಏನೋ ತೆಗೆದುಕೊಳ್ಳಬಾರದು, ತನ್ನ ಭಾಗವೆಂದು ಪ್ರಕೃತಿ ಏನನ್ನು ಕೊಡುವುದೇ ನಿಜವಾಗಿ ಅದನ್ನಷ್ಟೇ ಅವನು ತೆಗೆದುಕೊಳ್ಳಬೇಕು, ಅವನಿಗೇನು ಬೇಕೋ, ಅವನಿಚ್ಛೆ ಏನಿದೆಯೋ ಅದರಲ್ಲಿ ಎಷ್ಟನ್ನು ಮತ್ತು ಯಾವುದನ್ನು ಪೂರ್ತಿ ಮಾಡಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಬೇಕು. ಇದು ನಿಜವಾಗಿ ಯಜ್ಞದ ಕ್ಷೇತ್ರ, ಇಲ್ಲಿ ಪ್ರಕೃತಿಯ ಶಕ್ತಿಗಳು ಏನನ್ನು ಪ್ರಸಾದಿಸುವುವೋ ಅದೆಲ್ಲವನ್ನು ಸ್ವೀಕರಿಸಿ, ಭೋಗಿಸಿ, ಪ್ರಕೃತಿಗೆ ಹಿಂತಿರುಗಿ ಏನನ್ನೂ ಕೊಡದೇ ಹೋದರೆ ಅವನನ್ನು ಕಳ್ಳನಂತೆಯೇ, ದರೋಡೆಕೋರನಂತೆಯೇ ಭಾವಿಸಬೇಕು. ಅವನಿಗೆ ಜೀವನದ ನಿಜವಾದ ಅರ್ಥ ತಿಳಿದಿಲ್ಲ ಮತ್ತು ತನ್ನ ಜೀವನ ಮತ್ತು ಕರ್ಮಗಳನ್ನಾತ ತನ್ನ ಸತ್ತೆಯ

ವೈಶಾಲ್ಯೀಕರಣಕ್ಕೆ ಮತ್ತು ಉನ್ನತೀಕರಣಕ್ಕೆ ಬಳಸುತ್ತಿಲ್ಲ ಎಂದು ಅರ್ಥ. ಅಂಥವನ ಜೀವನ ನಿಜವಾಗಿಯೂ ವ್ಯರ್ಥವೇ.

ಪ್ರತ್ಯೇಕ ವ್ಯಕ್ತಿಯು ಯಾವಾಗ ತನ್ನ ಕಾರ್ಯಗಳಲ್ಲಿ ತನ್ನ ಶಕ್ತಿ ಮತ್ತು ಅಹಂನ ಅವಶ್ಯಕತೆಯ ಜೊತೆ ಇತರರ ಆತ್ಮದ ಅವಶ್ಯಕತೆಯನ್ನು ಕೂಡ ಸಮಾನವಾಗಿ ಭಾವಿಸುತ್ತಾನೋ, ತನ್ನೆಲ್ಲ ಕೆಲಸ ಕಾರ್ಯಗಳ ಹಿಂದೆ ವಿಶ್ವಾತ್ಮಕ ಶಕ್ತಿಯಾದ ಪ್ರಕೃತಿಯ ಕೈಗಳಿರುವುದನ್ನು ಮನಗಾಣುತ್ತಾನೋ, ವಿಶ್ವ ದೇವತೆಗಳೇ ತನ್ನ ಮೂಲಕ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾನೋ ಆಗ ಮಾತ್ರ ಅವನಿಗೆ ಏಕೈಕನಾದ, ಅನಂತನಾದ ಪರಮಾತ್ಮನ ದರ್ಶನ ಪ್ರಾಪ್ತವಾಗುತ್ತದೆ. ಅವನು ತನ್ನ ಅಹಂನ ಬಂಧನದಿಂದ ಮುಕ್ತನಾಗುವ ದಾರಿಯಲ್ಲಿ ಸಾಗುತ್ತಾನೆ. ಕೇವಲ ತನ್ನ ಆಸೆಗಳಿಗಿಂತ, ಅವುಗಳ ಪೂರ್ತಿಗಿಂತ ಹೆಚ್ಚಿನ ನಿಯಮ ಈ ವಿಶ್ವದಲ್ಲಿದೆ, ಆ ನಿಯಮಕ್ಕೆ ತನ್ನ ಆಸೆ, ಬಯಕೆಗಳನ್ನು ಅಧೀನಗೊಳಿಸಬೇಕು ಎಂಬುದು ನಿಧಾನವಾಗಿ ಅವನಿಗೆ ಅರ್ಥವಾಗತೊಡಗುತ್ತದೆ. ತೀರ ಅಹಂಕಾರಿಯಾಗಿದ್ದವನು, ನಾನೇ ನಾನೇ ಎನ್ನುತ್ತಿದ್ದವನು ನೈತಿಕತೆಯನ್ನು ಅರ್ಥ ಮಾಡಿಕೊಳ್ಳತೊಡಗುತ್ತಾನೆ. ತನ್ನ ಅಹಂನ ಬೇಡಿಕೆಗಳಿಗಿಂತ ಹೆಚ್ಚಾಗಿ ಅನ್ಯರಲ್ಲಿರುವ ಆತ್ಮದ ಬೇಡಿಕೆಗಳಿಗೆ ಹೆಚ್ಚಿನ ಮಹತ್ವ ನೀಡತೊಡಗುತ್ತಾನೆ. ಅಹಂ ಹಾಗೂ ಪರೋಪಕಾರ ಇವುಗಳ ನಡುವಣ ಕಾದಾಟವನ್ನಾತ ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಾನೆ ಹಾಗೂ ತನ್ನ ದಯೆ ಹಾಗೂ ಪರೋಪಕಾರಿ ಗುಣಗಳಿಂದಾಗಿ ತನ್ನೊಳಗಿನ ಪ್ರಜ್ಞೆ ಹಾಗೂ ಸತ್ತೆಯೂ ವೃದ್ಧಿಯಾಗುತ್ತಿರುವುದನ್ನಾತ ಕಾಣುತ್ತಾನೆ. ಪ್ರಕೃತಿ ಹಾಗೂ ಪ್ರಕೃತಿಯ ಶಕ್ತಿಗಳ ಬಗ್ಗೆ ಅವನಿಗೆ ಗೌರವಾದರ ಮೂಡುತ್ತದೆ. ಆಗ ಯಜ್ಞ, ಆರಾಧನೆ, ವಿಧೇಯತೆ, ಇವು ಬೆಳೆಯುತ್ತವೆ. ಈ ನಿಯಮದಿಂದಲೇ ವಿಶ್ವದ ಮಾನಸಿಕ ಹಾಗೂ ಭೌತಿಕ ಕಾರ್ಯಗಳು ಅನೂಚಾನವಾಗಿ ನಡೆದುಕೊಂಡು ಹೋಗುತ್ತವೆ. ನಿಯಂತ್ರಿತವಾಗುತ್ತವೆ, ನಿಯೋಜಿತವಾಗುತ್ತವೆ; ಆದ್ದರಿಂದಲೇ ಅವುಗಳ ಪುಷ್ಠಿ, ವರ್ಧನೆ, ಪಾಲನೆಯಿಂದಲೇ, ತನ್ನ ಮನಸ್ಸು, ಸಂಕಲ್ಪ ಹಾಗೂ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವುದರಿಂದಲೇ ತಾನು ತನ್ನ ಶಕ್ತಿ, ಜ್ಞಾನ, ಸತ್‌ಕರ್ಮಗಳನ್ನು ಬೆಳೆಸಿಕೊಳ್ಳುವುದು ಸಾಧ್ಯ ಎಂದು ಅರ್ಥ ಮಾಡಿಕೊಳ್ಳುತ್ತಾನೆ. ತನ್ಮೂಲಕ ತೃಪ್ತಿ ಪಡೆಯಲು ಸಾಧ್ಯ ಎಂಬ ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಈ ರೀತಿ ತನ್ನ ಸಾಮಾನ್ಯ ಭೌತಿಕ ಹಾಗೂ ಅಹಂ ಸತ್ಯಯೇ ಜೀವನಕ್ಕೆ ಧಾರ್ಮಿಕ ಹಾಗೂ ಅಲೌಕಿಕ ಅರ್ಥವನ್ನು ನೀಡುವಲ್ಲಿ

ಅವನು ಸಫಲನಾಗುತ್ತಾನೆ. ಈ ಮೂಲಕ ಸಾಂತತೆಯಿಂದ ಅನಂತತೆಯತ್ತ ಬೆಳೆಯಲು ಅವನು ಅಣಿಯಾಗುತ್ತಾನೆ.

ಆದರೆ ಇದೆಲ್ಲವೂ ಅತೀ ದೀರ್ಘವಾದ ಅನಿಶ್ಚಿತಾವಧಿಯ ಸ್ಥಿತಿಯಾಗಿದೆ – ಇದು ವಿಕಾಸದ ಅಂತಿಮ ಅವಸ್ಥೆಯಂತೂ ಅಲ್ಲ, ಬಿಡಿ, ಬದಲಾಗಿ ಈ ಅವಸ್ಥೆಯಲ್ಲಿ ವಾಸನೆಯ ನಿಯಮ ಹೆಚ್ಚು ಕಡಿಮೆ ಆಗುತ್ತ ಆಗುತ್ತ ಹೋಗುತ್ತಿರುತ್ತದೆ. “ನಾನು” “ನನ್ನದು” ಎಂಬ ಭಾವ ಈ ಸ್ಥಿತಿಯಲ್ಲಿ ಮಧ್ಯವರ್ತಿ, ಸರ್ವಶ್ರೇಷ್ಠವೆಂಬ ಕಲ್ಪನೆ ಇರುತ್ತದೆ. ಈ ಅವಸ್ಥೆಯಲ್ಲಿ ಆತ್ಮದ ಜೀವಿತವು ಹಾಗೂ ಕರ್ಮಗಳು ಪ್ರಕೃತಿಯ ನಿಯಂತ್ರಣದ ಮೂಲಕವೇ ಚಾಲಿತವಾಗಿರುತ್ತವೆ. ಇಷ್ಟೇ, ಏನೆಂದರೆ, ಈ ಅವಸ್ಥೆಯಲ್ಲಿ ವಾಸನೆಯು ಸಂಪೂರ್ಣ ನಾಶವಾಗಿರದೇ ಸುನಿಯಂತ್ರಿತವಾಗಿರುತ್ತದೆ. ನಾನು, ನನ್ನದೆಂಬ ಅಹಂ ಭಾವವು ನಿರ್ಮಲವಾಗಿರುತ್ತದೆ. ಪ್ರಕೃತಿಯು ಹೆಚ್ಚು ಸೂಕ್ಷ್ಮವಾಗಿರುತ್ತದೆ, ಉದಾತ್ತವಾಗಿರುತ್ತದೆ. ಅದರಲ್ಲಿ ಸಾತ್ವಿಕ ಗುಣದ ಆಧಿಕ್ಯತೆ ಇರುತ್ತದೆ. ಇದೆಲ್ಲವೂ ಒಂದು ನಿರ್ದಿಷ್ಟ ಮಟ್ಟಕ್ಕೆ ಸೀಮಿತವಾಗಿರುತ್ತದೆ; ಈ ಸೀಮೆಯು ಸಾಕಷ್ಟು ವಿಶಾಲವಾಗಿರುತ್ತದೆ. ವಿಸ್ತೃತವಾಗಿರುತ್ತದೆ. ಅದು ಆಗಾಗ ಬದಲಾವಣೆ ಹೊಂದುತ್ತಲೂ ಇರುತ್ತದೆ ಹಾಗೂ ವ್ಯಕ್ತಿಗತವೂ ವೈಯಕ್ತಿಕವೂ ಆಗಿರುತ್ತದೆ ಎಂಬುದು ನಿಜವೇ. ನಿಜವಾದ ಆತ್ಮಜ್ಞಾನ ಹಾಗೂ ಕರ್ಮ ಯೋಗದ ಋಜುಮಾರ್ಗ ಇನ್ನೂ ದೂರವೇ ಉಳಿದಿರುತ್ತದೆ. ಏಕೆಂದರೆ ಜ್ಞಾನಪೂರ್ವಕವಾಗಿ ಮಾಡುವ ಯಜ್ಞವೇ ನಿಜವಾದ ಅತ್ಯಂತ ಉನ್ನತವಾದುವು, ಅದೇ ನಿಜವಾದ, ಪರಿಪೂರ್ಣವಾದ ಕರ್ಮ ಯೋಗವನ್ನು ಆಚರಿಸಲು ಸಾಮರ್ಥ್ಯ ನೀಡಬಲ್ಲದು. ಆವಾಗ ಮಾತ್ರ ತನ್ನೊಳಗಿರುವ ಆತ್ಮವೇ ಇತರ ಜೀವಿಗಳಲ್ಲೂ ಇದೆ, ಅವು ಬೇರೆ ಬೇರೆ ಅಲ್ಲ, ಎಲ್ಲವೂ ಒಂದೇ, ಈ ಆತ್ಮವೆಂಬುದು ಅಹಂಗಿಂತ ತುಂಬ ಭಿನ್ನ ಮತ್ತು ಅತ್ಯಂತ ಉನ್ನತವಾದುದು, ಅದು ಅನಂತ, ಅದು ನಿರಾಕಾರ, ಅದು ವಿಶ್ವಂಭರವಾದುದು, ಎಲ್ಲ ಜೀವಿಗಳೂ ಅದರೊಳಗೇ ಜೀವಿಸುತ್ತವೆ, ಚಲಿಸುತ್ತವೆ ಎಂಬುದು ಅರಿವಾಗುತ್ತದೆ; ಎಲ್ಲ ವಿಶ್ವೇ ದೇವತೆಗಳು, ತಾನು ಆಹುತಿ ನೀಡುವ ಸಮಸ್ತ ದೇವತೆಗಳೆಲ್ಲರೂ ಏಕೈಕನಾದ ಅನಂತೇಶ್ವರನ ರೂಪಗಳೇ ಎಂಬ ಸಾಕ್ಷಾತ್ಕಾರವಾಗುತ್ತದೆ. ಪರಮಾತ್ಮನ ಬಗೆಗೆ ಇರುವ ಸೀಮಿತ ಭಾವನೆಗಳು, ಪರಿಕಲ್ಪನೆಗಳು ಮಾಯವಾಗುತ್ತವೆ. ಇರುವವ ಅವನೊಬ್ಬನೇ, ಅವನೇ ಆತ್ಯಂತಿಕ, ಅತ್ಯುಚ್ಚ ಪರಮ ದೈವತ, ಅವನು ಅನಿರ್ವಚನೀಯ; ಅವನು ಸಾಂತನೂ ಹೌದು

ಅನಂತನೂ ಹೌದು, ಏಕನೂ ಹೌದು ಅನೇಕನೂ ಹೌದು, ಪ್ರಕೃತಿಸ್ಥನಾಗಿದ್ದರೂ ಅವನು ಪ್ರಕೃತಿಗತೀತನು, ಅವನಿಗೆ ಗುಣಗಳಿಲ್ಲ, ಲಕ್ಷಣಗಳಿಲ್ಲ, ಸೀಮೆ–ಮಿತಿಗಳಿಲ್ಲ, ತನ್ನ ಅನಂತ ಶಕ್ತಿ ಗುಣಗಳಿಂದ ಅನೇಕವಾಗಿ ಪ್ರಕಟನಾಗಿದ್ದರೂ ಅವನು ಯಾವ ಆಕಾರ, ಗುಣ, ಮಿತಿಗಳಿಗೂ ಬದ್ಧನಲ್ಲ ಎಂಬ ಸತ್ಯದ ಅರಿವಾಗುತ್ತದೆ. ಅವನೇ ಪುರುಷೋತ್ತಮ, ನಮ್ಮ ಯಜ್ಞವೆಲ್ಲವೂ ಅವನ ಕುರಿತೇ, ಅವನಿಗೆ ಸಮರ್ಪಿತವಾಗಬೇಕು; ನಮ್ಮ ಯಾವ ತಾತ್ಕಾಲಿಕ ವೈಯಕ್ತಿಕ ಬಯಕೆಗಳಿಗಾಗಿ, ಪ್ರತಿಫಲಕ್ಕಾಗಿ ಯಜ್ಞ ಮಾಡಬಾರದು. ಪರಮಾತ್ಮನ ಜೊತೆ ಸಮರಸವಾಗಿ ಬಾಳಲು, ಏಕರೂಪವಾಗಿ ಜೀವಿಸಲು ನಮ್ಮ ಆತ್ಮವು ಪರಮಾತ್ಮನನ್ನೇ ಬಯಸಬೇಕು, ಅದೊಂದೇ ಬೇಡಿಕೆಯಾಗಿರಬೇಕು ಎಂಬ ಪರಮ ಸತ್ಯದ ಅರಿವಾಗುವುದು.

ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಮಾನವನ ಮುಕ್ತಿಯ, ಪೂರ್ಣತೆಯ ಮಾರ್ಗವು ಬೆಳೆದಂತೆಲ್ಲ ನಿರ್ವೈಯಕ್ತೀಕರಣ, ನಿರಹಂಕಾರ, ನಿರಸ್ಮಿತೆ ಕಡೆಗೆ ಹೋಗುತ್ತದೆ. ಮಾನವನ ಅತಿ ಪುರಾತನ ಹಾಗೂ ನಿರಂತರ ಅನುಭವದ ಸಂಗತಿ ಏನೆಂದರೆ, ಅವನು ನಿರ್ವ್ಯಕ್ತಿಕತೆ, ನಿರ್ವೈಯಕ್ತಿಕತೆ, ಅನಂತತೆಯೆಡೆಗೆ ಉನ್ಮುಖನಾಗುತ್ತಾನೆ; ಪರಿಶುದ್ಧವೂ, ಅತ್ಯುನ್ನತವೂ, ಸರ್ವರಲ್ಲೂ ಸರ್ವಸ್ವದಲ್ಲೂ ಒಂದೇ ಆಗಿರುವ ಏಕ ಸದ್ವಸ್ತುವನ್ನರಿಯಲಾರಂಭಿಸುತ್ತಾನೆ; ಪ್ರಕೃತಿಯಲ್ಲಿ ನಿರ್ವ್ಯಕ್ತಿಕವಾಗಿರುವ ಅನಂತವಾಗಿರುವ ಅಲೌಕಿಕ ವಸ್ತುವಿನ ನಿವಸನದ ಆಭಾಸವನ್ನರಿಯುತ್ತಾನೆ; ಬದುಕಿನಲ್ಲಿ ನಿರ್ವ್ಯಕ್ತಿಕವಾಗಿರುವ, ಅನಂತವಾಗಿರುವ ಸತ್ಯಕ್ಕೆ ತೆರೆದುಕೊಳ್ಳುತ್ತಾನೆ; ತನ್ನ ವೈಯಕ್ತಿಕ ಅಸ್ತಿತ್ವದ ನೆಲೆಯಲ್ಲಿ ಕೂಡ ಈ ಅನಂತತೆಯನ್ನು, ನಿರ್ವೈಯಕ್ತಿಕತೆಯನ್ನನುಭವಿಸ ತೊಡಗುತ್ತಾನೆ. ಅವನು ತನ್ನ ಅಹಂದಿಂದ, ಸೀಮಿತತೆಯ ಬಂಧನದಿಂದ ಎಷ್ಟೆಷ್ಟು ಮುಕ್ತನಾಗುತ್ತ ಹೋಗುತ್ತಾನೋ ಅಷ್ಟರ ಮಟ್ಟಿಗೆ ವೈಶಾಲ್ಯವನ್ನು, ಶಾಂತಿಯನ್ನು, ಪರಿಶುದ್ಧ ಸುಖಾನುಭವವನ್ನು ಪಡೆಯುತ್ತ ಹೋಗುತ್ತಾನೆ. ತನ್ನ ಸಾಂತ ಪ್ರಾಪಂಚಿಕ ಜೀವನದಲ್ಲಾತ ಏನೆಲ್ಲ ಸುಖ, ಸಂತೋಷ, ತೃಪ್ತಿ ಪಡೆಯುತ್ತಾನೋ ಅವೆಲ್ಲವೂ ಅವನ ಅಹಂನ ಮೂಲಕ ಸೀಮಿತ ಮಿತಿಯ ವಸ್ತು–ಸಾಧನಗಳ ಮೂಲಕ ಬಂದದ್ದರಿಂದ ತಾತ್ಕಾಲಿಕ, ನಿಜವಾಗಿ ನಗಣ್ಯ, ಕ್ಷುಲ್ಲಕ ಹಾಗೂ ಅಸುರಕ್ಷಿತವಾಗಿರುತ್ತವೆ. ಸಂಪೂರ್ಣವಾಗಿ ಅಹಂ ಭಾವದಲ್ಲಿಯೇ ಜೀವಿಸುತ್ತ ಹೋಗುವುದರಿಂದ, ಸೀಮಿತ ಸಾಂತ ಲೋಕದಲ್ಲಿಯೇ ಜೀವನ ಸವೆಸುತ್ತ

ಹೋಗುವುದರಿಂದ, ಈ ಜಗತ್ತು ಕೇವಲ ಕ್ಷಣಿಕತೆಯಿಂದ, ದುಃಖದಿಂದ ತುಂಬಿದೆ ಎಂದು ಭಾಸವಾಗುತ್ತದೆ. ಜಗತ್ತಿನಲ್ಲಿನ ಸಾಂತ ಜೀವನವು ಸದಾ ಒಂದು ರೀತಿಯ ನಿರರ್ಥಕತೆಯ, ವ್ಯರ್ಥತೆಯ ಭಾವದಿಂದ ಕೂಡಿರುತ್ತದೆ; ಏಕೆಂದರೆ ಅದರ ಮೂಲ ಈ ಸಾಂತವು ಅನಂತವಲ್ಲ, ಪೂರ್ಣವಲ್ಲ, ಇದೇ ಜೀವನದ ಅಂತಿಮ ಪರಮ ಗತಿಯಲ್ಲ ಎಂಬ ಆಂತರಿಕ ಅರಿವು ಜೀವನವು ಅನಂತದ ಅರ್ಥಕ್ಕೆ ತೆರೆದುಕೊಳ್ಳದೇ ಹೋದರೆ ಅದು ನಿಜವಾಗಿಯೂ ಅಸತ್ಯವೇ, ಮಿಥ್ಯವೇ. ಈ ಕಾರಣಕ್ಕಾಗಿಯೇ ಗೀತೆಯು ಕರ್ಮ ಯೋಗದ ಜೊತೆಗೆ ಬ್ರಾಹ್ಮೀ ಪ್ರಜ್ಞೆಯ ಮೇಲೆ ಒತ್ತು ನೀಡುತ್ತದೆ. ನಿರ್ವೈಯಕ್ತಿಕ ಜೀವನದ ಮೇಲೆ ಜೋರು ನೀಡುತ್ತದೆ. ಪುರಾತನ ಋಷಿ–ಮುನಿಗಳು ಈ ವಿಶ್ವಾತ್ಮಕ ಜೀವನದ ಆದರ್ಶವನ್ನು ಒಂದು ವ್ಯವಸ್ಥೆಯಾಗಿ ರೂಪಿಸಿದ್ದರು – ಏಕೆಂದರೆ, ನಿರಾಕಾರ, ನಿರ್ಗುಣ, ಅನಂತ, ಏಕದಲ್ಲಿ ಎಲ್ಲ ಅಶಾಶ್ವತ, ಬದಲಾವಣೆ ಹೊಂದುವ, ಜಗದ ನಾನಾ ವಿಧ ಕ್ರಿಯೆಗಳು, ಚಲನೆಗಳು ತಮ್ಮ ಶಾಶ್ವತತೆಯ ನೆಲೆಯನ್ನು ಕಂಡುಕೊಳ್ಳುತ್ತವೆ. ಭದ್ರತೆ, ಸುರಕ್ಷಿತತೆ, ಶಾಂತಿ, ಸಮಾಧಾನ ಇವೆಲ್ಲ ಇರುವುದು ಅವಿಕಾರಿಯಾದ, ಅಕ್ಷರನಾದ ಬ್ರಹ್ಮನಲ್ಲಿ ಮಾತ್ರ. ಒಮ್ಮೆ ನಮಗಿದು ಮನದಟ್ಟಾಯಿತೆಂದರೆ, ನಾವು ನಮ್ಮ ಪ್ರಜ್ಞೆಯನ್ನು ಉನ್ನತಗೊಳಿಸುವ, ನಮ್ಮ ಸಮಸ್ಥಿತಿಯನ್ನು ಸೀಮಿತ ವ್ಯಕ್ತಿತ್ವದಾಚೆಗೆ ಎತ್ತರಿಸಿ ಅನಂತ, ನಿರ್ಗುಣ ಬ್ರಹ್ಮನನ್ನು ಪಡೆಯುವುದೊಂದೇ ಆಧ್ಯಾತ್ಮಿಕ ಅವಶ್ಯಕತೆ ಎಂಬ ಅರಿವಾಗುತ್ತದೆ. ಈ ಏಕಮೇವ ಆತ್ಮನ ಆಂತರ್ಯದಲ್ಲಿಯೇ ಸಕಲ ಚರಾಚರ ಜೀವರಾಶಿಗಳನ್ನು ಕಾಣುವುದು ನಿಜವಾದ ಜ್ಞಾನ; ಇದು ಪ್ರಾಪ್ತವಾಯಿತೆಂದರೆ ಆತ್ಮವು ಅವಿದ್ಯೆಯ ಅಹಂಭಾವದಿಂದ ಮೇಲಕ್ಕೇರುವುದು, ಅದರ ಕ್ರಿಯೆಗಳಿಂದ ಪರಿಣಾಮದಿಂದ ಮೇಲಕ್ಕೇರುವುದು. ಆತ್ಮ ಜ್ಞಾನದೊಳಗೆ ಜೀವಿಸುವುದೆಂದರೆ ಶಾಂತಿ ಹಾಗೂ ದೃಢವಾದ ಆಧ್ಯಾತ್ಮಿಕ ಆಧಾರವನ್ನು ಪಡೆದಂತೆಯೇ ಸರಿ.

ಮಾನವನ ಸಾಮಾನ್ಯ ಜೀವನಕ್ಕೆ ಈ ಮಹಾನ್ ರೂಪವನ್ನು ಕೊಡಲು, ಅದರಲ್ಲಿ ಮಹಾ ಪರಿವರ್ತನೆಯನ್ನು ಸಾಧಿಸಲು ಎರಡು ಮಾರ್ಗಗಳನ್ನು ಜಂಟಿಯಾಗಿ ಅನುಸಂಧಾನ ಮಾಡಬೇಕಾಗುತ್ತದೆ. ಒಂದು ಮಾರ್ಗವು ಜ್ಞಾನದ್ದು, ಇನ್ನೊಂದು ಕರ್ಮದ್ದು. ಗೀತೆಯು ಈ ಎರಡೂ ಮಾರ್ಗಗಳ ದೃಢ ಸಮನ್ವಯವನ್ನು ಸಾಧಿಸುತ್ತದೆ. ಜ್ಞಾನ ಮಾರ್ಗದಲ್ಲಿ ಮನಸ್ಸು ಮತ್ತು

ಇಂದ್ರಿಯಗಳ ವ್ಯವಹಾರದಲ್ಲಿ ಮಗ್ನವಾಗಿರುವ ಬುದ್ಧಿ, ಬುದ್ಧಿಮುಕ್ತ ಸಂಕಲ್ಪ ಶಕ್ತಿಯನ್ನು ಹೆಚ್ಚು ಬೆಳೆಸಿ, ಪೋಷಿಸಿ ಉನ್ನತೀಕರಣಗೊಳಿಸಬೇಕು; ಮನಸ್ಸು ಮತ್ತು ಇಂದ್ರಿಯಗಳು ಬುದ್ಧಿಯನ್ನು ಕೆಳಕ್ಕೆ ಎಳೆಯಲು ಯತ್ನಿಸುತ್ತವೆ. ಬುದ್ಧಿಯನ್ನು ಅವುಗಳಿಂದ ಬೇರ್ಪಡಿಸಿ ಎತ್ತರಿಸಬೇಕಾಗುತ್ತದೆ. ಬುದ್ಧಿಯನ್ನು ಪುರುಷನೆಡೆಗೆ ಅಥವಾ ಬ್ರಹ್ಮ ವಸ್ತುವಿನೆಡೆಗೆ ತಿರುಗಿಸಬೇಕಾಗುತ್ತದೆ. ಅದು ಸದಾ ಆತ್ಮ ವಸ್ತುವಿನ ಮೇಲೆ ಕೇಂದ್ರೀಕೃತವಾಗಿರುವಂತೆ ಮಾಡಬೇಕು. ಮನಸ್ಸು ಹಾಗೂ ಅದರ ಅಸಂಖ್ಯಾತ ವಾಸನೆಗಳ ಅಸಂಗತ ದಾರಿಯಿಂದ ನಿವೃತ್ತಗೊಳಿಸಬೇಕು. ಈ ಉಪಕ್ರಮನ್ನಾರಂಭಿಸಿದರೆ ತೀರ ಕರ್ಮ ಸನ್ಯಾಸದ ದಾರಿಗೆ ಹೋಗಿಬಿಡುವುದೇನೋ ಎಂದೆನಿಸಬಹುದು. ಆತ್ಮ ಮತ್ತು ಪ್ರಕೃತಿಗಳ ಮಧ್ಯೆ ಅಂತರ ಮೂಡಿದಂತೆ ತೋರಬಹುದು. ಆದರೆ ವಾಸ್ತವವಾಗಿ ಈ ರೀತಿಯ ಸಂಪೂರ್ಣ ತ್ಯಾಗ, ತಟಸ್ಥ ಧೋರಣೆ ಹಾಗೂ ಜೀವ–ಪ್ರಕೃತಿಗಳ ನಡುವೆ ಸದಾ ಕಂದರ ಏರ್ಪಡುವುದು ಸಾಧ್ಯವಿಲ್ಲ. ಪುರುಷ ಮತ್ತು ಪ್ರಕೃತಿ ಎರಡೂ ಅಸ್ತಿತ್ವದ ಅವಳಿ ತತ್ವಗಳು, ಅವುಗಳನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ನಾವು ಎಲ್ಲಿಯವರೆಗೆ ಪ್ರಕೃತಿಯಲ್ಲಿ ಇರುವೆವೋ ಅಲ್ಲಿಯವರೆಗೆ ಪ್ರಕೃತಿಯ ಕಾರ್ಯಗಳು ಮುಂದುವರಿಯಲೇಬೇಕು. ನಾವು ತದನುಸಾರ ಕೆಲಸ ಮಾಡುವುದು ಸಹ ಅನಿವಾರ್ಯವೇ. ಪ್ರಕೃತಿಯ ಅಥವಾ ನಮ್ಮ ಕ್ರಿಯೆಗಳು ಮತ್ತು ಅವುಗಳ ಸ್ವರೂಪ ಬದಲಾಗುವುವು. ಸಾಕ್ಷಾತ್ಕಾರ ಹೊಂದಿದ ಜೀವಾತ್ಮದ ಕ್ರಿಯೆಗಳು ಸಾಮಾನ್ಯವಾಗಿರುವುದಿಲ್ಲ. ಬದಲಾಗುವುದು ಸಹಜ. ನಿಜವಾದ ಸನ್ಯಾಸ ಅಥವಾ ತ್ಯಾಗವೆಂದರೆ ಕರ್ಮಗಳನ್ನು ತ್ಯಾಗ ಮಾಡುವುದು ಎಂದರ್ಥವಲ್ಲ. ಬದಲಾಗಿ ನಮ್ಮ ಅಹಂಭಾವವನ್ನು ಕಳೆಯಬೇಕು. ನಮ್ಮ ವಾಸನೆಗಳು ಇಲ್ಲವಾಗಬೇಕು; ಅದೇ ನಿಜವಾದ ಸನ್ಯಾಸ ಮತ್ತು ಇದು ತೀರ ಅವಶ್ಯಕ ಕೂಡ. ಇದನ್ನು ಹೇಗೆ ಸಾಧಿಸುವುದೆಂದರೆ, ಕರ್ಮದ ಫಲದ ಮೇಲಿನ ಆಶೆಯನ್ನು ಸಂಪೂರ್ಣವಾಗಿ ತೊರೆಯಬೇಕು. ಕರ್ಮ ಮಾಡುವಾಗಲೂ ಸಹ ಅದರ ಮೇಲೆ ಮೋಹ ಇರಕೂಡದು. ಪ್ರಕೃತಿಯೇ ನಿಜವಾದ ಮಧ್ಯಸ್ಥಿಕೆ ವಹಿಸಿದ ಕೆಲಸಗಾರ, ಎಲ್ಲವನ್ನು ಅದರ ವಶಕ್ಕೆ ಒಪ್ಪಿಸಿಬಿಡಬೇಕು; ತಾನು ಆತ್ಮ ಭಾವದಲ್ಲಿ ಸ್ಥಿರವಾಗಿ ನಿಲ್ಲಬೇಕು, ಸಾಕ್ಷಿಯಾಗಿ, ಭರ್ತ ಆಗಿ, ಥರ್ತಾ ಆಗಿ ನಿಲ್ಲಬೇಕೇ ವಿನಃ ಅದರಲ್ಲಿ ತೊಡಗಿಕೊಳ್ಳಬಾರದು – ಕಾರ್ಯಗಳ ಬಗೆಗೂ ಅಷ್ಟೇ ಕರ್ಮ ಫಲದ ಬಗೆಗೂ ಅಷ್ಟೇ ಮೋಹ ಇರಕೂಡದು.

ಕರ್ಮಗಳನ್ನು ಮಾಡುತ್ತಿರುವಾಗ ಕೂಡ ಕರ್ಮದ ಮೇಲಿನ ಮೋಹ ಇರಕೂಡದು. ಪ್ರಕೃತಿಯೇ ನಿಜವಾದ ಕರ್ತೃ ಎಂಬ ಭಾವ ತಳೆದು, ಎಲ್ಲ ಕರ್ಮಗಳನ್ನು ಪ್ರಕೃತಿಗೆ ಒಪ್ಪಿಸಿಬಿಡಬೇಕು. ತಾನು ಸಾಕ್ಷೀಭಾವ ತಾಳಿ, ಆತ್ಮಸ್ಥನಾಗಿ ನಿಂತುಕೊಂಡು ಪ್ರಕೃತಿಯ ಕಾರ್ಯಗಳನ್ನು ನೋಡುತ್ತ ಪರಿಶೀಲಿಸುತ್ತ, ಅವುಗಳಿಗೆ ಆಧಾರವಾಗಿ ನಿಲ್ಲಬೇಕು, ಕರ್ಮ ಹಾಗೂ ಅವುಗಳ ಪರಿಣಾಮಗಳ ಬಗ್ಗೆ ಚಿಂತಿಸಬಾರದು. ಆಗ ಸೀಮಿತವಾದ, ತ್ರಸ್ತವಾದ ಅಹಂ ಶಾಂತವಾಗುತ್ತದೆ. ಬರುಬರುತ್ತ ಸಕಲ ಕರ್ಮಗಳ ಕರ್ತಾರನಾದ ನಿರ್ಗುಣ ಪತಮಾತ್ಮ ತತ್ವದಲ್ಲಿ ಅವನ (ಸಾಧಕನ) ಪ್ರಜ್ಞೆ ಒಂದಾಗುತ್ತದೆ. ಆದರೆ ಪ್ರಕೃತಿಯ ಸಹಜ ಕಾರ್ಯಗಳೇನೂ ಬದಲಾಗುವುದಿಲ್ಲ. ಅವು ಯಥಾಃರೀತಿ ನಡೆದೇ ಇರುತ್ತದೆ. ಬದಲಾವಣೆ, ರೂಪಾಂತರ ಏನೆಲ್ಲ ಆದರೂ ಪ್ರಕೃತಿಯ ಕಾರ್ಯಗಳೆಲ್ಲ ಮೊದಲಿನಂತೆಯೇ ನಡೆದಿವೆ ಎಂಬಂತೆ ತೋರುತ್ತದೆ. ಆದರೆ ಅವೆಲ್ಲವೂ ಅನಂತನಾದ ಪರಮ ಪುರುಷನ ಆಂತರ್ಯದಲ್ಲಿಯೇ ನಡೆದಿರುತ್ತವೆ. ನಮ್ಮ ಸೀಮಿತ, ಬದ್ಧ, ಸಾಂತ ಅಸ್ತಿತ್ವವು ಕೂಡ ಅನಂತನ ಒಂದು ಭಾಗವೇ, ಕರ್ಮಗಳೆಲ್ಲವೂ ಪ್ರಕೃತಿಯ ಕಾರ್ಯಗಳೇ, ಅವೆಲ್ಲವೂ ನಮ್ಮ ಕಾರ್ಯಗಳಲ್ಲ; ನಮ್ಮ ನೈಜ ಸತ್ತೆಯು ನಿರ್ಗುಣವಾಗಿದೆ, ಮೌನವಾಗಿದೆ, ಶಾಂತವಾಗಿದೆ, ಪರಮಾತ್ಮನೊಂದಿಗೆ ಸಂಯುಕ್ತವಾಗಿದೆ ಎಂಬ ಅರಿವು ಮೂಡುತ್ತದೆ. ಮೊದಲು ನಮ್ಮ ಅಹಂ ಇವನ್ನೆಲ್ಲ ತಾನೇ ಮಾಡುವುದಾಗಿ ಭಾವಿಸಿತ್ತು, ತಾನೆ ಕರ್ತೃ ಎಂದು ಆರೋಪಿಸಿಕೊಂಡಿತ್ತು. ಅಂತೆಯೇ ಎಲ್ಲ ಕೆಲಸಗಳು, ಕರ್ಮಗಳು ನಮ್ಮವೇ, ನಾವೇ ಮಾಡುವವರೆಂದು ಭಾವಿಸಿದ್ದೆವು. ಆದರೆ ನಮ್ಮೊಳಗಿನ ಅಹಂ ಈಗ ಸತ್ತುಹೋಗಿದೆ. ಅಂತೆಯೇ ಆ ಕಾರ್ಯಗಳಾವೂ ನಮ್ಮವಲ್ಲ, ಅವೆಲ್ಲವೂ ಪ್ರಕೃತಿಯ ಕಾರ್ಯಗಳೇ. ನಮ್ಮ ಸತ್ತೆಯೊಳಗಿನ ಅಹಂ ಸಂಪೂರ್ಣ ನಾಶವಾಗಿರುವುದರಿಂದ, ನಮ್ಮ ಅಸ್ತಿತ್ವ, ವ್ಯಕ್ತಿತ್ವ, ಪ್ರಜ್ಞೆಯೊಳಗಿನ ಎಲ್ಲ ವಾಸನೆಗಳೂ ಅಡಗಿಹೋಗಿರುತ್ತವೆ. ನಮ್ಮ ಕಾರ್ಯಗಳಲ್ಲೊಂದು ರೀತಿಯ ನಿರ್ವೈಯಕ್ತಿಕತೆ ಬಂದಿರುತ್ತದೆ. ನಾವು ಕಾರ್ಯ ಮಾಡದಿರಲು, ಮಾಡಲೂ ಸಂಪೂರ್ಣ ಸ್ವತಂತ್ರರಾಗಿರುತ್ತೇವೆ; ನಮ್ಮ ಸ್ವಾತಂತ್ರ್ಯವು ಭೌತಿಕ ಅಥವಾ ಶಾರೀರಿಕ ಅಥವಾ ಸ್ವಭಾವದ ನಿಶ್ಚಲತೆಯ ಮೇಲಾಗಲಿ, ಸಂಕಲ್ಪರಾಹಿತ್ಯದ ಮೇಲಾಗಲಿ ನಿರ್ಭರವಾಗಿರುವುದಿಲ್ಲ, ನಾವು ನಮ್ಮ ಸ್ವಾಂತತ್ರ್ಯವನ್ನು ಕಳೆದುಕೊಳ್ಳದೇ ಕೆಲಸ ಮಾಡಲು ಸಮರ್ಥಕರಾಗಿರುತ್ತೇವೆ. ನಾವು ಸ್ವಾಭಾವಿಕ

ಕರ್ಮಗಳ ಪ್ರವಾಹದಲ್ಲೇ ಮುಳುಗಿ ಹೋಗಿದ್ದರೂ ಸಹ ನಮ್ಮೊಳಗಿನ ನಿರ್ವ್ಯೆಯಕ್ತಿಕ ಆತ್ಮವು ಶಾಂತವಾಗಿ ನಿಶ್ಚಲವಾಗಿ, ಸ್ವತಂತ್ರವಾಗಿಯೇ ಉಳಿದಿರುತ್ತದೆ.

ಈ ರೀತಿಯ ಪರಿಪೂರ್ಣ ನಿರ್ವ್ಯೆಯಕ್ತಿಕತೆಯು ನಿಜವಾದ ಮುಕ್ತಿಯನ್ನು ನೀಡಬಲ್ಲದು; ಅದು ಪೂರ್ಣವು ಹೌದು, ಅನಿವಾರ್ಯ ಕೂಡ ಹೌದು, ಆದರೆ ಅದೇ ಕೊನೆಯ ಸ್ಥಿತಿಯೇ? ಅಂತಿಮ ಘಟ್ಟವೇ? ಇಡೀ ಜೀವನ, ಇಡೀ ಬ್ರಹ್ಮಾಂಡದ ಅಸ್ತಿತ್ವವು ಪ್ರಕೃತಿಯು ಪುರುಷನಿಗಾಗಿ ಮಾಡುವ ಯಜ್ಞವೆಂದು ನಾವೀಗಾಗಲೇ ಹೇಳಿದ್ದುಂಟು. ಪುರುಷನೇ ಅದ್ವಿತೀಯ ತತ್ವ, ಅವನೇ ಪ್ರಕೃತಿಯಲ್ಲಿ ಆತ್ಮ ರೂಪದಲ್ಲಿ ನೆಲೆಸಿದ್ದಾನೆ. ಆ ಪ್ರಕೃತಿಯಲ್ಲಿಯೇ ಬ್ರಹ್ಮಾಂಡದ ಸಮಸ್ತ ಕಾರ್ಯಗಳು ನಡೆದುಕೊಂಡಿರುತ್ತವೆ. ಆದರೆ ನಮ್ಮ ಅಹಂನಿಂದಾಗಿ ಅದರ ಜ್ಞಾನ ನಮಗೆ ಆಗುವುದಿಲ್ಲ; ನಮ್ಮ ವಾಸನೆಗಳು, ಆಶೆಗಳು, ನಮ್ಮ ಸೀಮಿತ, ಸಕ್ರಿಯ ವೈವಿಧ್ಯಮಯ ವ್ಯಕ್ತಿತ್ವದಿಂದಾಗಿ ಅದು ನಮಗೆ ಮನದಟ್ಟಾಗುವುದಿಲ್ಲ. ನಾವು ನಮ್ಮ ಅಹಂ ಮೀರಿ ಮೇಲೆ ಏರಿದರೆ, ಬೆಳೆದರೆ, ನಮ್ಮ ವಾಸನೆಗಳನ್ನು ದಾಟಿ ಮೇಲಕ್ಕೆ ಏರಿದರೆ, ನಮ್ಮ ವೈಯಕ್ತಿಕ ಸತ್ತೆಯ ಸಣ್ಣ ಪರಿಧಿಯನ್ನು ದಾಟಿ ಮುಂದಕ್ಕೆ ಹೋಗಿ ನಿರ್ವ್ಯೆಯಕ್ತಿಕತೆಯ ಮೂಲಕ ನಾವು ನಿರ್ಗುಣನಾದ ಪರಮಾತ್ಮನನ್ನು ಪಡೆಯಲು ಸಾಧ್ಯವಾಗುವುದು. ನಮ್ಮ ವೈಯಕ್ತಿಕ ಆತ್ಮ ಸತ್ತೆಯನ್ನೇ ಎಲ್ಲರಲ್ಲೂ, ಪಶುಪಕ್ಷಿ ಪ್ರಾಣಿಗಳಲ್ಲಿ ಕೂಡ ಕಾಣಲು ಸಾಧ್ಯವಾಗುವುದು. ಕರ್ಮಗಳ ತ್ಯಾಗ, ಯಜ್ಞ ಖಂಡಿತವಾಗಿ ಮುಂದುವರಿಯುವುದು, ನಾವೇನೂ ಆ ಕರ್ಮ ಯಜ್ಞ ಮಾಡುವುದಿಲ್ಲ. ಬದಲಾಗಿ ಎಲ್ಲವೂ ಆ ಪ್ರಕೃತಿಯ ಮೂಲಕ ನಡೆದುಕೊಂಡು ಹೋಗುವುವು. ಪ್ರಕೃತಿಯು ನಮ್ಮ ಸತ್ತೆಯ ಸಾಂತ ಭಾಗದ ಮೂಲಕ ಕೆಲಸ ಮಾಡುತ್ತ ಅಂದರೆ ನಮ್ಮ ಮನಃ ಪ್ರಾಣ ಶರೀರಗಳ ಮೂಲಕ ಪ್ರೇರಣೆ, ಪ್ರಚೋದನೆ ನೀಡುತ್ತ ನಮ್ಮ ಅನಂತ ಶರೀರದೊಳಗೆಯೇ ಕಾರ್ಯ ಮಾಡುತ್ತದೆ. ಹಾಗಾದರೆ, ಈ ಯಜ್ಞದ ಭೋಕ್ತಾ ಯಾರು? ಯಾರಿಗೆ ಈ ಯಜ್ಞವನ್ನು ಸಮರ್ಪಿಸಲಾಗುವುದು? ಹಾಗೂ ಇದರ ಉದ್ದೇಶವೇನು? ಏಕೆಂದರೆ ನಿರ್ವ್ಯೆಯಕ್ತಿಕತೆಯಲ್ಲಿ ವಾಸನೆಗಳಿರುವುದಿಲ್ಲ, ಕಾರ್ಯಗಳಿರಬೇಕಾಗಿಲ್ಲ, ಯಾವ ಉದ್ದೇಶವೂ ಇಲ್ಲ, ಏನನ್ನಾದರೂ ಪಡೆಯಬೇಕು, ಸಂಪಾದಿಸಬೇಕು ಎಂಬ ಪ್ರಶ್ನೆಯೇ ಇಲ್ಲ. ಯಾರ ಮೇಲೂ ಅವಲಂಬನೆ ಇಲ್ಲ, ಈ ಜಗದ ಯಾವ ಜೀವರಾಶಿಯ ಮೇಲೂ ನಿರ್ಭರತೆ ಇಲ್ಲ,

ನಿರ್ವೈಯಕ್ತಿಕತೆ ಅಂದರೆ ನಿರ್ವೈಯಕ್ತಿಕತೆ ಅಷ್ಟೇ. ಅಲ್ಲಿ ಸಹಜ ಸ್ವಯಂ ಆನಂದವಿದೆ, ತನ್ನ ಶಾಶ್ವತ ಹಾಗೂ ಅವಿಕಾರಿ ಸತ್ತೆಯಲ್ಲಿ ತಾನೇ ತಾನಾಗಿ ಇದ್ದುಬಿಡುವುದು. ಈ ರೀತಿಯ ನಿರ್ವೈಯಕ್ತಿಕ ಆತ್ಮದ ಅಸ್ತಿತ್ವವನ್ನು ಪಡೆಯಬೇಕಾದರೆ, ಅಂದರೆ ಈ ಸ್ಥಿತಿ ತಲುಪಬೇಕಾದರೆ ನಾವು ನಿರ್ಮೋಹ, ನಿಸ್ಸಂಗತ್ವದಿಂದ ವಿರಾಗಿಯಾಗಿ ಕಾರ್ಯಮಾಡಬೇಕು. ಆತ್ಮಾನಂದ ಸುಲಭವಾಗಿ ದೊರಕುವಂಥದಲ್ಲ. ಒಂದು ಸಲ ಈ ರೀತಿಯ ಚಲನೆ ಆರಂಭವಾಯಿತೆಂದರೆ, ಮುಗಿಯಿತು, ಕರ್ಮಗಳ ಉದ್ದೇಶ, ಗುರಿ, ಪ್ರಚೋದನೆ ಇವುಗಳ ಪ್ರಶ್ನೆ ಬರುವುದೇ ಇಲ್ಲ. ಆಗ ಯಜ್ಞದ ಅಗತ್ಯವೇ ಬೀಳುವುದಿಲ್ಲ. ಕರ್ಮಗಳೇನೂ ಇಂಥ ಸ್ಥಿತಿಯಲ್ಲೂ ನಡೆದುಕೊಂಡೇ ಇರುತ್ತವೆ. ಏಕೆಂದರೆ ಪ್ರಕೃತಿ ಹಾಗೂ ಅದರ ಎಲ್ಲ ಚಟುವಟಿಕೆಗಳು ಸಹಜವಾಗಿ ಮುಂದುವರಿದಿರುತ್ತವೆ. ಆದರೆ ಕರ್ಮಗಳ ಹಿಂದೆ ಮಾತ್ರ ಯಾವ ರೀತಿಯ ಉದ್ದೇಶ, ಗುರಿ, ಧ್ಯೇಯ ಏನೂ ಇರುವುದಿಲ್ಲ. ಮುಕ್ತಿಯ ನಂತರವೂ ಸಹ ಕರ್ಮಗಳು ಮುಂದುವರಿಯಲು ಇರುವ ಏಕೈಕ ಕಾರಣವೆಂದರೆ ನಿಷೇಧಪೂರ್ವಕವಾದುದು; ನಮ್ಮ ಮನಃ ಪ್ರಾಣ ಶರೀರಗಳ ಸಾಂತ ಭಾಗಗಳ ಮೇಲೆ ಪ್ರಕೃತಿಯು ಹೇರುವ ಒತ್ತಡವೇ ಅದರ ಮುಖ್ಯ ಕಾರಣ, ಆದರೆ ಅಷ್ಟೇ ಆಗಿದ್ದರೆ, ಕರ್ಮಗಳು ಸಂಪೂರ್ಣ ಬಿಟ್ಟು ಹೋಗಬೇಕು ಅಥವಾ ಅತ್ಯಂತ ಕನಿಷ್ಠ ಪ್ರಮಾಣಕ್ಕೆ ಇಳಿಯಬೇಕು, ಅವಶ್ಯವಿದ್ದಷ್ಟು ಮಾತ್ರ ನಡೆದುಕೊಂಡು ಹೋಗಬೇಕು. ನಮ್ಮ ಅಗತ್ಯ ಶಾರೀರಿಕ ಕರ್ಮಗಳು ಮಾತ್ರ ನಡೆಯುತ್ತಿರಬೇಕು ಅಥವಾ ಕನಿಷ್ಠ ಪ್ರಮಾಣಕ್ಕೆ ಇಳಿಯದೇ ಹೋದರೂ ಕರ್ಮಗಳು ಯಾವುದು, ಏನು, ಎಂಥವು ಎಂಬುದೂ ಸಹ ನಗಣ್ಯವಾಗಿ ಹೋಗಬೇಕು; ಏಕೆಂದರೆ ಕಾರ್ಯ, ಕರ್ತೃತ್ವ ಇವೆಲ್ಲ ಗೌಣ ಹಾಗೂ ನಿಷ್ಕ್ರಿಯೆ ಅಥವಾ ಕರ್ಮತ್ಯಾಗ ಕೂಡ ಅಷ್ಟೇನೂ ಮಹತ್ವದ್ದಲ್ಲ. ಅರ್ಜುನನಿಗೆ ಒಂದು ಸಲ ಈ ಜ್ಞಾನವಾಯಿತೆಂದರೆ, ಕುರುಕ್ಷೇತ್ರದಲ್ಲಿ ಯುದ್ಧಗೈಯಲು ಹಿಂಜರಿಯುವುದಿಲ್ಲ, ತನ್ನ ಕ್ಷತ್ರೀಯ ಧರ್ಮವನ್ನು ತ್ಯಜಿಸುವುದಿಲ್ಲ ಅಥವಾ ಎಲ್ಲವನ್ನು ಬಿಟ್ಟುಕೊಟ್ಟು ಸನ್ಯಾಸ ಜೀವನ ಸಾಗಿಸುತ್ತ ಹೊಸದಾಗಿ ಉದ್ಭವವಾಗಿರುವ ಶಾಂತಿಯ ಧರ್ಮ ಪಾಲಿಸುತ್ತ ಕಾಡಲ್ಲಿ ಬದುಕಿ ಬಿಡಬಹುದು. ಅವನು ಏನು ಮಾಡುತ್ತಾನೋ ಅವನಿಗೆ ಬಿಟ್ಟದ್ದು, ಯಾವುದೂ ಮಹತ್ವದ್ದಲ್ಲ. ಹಾಗೆ ನೋಡಿದರೆ ಎಲ್ಲವನ್ನೂ ತ್ಯಾಗ ಮಾಡಿ ಸನ್ಯಾಸ ಜೀವನ ನಡೆಸುವುದೇ ಒಳ್ಳೆಯದೇ; ಏಕೆಂದರೆ ಅದರಿಂದ ಅವನ ಮನದ ಮೇಲೆ ಸವಾರಿ

ಮಾಡುತ್ತಿರುವ ಹಳೆಯ ಧರ್ಮದ ಪ್ರವೃತ್ತಿಗಳು, ಸಂಸ್ಕಾರಗಳು ಬೇಗನೇ ಅಳಿದು ಹೋಗಿ ಬಿಡುವುದು; ಶರೀರಾವಸಾನದ ನಂತರ ಅವನು ನೇರವಾಗಿ ನಿರ್ಗುಣ ನಿರಾಕಾರ ಅನಂತನಲ್ಲಿ ಹೋಗಿ ಸೇರಿ ಬಿಡುವುನು, ಪುನಃ ಹಿಂತಿರುಗಿ ಬರುವ ಅಗತ್ಯವಿಲ್ಲದಾಗಿ ಈ ಅನಿತ್ಯಂ ಅಸುಖಂ ಇಮಂ ಲೋಕದಿಂದ ಶಾಶ್ವತವಾಗಿ ನಿರ್ಗಮಿಸಿಬಿಡುವುನು. ಈ ರೀತಿ ವಿಚಾರ ಮಾಡುವುದಾದರೆ ಹಾಗೂ ಈ ರೀತಿ ಮಾಡುವುದಾದರೆ ಗೀತೆಗೆ ಅರ್ಥವೇ ಇಲ್ಲ. ಅದರ ಮುಖ್ಯ ಉದ್ದೇಶವೇ ಸೋತು ಹೋಗಿಬಿಡುವುದು. ಆದರೆ ಗೀತೆಯು ಹಾಗೆ ಮಾಡದೇ, ಕರ್ಮದ ಪ್ರಕಾರವನ್ನು ಮುಖ್ಯವಾಗಿ ಪರಿಗಣಿಸುವುದಿಲ್ಲ, ಗೀತೆಯು ಸದಾ ಕರ್ಮ ಮಾಡುತ್ತಲೇ ಇರಬೇಕು ಎಂದೇ ಬೋಧಿಸುತ್ತದೆ. ಕೇವಲ ನಿಷೇಧಾತ್ಮಕ ಕರ್ಮ ಮಾಡಬಾರದು, ಯಾಂತ್ರಿಕವಾದ ರೀತಿಯಲ್ಲಿ ಗೊತ್ತು ಗುರಿಯಿಲ್ಲದೇ ಕರ್ಮ ಮಾಡಬಾರದು ಎಂದು ಹೇಳದೇ ಕೌಶಲ್ಯ ಪೂರ್ವಕವಾಗಿಯೇ ಕರ್ಮ ಮಾಡಲು ಅದು ಬೋಧಿಸುತ್ತದೆ. ಅಹಂಕಾರವನ್ನು ಸಂಪೂರ್ಣವಾಗಿ ಗೆದ್ದ ಮೇಲೂ ಸಹ, ಭೋಕ್ತಾರಂ ಯಜ್ಞ ತಪಸಾಂ ಅಂದರೆ ಯಜ್ಞದ ಭೋಕ್ತಾರೂ ಪ್ರಭುವೂ ಆದ ಭಗವಂತನು ಮಾತ್ರ ಉಪಸ್ಥಿತನಾಗಿರುತ್ತಾನೆ. ಹೀಗಾಗಿ ಯಜ್ಞದ ಕಾರಣ, ಪ್ರೇರಣೆ, ಉದ್ದೇಶ, ಗುರಿ ಇದ್ದೇ ಇರುತ್ತದೆ. ನಿರಾಕಾರ ಬ್ರಹ್ಮನೇ ಅತ್ಯುಚ್ಚ ಸ್ಥಿತಿ ಅಲ್ಲ, ನಮ್ಮ ಸತ್ತೆಯ ಅತ್ಯಂತ ಉನ್ನತ ಶ್ರೇಷ್ಠ ರಹಸ್ಯವೂ ಅಲ್ಲ, ಏಕೆಂದರೆ ನಿರಾಕಾರ ಮತ್ತು ಆಕಾರ, ನಿರ್ಗುಣ ಮತ್ತು ಸಗುಣ, ಸಾಂತ ಮತ್ತು ಅನಂತ ಇವು ಕೇವಲ ವಿರುದ್ಧ ಗುಣಗಳಷ್ಟೇ, ಆದರೆ ಅವು ಪುರುಷೋತ್ತಮನ ಪೂರಕ ಮುಖಗಳು, ಪೂರಕ ಗುಣಗಳು – ಪರಮ ಪುರುಷೋತ್ತಮನು ಸೀಮಾತೀತವಾಗಿದ್ದು ಅವನಿಗೆ ಈ ಯಾವ ಭೇದಗಳು ಇರುವುದಿಲ್ಲ, ಅವನು ಏಕ ಕಾಲಕ್ಕೆ ಎಲ್ಲವೂ ಆಗಿರುವುನು – ಪರಮಾತ್ಮನೇ ಸದಾ ಅವ್ಯಕ್ತನಾದ ಅನಂತನೇ ನಿಜ. ಆದರೆ ಅವನು ನಿರಂತರ ಸಾಂತ ವ್ಯಕ್ತಿತ್ವದಲ್ಲಿ ಪ್ರಕಟವಾಗಲು ಆತ್ಮ ಪ್ರಚೋದಿತನಾಗಿರುತ್ತಾನೆ. ಅವನು ಮಹತ್ತಾಗಿರುವ ನಿರ್ವ್ಯೆಯಕ್ತಿಕ ನಿರ್ಗುಣ ಪುರುಷನಾಗಿದ್ದು ವಿಶ್ವದ ಸಮಸ್ತ ವ್ಯಕ್ತಿತ್ವಗಳೂ, ಸತ್ತೆಗಳೂ ಅವನ ಭಾಗಶಃ ತೋರಿಕೆಗಳೇ ಆಗಿವೆ. ಅವನು ದಿವ್ಯ ಪುರಷನೇ, ಆದರೆ ಎಲ್ಲ ಮಾನವ ಜೀವಿಗಳಲ್ಲಿ ಅವನೇ ಪ್ರಕಟನಾಗಿರುತ್ತಾನೆ. ಅವನು ಮಾನವರ ಹೃದಯದಲ್ಲಿ ಅಸೀನನಾಗಿರುವ ಪ್ರಭುವಾಗಿದ್ದಾನೆ. ಆದ್ದರಿಂದ ದೈವೀ ಜ್ಞಾನವು ಆ ಏಕೈಕ ನಿರ್ವ್ಯೆಯಕ್ತಿಕ ಸತ್ತೆಯಲ್ಲಿಯೇ ಸಕಲ ಜೀವ ರಾಶಿಗಳನ್ನು ಕಾಣುವಂತೆ

ಮಾಡುತ್ತದೆ. ಏಕೆಂದರೆ ನಾವಾಗ ಭೇದಾತ್ಮಕ ಅಹಂದಿಂದ ಬಿಡುಗಡೆ ಹೊಂದಿರುತ್ತೇವೆ. ಈ ನಿರ್ವ್ಯೆಯಕ್ತಿಕತೆಯಿಂದಾಗಿ ಪರಮಾತ್ಮನನ್ನು ಎಲ್ಲದರಲ್ಲೂ, ಎಲ್ಲೆಲ್ಲೂ ಕಾಣಲು ಸಾಧ್ಯವಾಗುತ್ತದೆ ಹಾಗೂ ಆತ್ಮನಿ ಅಥಾತೋ ಮಯಿ ಅಂದರೆ ಪರಮಾತ್ಮನನ್ನು ನಮ್ಮಲ್ಲೇ ಕಾಣಲು ಸಾಧ್ಯವಾಗುತ್ತದೆ. ನಮ್ಮ ಅಹಂ ಅಥವಾ ನಮ್ಮ ಸೀಮಿತವಾದ ವ್ಯಕ್ತಿತ್ವವು ಪರಮಾತ್ಮನನ್ನರಿತುಕೊಳ್ಳುವಲ್ಲಿ ಅಡ್ಡಿಯಾಗುತ್ತದೆ; ಪರಮಾತ್ಮ ಎಲ್ಲರಲ್ಲೂ, ಎಲ್ಲದರಲ್ಲೂ ಇದ್ದಾನೆ, ಎಲ್ಲವೂ ಅವನಲ್ಲೇ ಇವೆ ಎಂಬ ಅರಿವು ಮೂಡಲು ಇದೇ ಅಡ್ಡಿಯಾಗುವುದು. ನಾವು ನಮ್ಮ ಸೀಮಿತ ವ್ಯಕ್ತಿತ್ವಕ್ಕೆ ಬದ್ಧರಾಗಿರುವುದರಿಂದ ನಾವು ಪರಮಾತ್ಮನ್ನನು ಕೂಡ ಇಂಥ ವಿಭಜಿತ ಸಾಂತ ರೂಪದಲ್ಲಿಯೇ ಕಾಣುವುದು ಅನಿವಾರ್ಯವಾಗಿ ಬಿಡುವುದು; ಆಗ ನಮಗೆ ಅವನ ಸಮಗ್ರ ರೂಪದ ಅರಿವು ಆಗುವುದಿಲ್ಲ. ಆದ್ದರಿಂದ ನಾವು ಅವನನ್ನು ನಮ್ಮ ಈ ನಿಮ್ನ ವ್ಯಕ್ತಿತ್ವದ ಮೂಲಕ ಸಮೀಪಿಸಬಾರದು, ಬದಲಾಗಿ ನಮ್ಮ ಅಸ್ತಿತ್ವದ ಅಥವಾ ಸತ್ತೆಯ ಅನಂತ, ನಿರ್ವ್ಯೆಯಕ್ತಿಕ ಭಾಗದ ಮೂಲಕ ನೋಡಲು, ಸಮೀಪಿಸಲು ಯತ್ನಿಸಬೇಕು. ಆಗ ನಾವು "ಅವನು ಎಲ್ಲರಲ್ಲೂ ಇರುವ, ಅವನಲ್ಲಿಯೇ ಎಲ್ಲವೂ ಸಮಾಹಿತವಾಗಿರುವ" ಸತ್ಯವನ್ನರಿಯಲು ಸಮರ್ಥರಾಗುತ್ತೇವೆ. ಹೀಗೆ, ಯಾವ ಸಾಂತ, ಸೀಮಿತ ಗೋಚರ ಪ್ರಪಂಚವನ್ನು ಅಲ್ಲಗಳೆಯದೇ ಎಲ್ಲವನ್ನು ತನ್ನೊಳಗೆ ಒಳಗೊಂಡಿರುವ ಅನಂತವನ್ನು, ಯಾವ ವೈಯಕ್ತಿಕ ಹಾಗೂ ವ್ಯಕ್ತಿಗಳ ವ್ಯಕ್ತಿತ್ವವನ್ನು ನಿರಾಕರಿಸದೇ ಎಲ್ಲವನ್ನೂ ಒಳಗೊಳ್ಳುವ ನಿರ್ವ್ಯೆಯಕ್ತಿಕ ಸತ್ತೆಯನ್ನು, ಪ್ರಕೃತಿಯ ಯಾವ ಚಲನೆಯನ್ನು ತಿರಸ್ಕರಿಸದೇ ಎಲ್ಲವನ್ನೂ ವ್ಯಾಪಿಸಿರುವ, ಒಳಗೊಂಡಿರುವ ಎಲ್ಲಕ್ಕೂ ಆಧಾರವಾಗಿ ನಿಂತಿರುವ ನಿಶ್ಚಲ ತತ್ವವನ್ನು ಸಾಕ್ಷಾತ್ಕರಿಸಿಕೊಂಡರೆ ಅದೇ ಪರಮಾತ್ಮನನ್ನು ಇಡಿಯಾಗಿ ತೋರಿಸಬಲ್ಲ ನಿರ್ಮಲ ಕನ್ನಡಿಯಂತಾಗುವುದು ಎಂದು ಹೇಳಲಾಗುವುದು. ಆದ್ದರಿಂದ ನಾವು ಮೊದಲು ನಿರ್ವ್ಯೆಯಕ್ತಿಕ ಅಥವಾ ನಿರಾಕಾರ ತತ್ವವನ್ನು ಅರ್ಥಮಾಡಿಕೊಳ್ಳಬೇಕು. ಕೇವಲ ವಿಶ್ವ ದೇವತೆಗಳ ಮೂಲಕ ಅಥವಾ ಪ್ರಾಪಂಚಿಕ ಸಾಂತ ವಸ್ತುಗಳ ಅಧ್ಯಯನದ ಮೂಲಕ ಪರಮಾತ್ಮನ ಸಮಗ್ರ ಜ್ಞಾನ ಆಗುವುದು ಸಾಧ್ಯವೇ ಇಲ್ಲ. ಅದೇ ರೀತಿ, ನಿರ್ಗುಣ ನಿರಾಕಾರ ಆತ್ಮದ ನಿಶ್ಚಲ ತತ್ವದ ಮೂಲಕ ಜಗವನ್ನು ಧರಿಸಿರುವ, ಭರಿಸಿರುವ, ವ್ಯಾಪಿಸಿರುವ ಎಲ್ಲವನ್ನೂ ತ್ಯಜಿಸಿ, ಪರಮಾತ್ಮನ ಸರ್ವ ವ್ಯಾಪಿಯಾದ ಸರ್ವತೋಷಕವಾದ ಜ್ಞಾನವನ್ನು ಪಡೆಯಲೂ ಕೂಡ ಸಾಧ್ಯವಿಲ್ಲ. ನಾವು ಆತನ ಶಾಂತ, ಮೌನ ಸ್ವರೂಪದ

ಮೂಲಕ ಪುರುಷೋತ್ತಮನನ್ನು ಅರಿಯಬೇಕು; ಅವನು ತನ್ನ ದೈವಿಕತೆಯಿಂದಾಗಿ ಅಕ್ಷರ ಹಾಗೂ ಕ್ಷರ ಎರಡೂ ಸ್ಥಿತಿಗಳನ್ನು ಹೊಂದಿ, ನಿಶ್ಚಲನಾಗಿ ಅಚಲನಾಗಿ ಕುಳಿತು, ಪ್ರಕೃತಿಯ ಎಲ್ಲ ಚಲನೆಗಳಲ್ಲಿ, ಕಾರ್ಯಗಳಲ್ಲಿ ತಾನೇ ತನ್ನನ್ನು ಪ್ರಕಟಗೊಳಿಸಿಕೊಳ್ಳುತ್ತಾನೆ ಎಂಬ ಸತ್ಯವನ್ನು ಅರಿತುಕೊಳ್ಳಬೇಕು. ಅಂಥವನಿಗೆ ಮುಕ್ತಿಯಾದ ನಂತರವೂ ಸಹ ಪ್ರಕೃತಿಯಲ್ಲಿ ಮಾಡುವ ಎಲ್ಲ ಕರ್ಮಗಳನ್ನು ಯಜ್ಞದ ಮೂಲಕ ನಿರಂತರವಾಗಿ ಅರ್ಪಿಸಲಾಗುವುದು.

ಹಾಗಾದರೆ, ಯೋಗದ ನಿಜವಾದ ಅರ್ಥ ಹಾಗೂ ಸಾರ್ಥಕತೆ ಏನೆಂದರೆ, ಕೇವಲ ನಿರಾಕಾರ ನಿರ್ಗುಣ ಸತ್ತೆಯಲ್ಲಿ ಲೀನವಾಗಿ ಹೋಗಿ ಬಿಡುವುದಲ್ಲ. ಬದಲಾಗಿ ಪರುಷೋತ್ತಮನ ಜೊತೆಗೆ ಜೀವಂತ ಹಾಗೂ ಆತ್ಮ ಸಾರ್ಥಕತೆಯ ಏಕತೆಯನ್ನು ಸಾಧಿಸುವುದೇ ಆಗಿದೆ. ಆದ್ದರಿಂದ, ನಮ್ಮ ಸಮಗ್ರ ಅಸ್ತಿತ್ವವನ್ನು ಪರಮಾತ್ಮನ ಎತ್ತರಕ್ಕೆ ಎತ್ತರಿಸಬೇಕು, ಅವನಲ್ಲಿಯೇ ವಾಸ ಮಾಡಬೇಕು (ಮಯ್ಯೇವ ನಿವಸಿಶ್ಯಾತಿ), ಅವನ ಜೊತೆ ಏಕತೆ ಸಾಧಿಸುವುದು, ನಮ್ಮ ಪ್ರಜ್ಞೆಯನ್ನು ಅವನ ಪ್ರಜ್ಞೆಯ ಜೊತೆ ಒಂದಾಗಿಸುವುದು, ನಮ್ಮ ವಿಭಜಿತ ಪ್ರಕೃತಿ ಅಥವಾ ಸ್ವಭಾವವನ್ನು ಪರಮಾತ್ಮನ ಪರಿಪೂರ್ಣ ಪ್ರಕೃತಿಯ ಪ್ರತಿಬಿಂಬವನ್ನಾಗಿ ಮಾಡುವುದು, ನಮ್ಮ ವಿಚಾರ, ಆಲೋಚನೆ, ಸಂವೇದನೆ, ಅನಿಸಿಕೆ ಎಲ್ಲದರಲ್ಲೂ ಪರಮಾತ್ಮನ ಅಂತಃಪ್ರೇರಣೆಯನ್ನೇ ತುಂಬಿಸುವುದು, ಪರಮಾರ್ಥಿಕ ಜ್ಞಾನವನ್ನೇ ತುಂಬುವುದು, ನಮ್ಮೆಲ್ಲ ಚಲನೆ, ಕಾರ್ಯಗಳ ಹಿಂದೆ ದೈವೀ ಸಂಕಲ್ಪವನ್ನೇ ಆಧಾರವಾಗಿಟ್ಟುಕೊಳ್ಳುವುದು, ಅವನ ಆನಂದದಲ್ಲಿ, ಪ್ರೇಮದಲ್ಲಿ ತನ್ನೆಲ್ಲ ಆಶೆ–ಬಯಕೆಗಳನ್ನು ಕಳೆದುಕೊಂಡು ಬಿಡುವುದು, ಇದೇ ನಿಜವಾಗಿ ಮಾನವನ ಪರಿಪೂರ್ಣತೆಯಾಗಿರುವುದು. ಇದನ್ನೇ ಗೀತೆಯ ಪರಮ ಗೂಢ ರಹಸ್ಯವೆಂದು ವರ್ಣಿಸುತ್ತದೆ. ಇದೇ ನಿಜವಾದ ಧ್ಯೇಯ, ಗುರಿ; ಮಾನವನಾಗಿ, ಅವನ ಮಾನವೀಯ ಜೀವನದ ಸಾರ್ಥಕತೆ ಅಂದರೆ ಇದೇ ಆಗಿದೆ. ನಮ್ಮ ಕರ್ಮಗಳನ್ನು ಹೆಚ್ಚು ಹೆಚ್ಚಾಗಿ ಅವನಿಗೆ ಸಮರ್ಪಿಸುತ್ತ ಹೋಗುವುದರಲ್ಲೇ ನಮ್ಮ ಅಂತಿಮ ಸಿದ್ಧಿ ಅಡಗಿದೆ. ಏಕೆಂದರೆ ಪರಮಾತ್ಮನೇ ನಮ್ಮೆಲ್ಲ ಕರ್ಮಗಳ, ಚಲನೆಗಳ ಪ್ರಭುವಾಗಿದ್ದಾನೆ ಹಾಗೂ ಯಜ್ಞದ ಆತ್ಮವಾಗಿದ್ದಾನೆ.

(ಸಶೇಷ)

# ಶ್ರೀ ಅರವಿಂದರ ಕಾವ್ಯ
# "ಈಲಿಯನ್"

**– ಅನು: ಡಾ॥ ಬಿ.ಆರ್. ಭೀಡ್, ರಾಯಚೂರು**

## ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/7)

268–271. ಆದರೆ ಥ್ರಾಸಿಮೆಕಸ್ ಓಡಿಯೇ ಓಡಿದ. ಕಾಲ್ಗಳಲ್ಲಿ ದೇವತೆ (? ದೆವ್ವ) ಹೊಕ್ಕಂತೆ ಓಡುತ್ತ ಈಲಸ್ Ilus ತಲುಪಿದ. ಈಲಸ್ ತುಂಬ ಸುಂದರವಾದ ನಗರ. ತನ್ನ ಯೌವನದ ದಿನಗಳಲ್ಲಂತೂ ನೋಡಲು ಎರಡು ಕಣ್ಣು ಸಾಲವು ಅನ್ನುವಷ್ಟು ಸುಂದರವಾಗಿ ಕಟ್ಟಲ್ಪಟ್ಟಿದ್ದ ಪಟ್ಟಣ. ಕಣ್ಣಿಗೆ ಹಬ್ಬವಾಗಲೆಂಬ ಉದ್ದೇಶದಿಂದಲೇ ನಿರ್ಮಿಸಲ್ಪಟ್ಟ ಪಟ್ಟಣ ಅದು.

ಟ್ರಾಯ್ ಪ್ರದೇಶದ ಹೃದಯ ಭಾಗದಲ್ಲಿದ್ದ ನಗರ ಅದು. ಅಲ್ಲಿ ಯುದ್ಧಗಳಾದದ್ದೇ ಇಲ್ಲ ಅನ್ನುವಷ್ಟು ಕಡಿಮೆ. ಮತ್ತು ಟ್ರೋಜನರು ಸೋತದ್ದೇ ಇಲ್ಲ. ಹೀಗಾಗಿ ಆ ಪಟ್ಟಣದ ಸೌಂದರ್ಯಕ್ಕೆ ಧಕ್ಕೆಯೊದಗಿದ್ದೇ ಇಲ್ಲ. ಅನೇಕ ಸಾಮಂತ ರಾಷ್ಟ್ರಗಳು ಅದನ್ನು ತುಂಬ ಗೌರವದಿಂದಲೇ ಕಾಣುತ್ತಿದ್ದವು. (1/93)

271–278. ಆದರೆ ಆ ವೈಭವದ ದಿನಗಳು ಈಗ ಮುಗಿಯುತ್ತ ಬಂದಿದ್ದವು.

ತುಂಬ ಮುತುವರ್ಜಿ ವಹಿಸಿ ಕಟ್ಟಿದ ಆ ನಗರ, ಅದರ ಅತಿ ಸುಂದರ ಉದ್ಯಾನಗಳು, ಸುಂದರ ಬೀದಿಗಳು, ಅವುಗಳಲ್ಲಿ ಓಡಾಡಲು, ವಿಹರಿಸಲು ಜನಗಳೇ ಈಗ ದುರ್ಲಭವಾಗಿದ್ದರು.

ಯುದ್ಧದ ಸಮಯ, ಮೇಲಾಗಿ ಸೋಲುವ ದಿಕ್ಕಿನಲ್ಲಿ ಸಾಗಿದ ಅದೃಷ್ಟ. ಅಂಥದರಲ್ಲಿ ಯಾರು ವಿಹಾರ ಮಾಡಿಯಾರು? ಯಾರಿಗೆ ಮನಸ್ಸು ಬಂದೀತು?

ಅಲ್ಲಿ ಮಹಾಯೋಧ ಅಂಕಿಸಿಸ್ Anchises ತನ್ನ ವೃದ್ಧಾಪ್ಯದ ದಿನ ಕಳೆಯುತ್ತಿದ್ದ. ಹಳೆಯ ಅರಮನೆ, ಪೂರ್ವಿಕರು ವಾಸವಾಗಿದ್ದ ಸುಂದರ ಅರಮನೆ. ಅನೇಕ ಯುದ್ಧಗಳನ್ನು ಗೆದ್ದಿದ್ದ ಮಹಾ ಸಾಹಸಿ ಅಂಕಿಸಿಸ್ ಈಗ ಬದುಕಿನ ಸಂಜೆಯಲ್ಲಿದ್ದ. ಅಲ್ಲಿ ಆರಾಮಾಗಿ ಕಾಲ ಕಳೆಯುತ್ತಲಿದ್ದ.

ಟ್ರಾಯ್ ಪಟ್ಟಣವನ್ನು ಹಾಗೂ ಟ್ರೋಜನ್ ಸಾಮ್ರಾಜ್ಯ ಕಟ್ಟುವಲ್ಲಿ ಈಲಸ್ ಎಂಬ ಮಹಾ ಯೋಧ ಪ್ರಮುಖ ಪಾತ್ರ ವಹಿಸಿದ್ದ. ಈತನಿಗೂ ದೇವತೆ ಅಫ್ರೋಡೈಟ್ Aphroditeಗೂ ಯೌವನದ ದಿನಗಳಲ್ಲಿ ಸಂಬಂಧ ಇತ್ತು. ಇಡಾ Ida ಪರ್ವತದ

ಮೇಲೆ ವಾಸವಾಗಿದ್ದ ಅಫ್ರೋಡೈಟ್ ಹಾಲು ಮೈಬಣ್ಣದ ಸುರಸುಂದರಿ. ತನ್ನ ಮೋಹ ಪಾಶದಲ್ಲಿ ಈಕೆ ಅಂಕಿಸಿಸ್‌ನನ್ನು ಬಲವಾಗಿ ಬಂಧಿಸಿಬಿಟ್ಟಿದ್ದಳು. ಅಂಕಿಸಿಸ್ ಮೇಲೆ ಈಕೆಗೆ ಅಪಾರ ಪ್ರೇಮ. ಈ ದೇವಕನ್ಯೆ ತನ್ನ ದಿವ್ಯತ್ವವನ್ನು ಕಳೆದುಕೊಂಡು ಅಂಕಿಸಿಸ್‌ನನ್ನು ಕೂಡಿದ್ದಳು.

ಈಲಸ್‌ನ ತರುವಾಯ ಅವನ ಮಗ ಲಾವೋಮೇಡನ್ ಟ್ರಾಯ್ ರಾಜ್ಯವನ್ನು ಆಳಿದ. ಪ್ರಾಯಮ್ Priam ಟ್ರಾಯ್ ರಾಜ್ಯದ ಕೊನೆಯ ದೊರೆ. ಈತನ ಸಹೋದರ ಬುಕೋಲೀನ್ Bucoleon; ಅಂಕಿಸಿಸ್ ಈ ಬುಕೋಲೀನನ ಪುತ್ರ.

•ಒಂದು ಆಖ್ಯಾಯಿಕೆಯ ಪ್ರಕಾರ ಟ್ರಾಯ್ ಸಂಪೂರ್ಣ ನಾಶವಾದ ನಂತರ ಅಂಕಿಸಿಸ್‌ನ ಮಗ Aeneas ತಪ್ಪಿಸಿಕೊಂಡು ಪಲಾಯನ ಗೈದ. ಇವನೇ ಇಟಲಿಗೆ ಹೋಗಿ ರೋಮ್ ಸಾಮ್ರಾಜ್ಯವನ್ನು ಕಟ್ಟಿದನೆಂದು ಹೇಳಲಾಗುವುದು. (1.94)

278–281. ತ್ರಾಸಿಮೇಕಸ್ ದ್ವಾರದ ಹೊಸ್ತಿಲ ಬಳಿ ಸ್ವಲ್ಪ ಹೊತ್ತು ಕಾಯ್ದುನೋಡಿದ. ಯಾರಾದರೂ ಸೇವಕರಿದ್ದಾರೆಯೋ, ದ್ವಾರಪಾಲಕರಿದ್ದಾರೆಯೋ, ಯಾರಾದರೂ ಬರುತ್ತಾರೋ ಎಂದು ಕಾಯ್ದ. ಆದರೆ ಯಾರೂ ಬರಲಿಲ್ಲ. ಅಲ್ಲಿ ಕೇವಲ ಏಕಾಂತತೆ ಇತ್ತು, ನಿದ್ರೆಯ ಜಡತ್ವ ಇತ್ತು. felt only a loneness of slumber drawing the soul's sight within away from its life and all things human; ಎಂದು ವರ್ಣಿಸುವ ಮೂಲಕ ಗಾಢ ನಿದ್ರೆಯಲ್ಲಿ ಜನರು ಹೇಗೆ ಜಗವನ್ನು, ಜಗದ ಜಂಜಡವನ್ನು ಮರೆತು ಅಂತರ್ಮುಖಿಗಳಾಗಿರುತ್ತಾರೆ ಎಂಬುದನ್ನು ಬಹಳ ಸುಂದರವಾಗಿ ವಿವರಿಸಿದ್ದಾರೆ.

ಇಡೀ ಅರಮನೆ, ಹಜಾರ, ಆವಾರ ಬಿಕೋ ಅನ್ನುತ್ತಿತ್ತು. ಯಾರೂ ಇರಲಿಲ್ಲ, ಖಾಲಿ ಖಾಲಿ, ದೀಪಗಳೂ ಉರಿಯುತ್ತಿರಲಿಲ್ಲ. ಅಂಧಕಾರ ಮುತ್ತಿಕೊಂಡಿತ್ತು. (1.95)

282–288. ಅವನು ಜೋರಾಗಿ ಕೂಗಿದ: ಮನೆಯಲ್ಲಿ ಕವಿದ ಮಸುಕು ಬೆಳಕನ್ನು ಹಾಗೂ ಕನಸು ಕಾಣತ್ತಿದ್ದ ಉಪ್ಪರಿಗೆಗಳನ್ನು ತನ್ನ ಏರು ಧ್ವನಿಯ ಮೇಲೆ ನಂಬಿಕೆ ಇಟ್ಟು ಎಚ್ಚರಿಸಲು ಯತ್ನಿಸಿದನು. ಆದರೆ ಅವನೇನೂ ಬಹಳ ಪ್ರಯತ್ನಪಡಬೇಕಾಗಿ ಬರಲಿಲ್ಲ. ಕವಿದ ಮಬ್ಬುಗತ್ತಲೆ ಅಥವಾ ನಸುನಸು ಬೆಳಕನ್ನು ಸರಿಸಿ ಅಂಕಿಸಿಸ್‌ನ ಮಗ ಮಹಾಯೋಧ, ಬಲಶಾಲಿ, ವೀರ, ಧೈರ್ಯವಂತ, ಸಾಹಸಿ ಏನಿಯಸ್ ನಡೆದು ಬಂದ. ಅವನಾಗಲೇ ಸಿದ್ಧನಾಗಿಯೇ ಬಂದಿದ್ದ. ಶಸ್ತ್ರಾಸ್ತ್ರ, ಕವಚ ಧರಿಸಿಯೇ ಬಂದಿದ್ದ.

ಏನಿಸ್‌ನ ಹೆಂಡತಿ ಕ್ರೂಸಾ Creusa; ಈಕೆ ದೊರೆ ಪ್ರಯಾಮ್ ಹಾಗೂ ಹಿಕೂಬಾನ ಮಗಳು.

ಏನಿಸ್ ರಾತ್ರಿಯೆಲ್ಲ ಅಶಾಂತಿಯಿಂದ ನಿದ್ರೆ ಬಾರದೇ ಹೊರಳಾಡಿದ್ದನೇನೋ, ಬೆಳ್ಳಂಬೆಳಿಗ್ಗೆ ಪತ್ನಿಯ ಅಪ್ಪುಗೆಯಿಂದ ಬಿಡಿಸಿಕೊಂಡು ತಳಮಳಗೊಳ್ಳುತ್ತ ಸನ್ನದ್ಧನಾಗಿಯೇ ಕರೆಗಾಗಿ ಕಾದು ಕುಳಿತಿದ್ದನೆಂದು ಕಾಣುತ್ತದೆ.

ಅವನ ತಾಯಿ ಹಾಲು ಬಣ್ಣದ ಸುಂದರಿ ಅಫ್ರೋಡೈಟ್ ಅವನನ್ನು ಮೊದಲೇ ಎಚ್ಚರಿಸಿದ್ದಳೆಂದು ಕಾಣುತ್ತದೆ. ತ್ರಾಸಿಮ್ಯಾಕಸ್‌ನ ಕೂಗು ಕೇಳುತ್ತಲೇ ತಡಮಾಡದೇ ತಯಾರಾಗಿಯೇ ಹೊರಕ್ಕೆ ಬಂದ. (1.96)

289–291: ತ್ರಾಸಿಮಸ್ ಇನ್ನೂ ದಣಿವಾರಿಸಿಕೊಂಡಿರಲಿಲ್ಲ ಏದುಸಿರು ಬಿಡಿತ್ತಲೇ ಐನೀಸನಿಗೆ ನಮಸ್ಕಾರ ಮಾಡಿ ಹೇಳಿದ: ವೀರ ಯೋಧ ಐನೀಸ್ ತಡಮಾಡದೇ, ಶೀಘ್ರವಾಗಿ ನಡೆದು ಬೇಗನೇ ಈಲಿಯನ್ ಗುಡ್ಡದ ಮೇಲೆ ಬಂದು ಸೇರಬೇಕು. (1.97)

292–293. ಟ್ರೋಜನ್ ವೀರನೇ ಅವಸರಿಸು. (ಟ್ರೋಜನ್ ವೀರನನ್ನು Dardanid ಎಂದು ಇಲ್ಲಿ ಸಂಬೋಧಿಸಲಾಗಿದೆ; Dardan ಎಂದರೆ ಟ್ರಾಯ್ ರಾಜ್ಯ, ಅದು ಬಹು ಪುರಾತನ ಗ್ರೀಕರು ಕರೆಯುತ್ತಿದ್ದ ಹೆಸರು)

ಇದೆಲ್ಲ ಆ ದೇವತೆಗಳದೇ ಯೋಜನೆ, ಅವರದೇ ಆಟ. ಈ ದಿನ ಮುಂಜಾನೆಯಿಂದಲೇ ಅವರು ಕಾರ್ಯಾರಂಭ ಮಾಡಿದ್ದಾರೆ. ಇದು ನಮಗೆ ಅಪಾಯಕರ. (1.98)

293–294. ನಮ್ಮ ವಿನಾಶ ಸಮೀಪಿಸಿದೆ ಎಂದು ತೋರುತ್ತದೆ. ನಮ್ಮ ವಿಧಿಯ ಮೇಲೆ ಅವರ ಪ್ರತಾಡನ ಕಾಣುತ್ತಲಿದೆ. ಅವರ ಸುತ್ತಿಗೆಯ ಹೊಡೆತದ ಧ್ವನಿ ಕಿವಿಗಳ ಮೇಲೆ ಅಪ್ಪಳಿಸುತ್ತಲಿದೆ. (1.99)

295–297. ನಮಗೆ ಗೊತ್ತಾಗದ ಹಾಗೆ ಎಲ್ಲೋ ಅಜ್ಞಾತ ಜಾಗೆಯಲ್ಲಿ ಕುಳಿತು ಯಾರಿಗೂ ತಿಳಿಯದಂತೆ ಬಹು ಗುಟ್ಟಾಗಿ ಅವರು ಯೋಜನೆ ಹಾಕುತ್ತಾರೆ. ಒಳ್ಳೆಯದೋ ಕೆಟ್ಟದ್ದೋ ಅವರಿಗೇ ಗೊತ್ತು. ಎಲ್ಲವೂ ಅವರ ಕೈಯಲ್ಲಿದೆ. ಅವರು ಪ್ರಭುಗಳು, ಅವರ ನಿರ್ಧಾರವೇ ನಿರ್ಧಾರ. ಅವರಿಗೆ ಇದಿರಿಲ್ಲ. ಅವರು ದೇವತೆಗಳು, ಅವರ ಇಚ್ಛೆಯೇ ಇಚ್ಛೆ. ಅವರು ಆಡಿದ್ದೇ ಆಟ. (1.100)

298. ಟ್ರಾಯ್ ಇದೀಗ ಅವರ ಕ್ಷೇತ್ರ ಅರ್ಗೋಸ್ ಅವರ ಹಿನ್ನೆಲೆ. ನಾವು ಅವರ ಕೈಬೊಂಬೆಗಳು. (1.101)

299–300. ನಮ್ಮ ಮಾತುಗಳು ನಿಜವಾಗಿ ನಮ್ಮವಲ್ಲ. ಅವರು ನುಡಿಸಿದಂತೆ ನಾವು ಆಡುತ್ತೇವೆ. ಅದರ ಪರಿಣಾಮ ಏನಾಗುವುದೋ ನಮಗೆ ಗೊತ್ತಿಲ್ಲ. ನಾವು ಕೇವಲ ಮಾಧ್ಯಮ ಮಾತ್ರ. ನಾವೇ ಮಾಡುತ್ತೇವೆ, ಕಾರ್ಯ ಮಾಡುವುದು ನಾವೇ ತಾನೇ? ಅಲ್ಲ. ಅದು ಕೇವಲ ನಮ್ಮ ಭಾವನೆ. ಆದರೆ ನಮ್ಮಿಂದ ತಮಗೆ ಬೇಕಾದ ಕೆಲಸ ಮಾಡಿಸುವವರು ಆ ಕಾಣದ ದೇವತೆಗಳೇ! (1.102)

300–301. ನಮ್ಮ ಬಯಕೆ, ಹಂಬಲ, ನಮ್ಮ ವಿಚಾರ, ಆಲೋಚನೆ, ತರ್ಕ, ನಮ್ಮ ಸಹಜ ಪ್ರವೃತ್ತಿ, ನಮ್ಮ ಕಾರ್ಯ ಎಲ್ಲವೂ ಕೇವಲ ಯಂತ್ರಗಳು, ನಡೆಸುವವರು ಮಾತ್ರ ದೇವತೆಗಳೇ! ನಮ್ಮ ಸಂಕಲ್ಪ ಕೂಡ ಅವರ ನೆರಳಿನಿಂದ ಪ್ರೇರಿತ, ಅವರ ಕಾರ್ಯದಲ್ಲಿ ಅದು ಸಹಯೋಗಿಯ ಹಾಗೆ. (1.103)

302–304. "ಈಗಲೂ ಸಹ ಅದೇ ಸ್ಥಿತಿ, ಏನೂ ಬದಲಾಗಿಲ್ಲ. ಮರಣಾಧೀನರಾದ ಮರ್ತ್ಯ ಮಾನವರ ಯೋಜನೆಯ ಒಳಗೆ ನಿಂತು ಕೆಲಸ ಮಾಡುತ್ತಿರುವವರು ಅವರೇ. ಅವರೊಂದು ನಿಶ್ಚಿತ ಉದ್ದೇಶದಿಂದ ಹೀಗೆ ಮಾಡುತ್ತಿದ್ದಾರೆನಿಸುತ್ತದೆ; ಅದು ನಿಜವಾಗಿ ಅಪಾಯಕಾರಿ, ವಿನಾಶಕಾರಿಯಾಗಿದೆ. ಗ್ರೀಕ್ ಪಡೆಯ ಯೋಧರ Grecian leaguer ರೂಪದ ಬಿಲ್ಲು ಹೂಡಿ ನಮ್ಮ ಮೇಲೆ ಬಾಣ ಬಿಡುತ್ತಿದ್ದಾರೆ. ಕುದುರೆಗಳೇನೋ ಗ್ರೀಕರದಿರಬಹುದು ಆದರೆ ಅವುಗಳನ್ನು ಓಡಿಸುತ್ತ ಬರುತ್ತಿರುವವರು ಅವರೇ ಅನಿಸುತ್ತದೆ!

ಆಕಿಲಿಸ್‌ನ ಕಡೆಯಿಂದ ಈಗ ಟಾಲ್ಥೀಬಿಯಸ್ ಬಂದಿದ್ದಾನೆ"

●ಶ್ರೀ ಅರವಿಂದರು ಈಲಿಯನ್ ಕಾವ್ಯದಲ್ಲಿ ದೇವತೆಗಳ ನಿಗೂಢ ಕಾರ್ಯವನ್ನು, ಅವರ ರಹಸ್ಯ ಉದ್ದೇಶವನ್ನು ಈ ರೀತಿ ವರ್ಣಿಸಿದ್ದಾರೆ; ನಿಜವಾಗಿ ಇದು ಗ್ರೀಕ್ ಸಂಸ್ಕೃತಿಯ ನಂಬಿಕೆ ಹಾಗೂ ಪರಿಕಲ್ಪನೆ. ಮಾನವರು ಕೇವಲ ಕೈಬೊಂಬೆಗಳಂತೆ, ಆಟವೆಲ್ಲವೂ ದೇವತೆಗಳದು. ನಮ್ಮ ಕಣ್ಣಿಗೆ ಕಾಣದಂತೆ ಹಿಂಭಾಗದಲ್ಲಿ ನಿಂತು ದೇವತೆಗಳೆಂಬ ನಿರ್ವ್ಯಕ್ತಿಕ ಅಥವಾ ನಿರ್ಗುಣ ಶಕ್ತಿಗಳು ಕಾರ್ಯಮಾಡುತ್ತವೆ. ಮಾನವನು ತನ್ನನ್ನು ತಾನು ಮೀರಿ ಬೆಳೆಯದಿರುವವರೆಗೆ ಇದೇ ರೀತಿಯ ನಾಟಕ ನಡೆಯುವುದು. ಬಹು ಸುಂದರವಾದ irony ನಾವಿಲ್ಲಿ ಕಾಣುತ್ತೇವೆ.

(ಸಶೇಷ)

# ಅಪ್ರಾಪ್ಯದಾಪ್ತ ಕರೆ

**– ಅನು: ಪುಟ್ಟು ಕುಲಕರ್ಣಿ**

ಸಂಚಲನಕಿಳಿಸಿ ಅವ್ಯಕ್ತ ವಿಷಯದೆಡೆಗೆಮ್ಮ ದೇವಕಣವೊಂದು.
ಸುವ್ಯಾಪ್ತಗಳಲಿ ಆಯಾಮಗೊಂಡ ಗಮ್ಯದಲಿ ತಾ ಸುಪ್ತಿಯಲ್ಲಿರುವ,
ಶಾಂತಘನಕಿರುವ ಮರ್ಮರದ ರೆಕ್ಕೆ–ರಕ್ಷೆಯಲಿ ಸ್ಥಿತದ ವಾಣಿಯೊಂದು
ಆಶ್ರಯವ ನೀಡಿ ಅವುಗಳಾ ಶಿಷ್ಟ–ಸಂಭವನಗೊಳದ ತತ್ತ್ವ ಭಾವ.

ಆದರಿದೋ ವಿಪ್ರಲಂಭವದು ನೀಲ–ಚಿದ್ಗಗನ ದ್ವಾರಗಳ ಕಂಪಗೊಳಿಸಿ;
ಅಚ್ಚರಿಯ–ದೀಪ್ತಿಗಳು, ನಮ್ಮ ನಿಮಿಲೀತ–ಚಕ್ಷುಗಳಲಿ ಮಿನುಗಿ,
ಅಭಿಮಾನಪೂರ್ಣ ದೇವಗಡಣ ಜೊತೆ ಅದ್ಭುತದ ಭಾಗ್ಯ, ನಾವು ಧರಿಸಿ;
ಸರ್ವ–ದೃಷ್ಟಿಗಳು ಜೊತೆಗೆ ಸ್ಪರ್ಶಗಳು ನಂದನದ ವನಕೆ ಸನಿಹವಾಗಿ.

ಏನಿದುವು ಕಾಂತಿ ಊರ್ಧ್ವದಲಿ ಇದೋ, ನಮ್ಮೆದೆಯ ತಮವು ಕಾದು;
ಅಪ್ರಾಪ್ಯವಿರುವ ಆನಂದವಿದುವು ನಮ್ಮ ಭವಿತವ್ಯದಾಜನ್ಮಸಿದ್ಧ ಹಕ್ಕು.
ಮಂದ–ಸ್ಪಂದದಾ ನಮ್ಮ ಆತ್ಮಗಳ ಸೌಂದರ್ಯ ಸಾನುರಾಗದಲಿ ವೃದ್ಧಿ,
ಅನಂತಾನಂತ ಸುವ್ಯಾಪ್ತಕೀಗಿದೋ ನಾವುತ್ತರಾಧಿಕಾರಿಯಾಗಿ.

ಅಪ್ರಾಪ್ಯವಿದು ಈಗ, ನಮ್ಮ ವಿಷಯ–ವಸ್ತುವಿನ ಮುಖಗವಸು ಇದ್ದರೂನು
ಅಮರತ್ವಕಿದುವು ದ್ವಾರ ತಾನಾಗಿ ಮೃಣ್ಮಯದ ಮರ್ತ್ಯ–ಜೀವ ತಾನು.

---

**ಟಿಪ್ಪಣಿ:**

ಯೋಗಾಭ್ಯಾಸದ ಪ್ರಾರಂಭದ ಅವಧಿಯಲ್ಲಿ, 'ಇದು ಸಾಧ್ಯವೇ ಇಲ್ಲವೇನೋ' ಎನ್ನುವ ಹಂತವಿರುತ್ತದೆ. ಆದರೆ ಸತತ ಸಾಧನೆಯಲ್ಲಿ ಲಭ್ಯವಾಗಿ, ಪ್ರತ್ಯಕ್ಷಾನುಭಾವಕ್ಕೂ ಕಾಣುವ ಹಂತವೊಂದು ಇದ್ದೇ ಇದೆ. ಇದರ ವಿವರ ಮತ್ತು ಹಂತಗಳನ್ನು ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ ನಿರೂಪಿಸಿದ್ದಾರೆ.

'ದಿವ್ಯಾಗ್ನಿಯೊಂದು ತಾನುದಿತಗೊಂಡು ಅನಂತಾನಂತದಿಂದು,
ವಿಜ್ಞಾನಘನದ ಬೃಹದ್–ಸತ್ತೆಯದು ಆದರಿಸಿ ಜಗವನಿಂದು
ಸರ್ವಜ್ಞವಲಯದಾ ದೂರದಲ್ಲಿ ಉತ್ತರಣಗೊಳಲು ಅಲ್ಲಿ
ಚಿನ್ಮಯದ ಜ್ಯೋತಿ ನಿರ್ಮಾಯ ಶಾಂತದಾರ್ಣವದ ಸರಣಿಯಲ್ಲಿ

ತನ್ಮಯದ ಸ್ಪಂದ–ನಾದದಲಿ–ಛಂದದೇಕಾಂತ ಭಾವದಲ್ಲಿ
ಉಜ್ವಲದ ದ್ಯುತಿಯ ಘನಸಾಂದ್ರದೆದೆಯ ಸ್ಪಂದದಲಿ ತೇಲಿ ತೇಲಿ
ಆ ಅಂತರಾಳದಾ ಹೃದಯಪದ್ಮ ತಾನಾಗ ಕಾಂತಿಗೊಳಲು
ಜೊತೆಜೊತೆಗೆ ಸರ್ವ–ವಸ್ತು–ವಿಷಯಗಳು ನಿತ್ಯದಲಿ ಬೆಳಗುಗೊಳಲು.'

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ಸಾವಿತ್ರಿ; ದಳ 2 ರೇಣು 10 ಪುಟ 258)**

## ಆತ್ಮ ಸಮರ್ಪಣೆ

**– ಅನು: ಪುಟ್ಟು ಕುಲಕರ್ಣಿ**

ಓ ನೀನೆ ನೀನು, ನಾನಾರಿಗೀಗ ಉಪಕರಣವಾಗಿ ನಿಂದೆ
ಓ ಗುಹ್ಯ–ಪರಮ ಆತ್ಮಜ್ಯೋತಿ ಜೊತೆ ಪ್ರಕೃತಿ ನೆಲೆಯಲಿಂದೆ,
ನನ್ನ ಮೃಣ್ಮಯದ – ಸರ್ವ, ಸಮ್ಮಿಲನಗೊಳಲೆನಗೆ ಈಗ ಹರಸು
ನಿನ್ನದೇ ಚಿರದ ದಿವ್ಯತೆಯ–ಭವ್ಯ ಶೋಭಾಯದೊಳಗೆ ಇರಿಸು.

ಸಲ್ಲಿಸಿಹೆ ನನ್ನ ಸಂಕಲ್ಪವನ್ನು ನಿನ್ನಿಚ್ಛೆಯಂತೆ ಇರಲು
ಅರ್ಪಿಸಿದೆ ನನ್ನ ಮನವನ್ನು ನಿನ್ನ ಚಿದ್ರೂಪ ನಾಲೆಗೊಳಲು;
ನನ್ನದೆನ್ನುವದ ಏನೊಂದ ಹಿಂದೆ ನೀನುಳಿಸಬೇಡ ಹೀಗೆ
ಅನಿರ್ವಚನೀಯ ಜೊತೆಗೆ ಅತಿಗೂಢ ಈ ನಮ್ಮ ಯೋಗದೊಳಗೆ

ನಿನ್ನ ಪ್ರೇಮದಾ ವಿಶ್ವ–ಶ್ರುತಿಯೊಳಗೆ ನನ್ನೆದೆಯ ಮಿಡಿತವಿತ್ತು,
ನನ್ನ ದೇಹವಿದು ಯಂತ್ರ ತಾನಾಗಿ ನಿನಗೀಗ ಭವದ–ವಸ್ತು
ನನ್ನ ನರಗಳಲಿ ಮತ್ತೆ ಧಮನಿಯಲಿ ನಿನ ತೋಷ ಸಲಿಲ–ಉಲಿದು;
ನನ್ನ ಚಿಂತನದ ಕದಿರ–ಶೋಧದಲಿ ಬರಲೆನಗೆ ಶಕ್ತಿ ಇಳಿದು
ನಿತ್ಯತ್ವದೊಳಗೆ ನಿನ್ನ ಪೂಜಿಸಲು ನನ್ನಾತ್ಮ ಮಾತ್ರ ಉಳಿಸು
ನಿನ್ನದೇ ರೂಪು–ಜೊತೆ ಪ್ರಾಣಗಳಲಿ ನಿನ್ನನ್ನೆ ದರ್ಶಗೊಳಿಸು

**(ಶ್ರೀ ಅರವಿಂದರ ಕವನಗಳು; ಸಂಪುಟ 2:616)**

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 24ನೇ ಏಪ್ರಿಲ್ 2023 ಸೋಮವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಂಬಂಧ ಸಾಯಂಕಾಲ 5.00 ರಿಂದ 6.00 ಗಂಟೆಯವರಗೆ **"The Mother within Us"** ಎಂಬ ವಿಷಯವಾಗಿ ಡಾ॥ ನಾಗೇಂದ್ರ ಎನ್. ರವರು ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.

**"On Desires"** ವಿಷಯ ಕುರಿತು ದಿನಾಂಕ 10ನೇ ಏಪ್ರಿಲ್ 2023 ರಿಂದ 5ನೇ ಜೂನ್ 2023 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.



ಫೋಟೊ: ಇಮೇಜಿಂಗ್ ಸಾವಿತ್ರಿ

**ಆತ್ಮ ಸಮರ್ಪಣೆ (ಪುಟ 75)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಅಪ್ರಾಪ್ಯವಿದು ಈಗ, ನಮ್ಮ ವಿಷಯ–ವಸ್ತುವಿನ ಮುಖಗವಸು ಇದ್ದರೂನು
ಅಮರತ್ವಕಿದುವು ದ್ವಾರ ತಾನಾಗಿ ಮೃಣ್ಮಯದ ಮರ್ತ್ಯ–ಜೀವ ತಾನು.

**– ಪುಟ್ಟು ಕುಲಕರ್ಣಿ**
**ಅಪ್ರಾಪ್ಯದಾಪ್ತ ಕರೆ (ಪುಟ 74)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.